# ಅನ್ನಾವತಾರ

ತ. ರಾ. ಸು.

ಮಿತ್ರವೃಂದ ಪ್ರಕಾಶನ

ಮಿತ್ರವೃಂದ ಪ್ರಕಾಶನ,
ಕಾಸರಗೋಡು.

UNIVERSAL
LIBRARY
OU_200194
UNIVERSAL
LIBRARY

ಮಿ. ವೃ. ಪ್ರಕಾಶನ—೨.

# ಅನ್ನಾವತಾರ

(ರೇಡಿಯೋ ನಾಟಕ)

ತ. ರಾ. ಸು.

ಮಿತ್ರವೃಂದ ಪ್ರಕಾಶನ,
ಕಾಸರಗೋಡು, ದ. ಕ.

ಮೊದಲನೆಯ ಮುದ್ರಣ : ಏಪ್ರಿಲ್ ೧೯೫೪

ಎಲ್ಲ ಹಕ್ಕುಗಳು ಲೇಖಕರವು

ಬೆಲೆ : ಒಂದು ರೂಪಾಯಿ

ಮುದ್ರಕರು :
ಪರಿಮಳ ಪ್ರೆಸ್,
ನೂರಡಿರಸ್ತೆ, ಮೈಸೂರು

# ಮುನ್ನುಡಿ

'ಅನ್ನಾವತಾರ' ನನ್ನ ರೇಡಿಯೋ ನಾಟಕಗಳ ಎರಡನೆಯ ಸಂಕಲನ.

ರೇಡಿಯೋ ನಾಟಕಗಳು ಅಥವಾ ಪ್ರಸಾರ ನಾಟಕಗಳು ಕನ್ನಡ ಸಾಹಿತ್ಯದಲ್ಲಿ ಹೊಸ ಪ್ರಯೋಗ. ನಾಟಕಗಳಿಗೂ, ನಾಟಕದ ಪ್ರಕಾರಕ್ಕೇ ಸೇರುವ ಪ್ರಸಾರ ನಾಟಕಗಳಿಗೂ ಮೂಲಭೂತವಾದ ಹಲವಾರು ವ್ಯತ್ಯಾಸಗಳಿವೆ.

ಮುಖ್ಯವಾಗಿ ನಾಟಕಗಳಲ್ಲಿ ಇರಲೇಬೇಕಾದ ಕಾಲೈಕ್ಯ, ಸ್ಥಳೈಕ್ಯ, ಕ್ರಿಯೈಕ್ಯ ಮೊದಲಾದ ನಿಯಮಗಳು ಪ್ರಸಾರ ನಾಟಕಗಳಿಗೆ ಅನ್ವಯಿಸುವುದಿಲ್ಲ. ಅಲ್ಲದೆ ದೃಶ್ಯವಾದ ನಾಟಕಗಳಿಗೆ ಬೇಕಾಗುವ ರಂಗ, ದೀಪ, ಅಲಂಕಾರಗಳಾವೂ ಪ್ರಸಾರ ನಾಟಕಕ್ಕೆ ಬೇಕಾಗುವುದಿಲ್ಲ.

ರಂಗಭೂಮಿಯ ಮೇಲೆ ಅಭಿನಯಿಸಲ್ಪಡುವ ನಾಟಕಗಳಿಗೆ ಬೇಕಾಗುವ ಈ ಉಪಕರಣಗಳಾವೂ ಪ್ರಸಾರ ನಾಟಕಗಳಿಗೆ ಬೇಕಾಗದಿರುವುದು ಒಂದು ರೀತಿಯಲ್ಲಿ ಪ್ರಸಾರ ನಾಟಕಗಳ ಪಾಲಿಗೆ ಅನುಕೂಲವಾಗಿದ್ದರೂ, ಮತ್ತೊಂದು ದೃಷ್ಟಿಯಲ್ಲಿ ಅದು ಈ ಬಗೆಯ ನಾಟಕಗಳಿಗೆ ಒಂದು ಬಗೆಯ ದುರ್ಬಲತೆಯನ್ನು ತಂದುಕೊಟ್ಟಿದೆ. ರಂಗಭೂಮಿಯ ಮೇಲೆ ನಾವು ಕೊಡುವ ನಾಟಕ ನಾಟಕವಾಗಿ ದುರ್ಬಲವಾಗಿದ್ದರೂ, ನಟರ ಅಭಿನಯ ಚಾತುರ್ಯ, ರಂಗೋಪಕರಣಗಳ ನೆರವಿನಿಂದ ಅದನ್ನು ಕಳೆಕಟ್ಟಿಸುವುದು ಸಾಧ್ಯ. ಆದರೆ ಪ್ರಸಾರ ನಾಟಕಗಳಿಗೆ, ದೃಶ್ಯನಾಟಕಗಳಿಗಿರುವ ಈ ಅನುಕೂಲವಿಲ್ಲ. ಆದುದರಿಂದ ಇದರ ಸಾಹಿತ್ಯ, ಬೇರಾವ ಸಾಧನಗಳೂ ಇಲ್ಲದೆ, ಅಗತ್ಯವಾದ ಪರಿಣಾಮವನ್ನು ಮೂಡಿಸುವಷ್ಟು ಪ್ರಭಾವಶಾಲಿಯಾಗಿರಬೇಕು. ಇಲ್ಲವಾದಲ್ಲಿ ಇದು ವಿಫಲವಾಗುವುದು.

ಎರಡನೆಯದಾಗಿ ಕಾಲಪರಿಮಿತಿಯ ಪ್ರಶ್ನೆ. ರಂಗಭೂಮಿಯ ನಾಟಕಗಳಿಗೆ ಮೂಲತಃ ಸುಮಾರು ಎರಡು - ಮೂರು ಗಂಟೆಗಳ ಕಾಲ

ಪರಿಮಿತಿಯಿರುತ್ತದೆ. ಬಹಳ ಚಿಕ್ಕದೆನ್ನುವ ಏಕಾಂಕ ನಾಟಕವೂ ಒಂದು ಗಂಟೆಯ ಕಾಲ ನಡೆಯಬಹುದು. ಒಂದು ವೇಳೆ, ಒಂದು ಗಂಟೆಯ ಹೊತ್ತಿಗೆಂದೇ ರಚಿತವಾದ ನಾಟಕ ಆ ವೇಳೆಯನ್ನು ಆಕ್ರಮಿಸಿ ನಡೆದರೂ ಪ್ರೇಕ್ಷಕರಲ್ಲಿ ತಾಳ್ಮೆಯನ್ನು ಉಳಿಸಬಲ್ಲುದಾದರೆ, ನಡೆಯಲು ಅವಕಾಶವಿದೆ. ಆದರೆ ಪ್ರಸಾರ ನಾಟಕಗಳಿಗೆ ಈ ಅವಕಾಶವಿಲ್ಲ. ಕಾಲು ಗಂಟೆ, ಅರ್ಧ ಗಂಟೆ, ಹೆಚ್ಚೆಂದರೆ ಮುಕ್ಕಾಲು ಗಂಟೆಯ ಖಚಿತ ಕಾಲಾವಧಿಯೊಳಗಾಗಿ, ಗೊತ್ತುಮಾಡಲ್ಪಟ್ಟಷ್ಟು ಕಾಲದಲ್ಲಿ ಇದು ಮುಗಿಯಲೇ ಬೇಕು ಇಲ್ಲಿ ಯಾವುದೇ ಕಾರಣದಿಂದಾಗಿಯೂ ಕಾಲ ಮಿತಿಯನ್ನು ಅತಿಕ್ರಮಿಸಲು ಸಾಧ್ಯವೇ ಇಲ್ಲ; ಅರ್ಧ ನಿಮಿಷದಷ್ಟು ಕಾಲವೂ ಹೆಚ್ಚಾಗಲು ಅವಕಾಶವಿಲ್ಲ. ಆದುದರಿಂದಾಗಿ, ಪ್ರಸಾರ ನಾಟಕ ದಲ್ಲಿ ಬರುವ ಸಂಗೀತ, ಸಂಭಾಷಣೆ ಎಲ್ಲವೂ ಕ್ಷಣಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಸೃಷ್ಟಿಯಾಗಬೇಕು

ಅಲ್ಲದೆ—ನೋಡುವ ನಾಟಕವನ್ನು ನೋಡುವ ಪ್ರೇಕ್ಷಕರಿಗೆ, ನಟರ ಮುಖ, ಹಾವಭಾವ, ರಂಗಸಿದ್ಧತೆಗಳನ್ನು ಕಣ್ಣಾರೆ ಕೊಡುವ ಅವಕಾಶ ವಿರುವುದರಿಂದ ಅವರ ಕಣ್ಣು ಕಿವಿಗಳೆರಡೂ ಏಕಕಾಲದಲ್ಲಿ ಕೆಲಸಮಾಡು ತ್ತಿರುವುದರಿಂದು ಎರಡೂ ಅಷ್ಟು ಎಚ್ಚರವಾಗಿರುವುದಿಲ್ಲ. ಆದುದರಿಂದ ಎಲ್ಲ ಕೊಂಚ ಹೆಚ್ಚು ಕಡಮೆಯಾದರೂ ತೂಗಿಸಿಕೊಂಡು ಹೋಗ ಬಹುದು. ಆದರೆ ಪ್ರಸಾರ ನಾಟಕಗಳ ಪರಿಣಾಮ ಕೇವಲ ಕಿವಿಯ ಮೇಲಾದುದರಿಂದ, ಶ್ರೋತೃವಿನ ಚಿತ್ತ ಏಕ ಮುಖವಾಗಿ ಬಹು ಚುರು ಕಾಗಿರುತ್ತದೆ. ಹೀಗಿರುವಾಗ, ಒಂದು ತಪ್ಪು ಮಾತು, ಒಂದು ಅಪಶಬ್ದ, ಕ್ಷಣಕಾಲದ ಅನಗತ್ಯಸಂಗೀತ, ಉದ್ದೇಶವನ್ನು ಭಂಗ ಮಾಡಿಬಿಡುತ್ತದೆ. ಅರಮನೆಯೋ ಬೀದಿಯೋ, ಉದ್ಯಾನವೋ ಕಡಲ ಬದಿಯೋ, ಆಧುನಿಕ ಕಾಲವೋ ಪ್ರಾಚೀನಕಾಲವೋ, ನಗರವೋ ಗ್ರಾಮವೋ; ಹಗಲೋ ಇರುಳೋ— ಎಲ್ಲ ವಾತಾವರಣವನ್ನು ಕೇವಲ ಶಬ್ದರೂಪವಾಗಿಯೇ ಧ್ವನಿಸಬೇಕಾಗಿರುವುದರಿಂದ, ಅಂಥ ಸಂದರ್ಭಗಳಲ್ಲಿ ಅತ್ಯುತ್ತಮ ' ಶಬ್ದ-

ಪರಿಣಾಮ (Sound effects)ಗಳ ಬೆಂಬಲವಿಲ್ಲದಿದ್ದಲ್ಲಿಯೂ ಪ್ರಸಾರ ನಾಟಕ ವಿಫಲವಾಗುವುದ. ಅಲ್ಪಕಾಲ ಪರಿಮಿತಿಯಲ್ಲಿ ಅತ್ಯಂತ ವೇಗವಾಗಿ ಚಲನೆಯಾಗುವ ಪ್ರಸಾರನಾಟಕಗಳಲ್ಲಿ ಸಂಭಾಷಣೆ, ಸಂಗೀತ, ಶಬ್ದ-ಪರಿಣಾಮ ಗಳು ಬಹು ಖಚಿತವಾಗಿ ಸಮನ್ವಯವಾಗಬೇಕು. ಈ ಮೂರು ಅಂಗಗಳಲ್ಲಿ ಯಾವುದು ದುರ್ಬಲವಾದರೂ, ನಾಟಕಕ್ಕೆ ಸೋಲು ಕಟ್ಟಿಟ್ಟ ಬುತ್ತಿ.

ಇನ್ನೊಂದು ಮಾತು— ದೃಶ್ಯ ನಾಟಕ ಮೂರು ನಾಲ್ಕು ಗಂಟೆಯ ಅವಧಿಯಾದರೂ, ಅಲ್ಲಿ ಹಲವಿಧವಾದ ಆಕರ್ಷಣೆಗಳಿಂದಾಗಿ ಚಿತ್ತಕ್ಕೆ ಬೇಸರವಾಗುವುದಿಲ್ಲ. ಆದರೆ ಶುದ್ಧ ಶ್ರವ್ಯವಾದ ಪ್ರಸಾರ ನಾಟಕದಲ್ಲಿ ಕಿವಿಯೊಂದೇ ಉಳಿದೆಲ್ಲ ಇಂದ್ರಿಯಗಳ ಕೆಲಸವನ್ನು ಮಾಡಬೇಕಾಗಿರುವುದರಿಂದಾಗಿ, ಬುದ್ಧಿಗೆ ಹೆಚ್ಚು ಏಕಾಗ್ರಚಿತ್ತತೆ ಅಗತ್ಯವಾಗಿ, ಅದು ಬಹು ಬೇಗ ಬಳಲುತ್ತದೆ. ಆದ್ದರಿಂದ ಪ್ರಸಾರ ನಾಟಕ ಯಶಸ್ವಿಯಾಗಬೇಕಾದರೆ, ಅದು ಬುದ್ಧಿ ಬಳಲುವುದರೊಳಗಾಗಿ ಮುಗಿದು ಹೋಗಬೇಕು.

ಪ್ರಸಾರ ನಾಟಕವನ್ನು ಬರೆಯುವ ಲೇಖಕ ಬಹು ಮುಖ್ಯವಾಗಿ ಈ ಮಾತನ್ನು ಗಮನದಲ್ಲಿಟ್ಟುಕೊಂಡು ನಾಟಕ ರಚನೆ ಮಾಡಬೇಕು. ಪ್ರಸಾರಗಳಲ್ಲಿ ಬರುವ ಸಂಭಾಷಣೆಗಳು ಮಿಂಚಿನಂತೆ ಚುರುಕಾಗಿರಬೇಕು; ಮಾತುಗಳು ಕಿವಿ ಸೋಕಿದೊಡನೆಯೇ ಚಿತ್ತದ ಮೇಲೆ ನಿರ್ದಿಷ್ಟ ಪರಿಣಾಮವನ್ನುಂಟುಮಾಡುವಷ್ಟು ಶಕ್ತಿಶಾಲಿಯಾಗಿರಬೇಕು ಕೇವಲ ಶಬ್ದ ವ್ಯಾಮೋಹದಿಂದ, ಶಬ್ದಗಳ ಮೇಲೆ ದೊಂಬರಾಟವಾಡಲು ಇಲ್ಲಿ ಎಳ್ಳುಕಾಳು, ಚುಚ್ಚುಮೊನೆಯಷ್ಟು ಅವಕಾಶವಿಲ್ಲ.

ಈ ವಿಷಯದಲ್ಲಿ ಪ್ರಸಾರ ನಾಟಕದ ಲೇಖಕ ಎಷ್ಟು ಎಚ್ಚರವಾಗಿದ್ದರೂ ಸಾಲದು, ಶಬ್ದಸಿದ್ಧಿ ಆತನಿಗಿರಬೇಕಾದ ಅತ್ಯಗತ್ಯ ಶಕ್ತಿ. ಅದಿಲ್ಲದವನು ಉತ್ತಮ ಪ್ರಸಾರ ನಾಟಕಕಾರನಾಗುವುದು ಸಾಧ್ಯವಿಲ್ಲ.

ಹಾಗೆಂದು ಬರೀ ಶಬ್ದ ಸಿದ್ಧಿ ಇದ್ದ ಮಾತ್ರಕ್ಕೇ ಉತ್ತಮ ಪ್ರಸಾರ ನಾಟಕಕಾರನಾಗುವುದೂ ಸಾಧ್ಯವಿಲ್ಲ. ಶಬ್ದ ಸಿದ್ಧಿಯೊಂದಿಗೆ ಆತನಿಗ

ಪ್ರಸಾರದ ತಾಂತ್ರಿಕ ಸ್ವರೂಪ (Technical aspects)ನ ಸಂಪೂರ್ಣ ಪರಿಚಯವಿರಬೇಕು. ರಂಗಭೂಮಿಯ ಮೇಲೆ ಅಭಿನಯವಾಗುವ ನಾಟಕವನ್ನು ಬರೆಯುವವನು, ಆ ಮಾಧ್ಯಮದ ಶಕ್ತಿ ದುರ್ಬಲತೆಗಳನ್ನು ಪರಿಚಯಮಾಡಿಕೊಂಡು, ದೃಶ್ಯ ಬದಲಾವಣೆ, ನಟರ ಅಲಂಕಾರ ಬದಲಾವಣೆ, ಓಡಾಟ ಮೊದಲಾದುವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ತನ್ನ ನಾಟಕದಲ್ಲಿ ದೃಶ್ಯ ಯೋಜನೆ ಮಾಡುವಂತೆ, ಇಲ್ಲಿಯೂ, ಈ ಮಾಧ್ಯಮದ, ಅದರಲ್ಲೂ ಯಂತ್ರ ಮಾಧ್ಯಮದ ಮಿತಿಗಳನ್ನು ಅರಿತು ಕೊಂಡು ತನ್ನ ನಾಟಕವನ್ನು ರಚಿಸಬೇಕು. ಈ ಶಬ್ದಸ್ವರೂಪದಲ್ಲಿ ಸೂಚಿಸಲಾಗದ, ಆದರೂ ಶ್ರೋತೃರಿಗೆ ತಿಳಿಯಲೇಬೇಕಾದ ವಿಷಯ ಗಳನ್ನು, ಬಹು ನಾಜೂಕಾಗಿ ತನ್ನ ಸಂಭಾಷಣೆಗಳಲ್ಲಿ ಅಳವಡಿಸಬೇಕು. ಇಲ್ಲವಾದಲ್ಲಿ ನಾಟಕ ಅಷ್ಟು ಮಟ್ಟಿಗೆ ದುರ್ಬಲವಾಗುತ್ತದೆ. ಆದುದರಿಂದ ಪ್ರಸಾರನಾಟಕಕಾರ ಈ ವಿಷಯಲ್ಲೂ ತುಂಬಾ ಎಚ್ಚರವಾಗಿರಬೇಕು.

ಇನ್ನೊಂದು ವಿಷಯ—ದೃಶ್ಯ ನಾಟಕದಲ್ಲಿ ನಾಟಕ ಎಂಥ ಪರಿಸರ ದಲ್ಲಿ ನಡೆಯುತ್ತದೆ ಎನ್ನುವುದನ್ನು ಕಣ್ಣಾರೆ ನೋಡುವುದು ಸಾಧ್ಯ, ಓದುವ ನಾಟಕಗಳೇ ಆದರೂ ಅಲ್ಲಿ ಸ್ಥಳ, ಕಾಲ, ಪಾತ್ರಗಳ ವಿಸ್ತಾರ ವಾದ ವಿವರಣೆಯನ್ನು ಕೊಡಬಹುದು. ಪಾತ್ರದ ಆಕಾರ ಹೀಗಿದೆ, ವಯಸ್ಸಿನಷ್ಟು, ಉಡುಪು ಇಂಥದು, ಅವನಿರುವ ಸ್ಥಳ ಹೀಗಿದೆ, ಎಂದೋ ವಿವರಿಸಿ, ವಾಚಕನ ಮನಸ್ಸನ್ನು ನಡೆಯಿಸುವ ಕ್ರಮವೆ ಪೂರ್ವಭಾವಿ ಸಿದ್ಧಗೊಳಿಸಬಹುದು. ಆ ಬಗೆಯ ನಾಟಕಕಾರರಿಗಿರುವ ಈ ಸೌಲಭ್ಯ ಪ್ರಸಾರ ನಾಟಕಕಾರನಿಗಿರುವುದಿಲ್ಲ. ಉದಾಹರಣೆಗೆ— 'ಅವನು ಅಲ್ಲಿಂದ ಅಷ್ಟು ದೂರ ಹೋಗಿ, ಸೋಫಾದ ಮೇಲೆ ಕುಳಿತು ನಿಟ್ಟುಸಿರುಬಿಟ್ಟ' ಎನ್ನುವ ವಿವರವನ್ನು ಬರೆದು ತೋರಿಸಲು ಸಾಧ್ಯ, ರಂಗದ ಮೇಲೆ ಅಭಿನಯಿಸಿ ತೋರಿಸಲೂ ಸಾಧ್ಯ, ಶಬ್ದದ ಸಾಧನವಿಲ್ಲದ ಶುದ್ಧ ಕ್ರಿಯಾ ತ್ಮಕವಾದ ಈ ವಿವರವನ್ನು ಪ್ರಸಾರ ನಾಟಕದಲ್ಲಿ ತೋರಿಸಲು ಸಾಧ್ಯವೇ ಇಲ್ಲ. ಹೀಗೆ ಪ್ರಸಾರ ನಾಟಕದಲ್ಲಿ ಮೂಡಿಸಲು ಸಾಧ್ಯವಿಲ್ಲದ ಇದೇ

ಬಗೆಯ ಹಲವಾರು ಉದಾಹರಣೆಗಳನ್ನು ಕೊಡಬಹುದು. ಪ್ರಸಾರ ನಾಟಕಕಾರ ಈ ಮಿತಿಯನ್ನು ಸದಾ ಗಮನದಲ್ಲಿಟ್ಟುಕೊಂಡು ನಾಟಕವನ್ನು ರಚಿಸಬೇಕು ಶಬ್ದದಲ್ಲಿ ಸೃಷ್ಟಿಸಲಾಗದ ಇಂಥ ವಿವರಗಳು ನಾಟಕದಲ್ಲಿ ಬಾರದಂತೆ ಎಚ್ಚರವಾಗಿದ್ದು ನಾಟಕವನ್ನು ಬರೆಯಬೇಕು. ಒಂದು ವೇಳೆ ಅಂಥ ವಿವರವನ್ನು ತಿಳಿಸುವುದು ಅಗತ್ಯವಾದಲ್ಲಿ ಅದನ್ನು ಪಾತ್ರಗಳ ಸಂಭಾಷಣೆಯಲ್ಲಿ ಅಳವಡಿಸಬೇಕು.

ಮುಖ್ಯವಾಗಿ ಪ್ರಸಾರನಾಟಕಕಾರ ಈ ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು: ಪ್ರಸಾರ ನಾಟಕ ನಾಟಕವೆಂಬ ವರ್ಗಕ್ಕೆ ಸೇರಿದರೂ ಅದು ನಾಟಕವಲ್ಲ, ಮೂಲತಃ ಶಬ್ದ ಚಿತ್ರ. ಇಲ್ಲಿ ಅವನು ಗೆಲ್ಲಬೇಕಾಗಿರುವುದು ಪ್ರೇಕ್ಷಕರ ಕಣ್ಣನ್ನಲ್ಲ, ಕಿವಿಯನ್ನು.

ಹಾಗೇ— ಪ್ರಸಾರನಾಟಕದಲ್ಲಿ ಅಭಿನಯಕಾರರಿಗೂ— ಪ್ರೇಕ್ಷಕರಿಗೂ ನೇರವಾದ ಸಂಪರ್ಕವಿಲ್ಲ; ಯಂತ್ರ ಮಾಧ್ಯಮದ ಮೂಲಕ ಆ ಸಂಪರ್ಕವನ್ನು ಸಾಧಿಸಬೇಕು ಎಂಬುದೂ ಪ್ರಸಾರನಾಟಕಕಾರರ ಲಕ್ಷ್ಯದಲ್ಲಿರಬೇಕು.

ಮುಖ್ಯವಾದ ಈ ಕೆಲವು ವಿಷಯಗಳನ್ನು ಗಮನದಲ್ಲಿಟ್ಟುಕೊಂಡರೆ ಪ್ರಸಾರ ನಾಟಕ ರಚನೆ ಸುಲಭ; ಹಾಗೆ ಅರಿತು ಬರೆದುದನ್ನು ಪ್ರಸಾರ ಮಾಡುವುದೂ ಸುಲಭ.

ರೇಡಿಯೋ ನಮ್ಮ ದೇಶಕ್ಕೆ ಇನ್ನು ಹೊಸದು. ಪಾಶ್ಚಾತ್ಯ ದೇಶಗಳಲ್ಲಿರುವಷ್ಟು ಮಟ್ಟಿಗೆ, ನಮ್ಮ ದೇಶದಲ್ಲಿ ಅದು ಜನಜೀವನದಲ್ಲಿ ಬಹು ಆಳವಾಗಿ ಬೇರುಬಿಟ್ಟಿಲ್ಲ. ಎಲ್ಲ ಮುಖಗಳನ್ನು ವ್ಯಾಪಿಸಿಲ್ಲ. ಎಂತಲೇ ನಮ್ಮ ಜನಕ್ಕೆ ರೇಡಿಯೋ ಹೊಸದಾದಂತೆ, ನಮ್ಮ ಲೇಖಕರಿಗೂ ಪ್ರಸಾರ ಲೇಖನ ಕಲೆ ಹೊಸದು. ಉತ್ತಮ ಲೇಖಕ, ಉತ್ತಮ ಪ್ರಸಾರ ಲೇಖಕನೂ ಆಗಬಹುದೆಂಬ ನಂಬಿಕೆ ಬರೀ ಭ್ರಾಂತಿ. ಉಳಿದ ಕಲೆಗಳಂತೆ ಇದೂ ಅಭ್ಯಾಸದಿಂದ ಲಬ್ಧವಾಗುವ ಕಲೆ.

ಪಾಶ್ಚಾತ್ಯ ದೇಶಗಳಲ್ಲಿ ಈ ಕಲೆಯನ್ನು ಒಂದು ಪ್ರತ್ಯೇಕ ವಿಷಯವಾಗಿ ಕಲಿಸಲು ಏರ್ಪಾಡುಗಳಿವೆ. ಪರ್ಲ್‌ಬಕ್‌ಗಳಂಥ ಸಿದ್ಧ ಸಾಹಿತಿಯೂ ಮೊಟ್ಟ ಮೊದಲ ಪ್ರಸಾರ ನಾಟಕವನ್ನು ಬರೆಯುವ ಮುನ್ನ, ಆ ವಿಷಯವನ್ನು ಕಲಿಸುವ ಶಾಲೆಗೆ ಹೋಗಿ, ಕೆಲವು ತಿಂಗಳು ಅಲ್ಲಿ ಅಭ್ಯಾಸಮಾಡಿದಳಂತೆ.

ನಮ್ಮ ಲೇಖಕರಿಗೆ ಆ ಅನುಕೂಲವಿಲ್ಲ.

ಆದುದರಿಂದ ಪ್ರಸಾರ ನಾಟಕ ಕಲೆಯನ್ನು ಕಲಿಯಬೇಕೆನ್ನುವವರು ಮಾಡಬಹುದಾದುದೊಂದೇ— ಬರೆಯಲು ಧಾವಿಸುವ ಮುನ್ನ ಬೇರೆಬೇರೆ ಕೇಂದ್ರಗಳಿಂದ ಪ್ರಸಾರವಾಗುವ ನಾಟಕಗಳನ್ನು ಲಕ್ಷ್ಯವಿಟ್ಟು ಕೇಳಬೇಕು ಹಾಗೇ ಅಚ್ಚಿನಲ್ಲಿ ದೊರಕುವ ಪ್ರಸಾರ ನಾಟಕಗಳನ್ನು ಅಭ್ಯಾಸದೃಷ್ಟಿಯಿಂದ ಓದಬೇಕು ನಾರ್ಮನ್ ಕಾರ್ವಿನ್, ಲೂಯಿ ಮ್ಯಾಕ್‌ನೀಸ್ ಮೊದಲಾದ ಸಿದ್ಧ ಪ್ರಸಾರ ನಾಟಕಕಾರರು ಬರೆದ ನಾಟಕಗಳನ್ನು ಓದಿದರೆ, ಈ ಕಲೆಯ ಬಗ್ಗೆ ಹೆಚ್ಚು ವಿಷಯವನ್ನು ಅರಿಯಬಹುದು.

ಈ ದೃಷ್ಟಿಯಲ್ಲಿ ಕನ್ನಡ ವಾಚಕರಿಗೆ ಅನುಕೂಲವಾಗಲೆಂದೇ, ಶುದ್ಧ ವಾಚನಕ್ಕೆ ಸಾಕಷ್ಟು ರುಚಿಸದಿರಬಹುದಾದ ಈ ಪ್ರಸಾರ ನಾಟಕಗಳನ್ನು ಅಚ್ಚು ಮಾಡಿಸಿ ವಾಚಕರ ಮುಂದೆ ಇಟ್ಟಿದ್ದೇನೆ. ಆದರೆ ಪ್ರಸಾರ ನಾಟಕ ರಚನೆಗೆ ಇವು ಅತ್ಯುತ್ತಮ ಮಾದರಿ ಎಂಬ ಭ್ರಮೆ ನನಗೂ ಇಲ್ಲ, ವಾಚಕರೂ ಆ ಭ್ರಮೆಯನ್ನು ಇಟ್ಟುಕೊಳ್ಳಬಾರದು. ಇವು ಪ್ರಸಾರವಾದಾಗ ಶ್ರವ್ಯಪ್ರಿಯವಾದುದರಿಂದ ಇವು ಅಚ್ಚಿನ ಬೆಳಕನ್ನು ಕಂಡಿವೆ

ಆದರೆ ಕೇವಲ ಕಥಾ ಕುತೂಹಲದಿಂದ ಈ ನಾಟಕಗಳನ್ನು ಓದುವ ವಾಚಕ ಮಿತ್ರರಲ್ಲಿ ಒಂದು ಮಾತು— ಈ ಬಗೆಯ ನಾಟಕಗಳನ್ನು ಇತರ ನಾಟಕಗಳಂತೆ ಓದಬೇಡಿ. ಹೆಚ್ಚು ಎಚ್ಚರವಾಗಿದ್ದು, ಅಲ್ಲಲ್ಲಿ ಕೊಡಲ್ಪಟ್ಟ ಪ್ರಸಾರ ಸೂಚನೆಗಳನ್ನು ಅರ್ಥಮಾಡಿಕೊಂಡು

ಓದಿದರೆ, ಈ ನಾಟಕಗಳು ವಾಚನ ರುಚಿಯನ್ನು ಕೊಡಬಲ್ಲವು.
ಕಡೆಯದಾಗಿ—

ಹೆಚ್ಚು ಜನಪ್ರಿಯವಾಗದೆ ಹೋಗಬಹುದಾದ ಈ ಪ್ರಸಾರ ನಾಟಕಗಳನ್ನು ನನ್ನ ಮೇಲಿನ ಅಭಿಮಾನದಿಂದ ಅಚ್ಚುಮಾಡುವ ಸಾಹಸಕ್ಕೆ ಕೈಹಾಕಿದ, ಮಿತ್ರವೃಂದ ಪ್ರಕಾಶನದ ಗೆ. ವೈ. ಮಹಾಲಿಂಗಭಟ್ಟರ ಸ್ನೇಹಕ್ಕೆ ನಾನು ತುಂಬಾ ಋಣಿ.

ಈ ನಾಟಕಗಳನ್ನು ನನ್ನಿಂದ ಬರೆಯಿಸಿ, ಅದನ್ನು ಯಶಸ್ವಿಯಾಗಿ ಪ್ರಸಾರಮಾಡಿದ ಮೈಸೂರಿನ ಆಲ್ ಇಂಡಿಯಾ ರೇಡಿಯೋದ ಗೆ. ಎಸ್. ಎಸ್. ಶಿವಸ್ವಾಮಿ, ಶ್ರೀಮತಿ ರಾಜಮ್ಮ ಕಲ್ಲೋಳಿಮಠ, ಶ್ರೀಮತಿ ಪುಟ್ಟತಾಯಮ್ಮನವರಿಗೂ, ರೇಡಿಯೋ ಕೇಂದ್ರದ ಒಳಗಿನ ಮತ್ತು ಹೊರಗಿನ ಶ್ರೀಗಳಾದ ವಾಮನರಾವ್, ಎಂ. ಎಸ್. ನಂಜಪ್ಪ, ನೀಲಕಂಠರಾವ್ ಕೆ. ಎಸ್. ರಾಮಯ್ಯ, ಸಂಪತ್. ಅಶ್ವತ್ಥನಾರಾಯಣರಾವ್, ಚಂದ್ರಶೇಖರ್, ಶ್ರೀಮತಿಗಳಾದ ಮೀರಾ, ಕೆ. ಎಸ್. ನರಸಮ್ಮ, ಸರೋಜ, ಶ್ಯಮಂತಕಮಣಿ ಮೊದಲಾದ ಕಲಾವಿದರಿಗೆ ನನ್ನ ವಂದನೆಗಳು.

ಮೈಸೂರು }
೧೦—೪—೫೪ }

ತ. ರಾ. ಸು.

# ಸಂಪಾದಕೀಯ

---

ಬಹಳ ಹಿಂದಿನಿಂದಲೂ ರೂಪುಗೊಳ್ಳುತ್ತಿದ್ದ ಬಯಕೆಯ ಕುಡಿ, ವಿದ್ಯಾಮಂದಿರದಿಂದ ಹೊರಬೀಳುವ ಮೊದಲೇ 'ಚಿಗುರುವಬಳ್ಳಿ'ಯಾಗಿ ಹರಿಯಿತು — ಕರ್ನಾಟಕದ ಉದ್ದಗಲಕ್ಕೂ ಜೀವದ ಬಳ್ಳಿಯಾಗಿ ಹರಿಯಿತು. "ಕಡಲು....ಮಲೆಗಳ ತೋಳತೆಕ್ಕೆಯಲ್ಲಿ ಮೈಚಾಚಿದ ಪ್ರಕೃತಿಯ ಆಡುಂಬೊಲವಾದ ದಕ್ಷಿಣ ಕನ್ನಡ ಜಿಲ್ಲೆಯ ಹನ್ನೊಂದು ಜನ ಸಾಹಿತಿಗಳ ಪ್ರತಿಭಾಲತೆಯಲ್ಲಿ ಅರಳಿದ ಕಥಾಕುಸುಮಗಳ ಕಮನೀಯ ಮಾಲೆ,"ಎಂದು ಕರೆಸಿಕೊಂಡ ಈ 'ಬಳ್ಳಿ' ಸಮಗ್ರ ಕರ್ನಾಟಕದ ಮನೆಮನೆಯಲ್ಲಿ ಸುತ್ತಿಕೊಂಡು ವೀರ ಕನ್ನಡಿಗರಿಗೆ ಮನೋಲ್ಲಾಸದ ಔತಣವನ್ನಿತ್ತಿತು.

"ಚಿಗುರುವ ಬಳ್ಳಿ"ಯಲ್ಲಿ ಮಾತು ಕೊಟ್ಟಂತೆ ನಮ್ಮ ಎರಡನೆಯ ಪ್ರಕಟಣೆ ಬಹಳ ಹಿಂದೆಯೇ ಕನ್ನಡಿಗರನ್ನು ಸೇರಬೇಕಾಗಿತ್ತು. ಏನೋ ಆಗಲಿಲ್ಲ. ಈ ಅಂತರದಲ್ಲಿ ಹಲಕೆಲವು ಟೀಕೆ ಟಿಪ್ಪಣಿಗಳು ಹುಟ್ಟಿಕೊಂಡು ಅಚೀಚೆ ತೂರಾಡತೊಡಗಿದ್ದವು. "....Prepare yourself to endure many trials and obstacles in this vale of tears; for such will be your lot wherever you are, and you will encounter them whenever you conceal yourself....". ನಮ್ಮ ಕರ್ತವ್ಯ-ತೇರಿಗೆ ವಿಜಯ ಪತಾಕೆಯಂತಿದೆ ಥಾಮಸ್ ಕೆಂಪಿಸ್‌ನ ಈ ಅಮರವಾಣಿ. ನಮ್ಮ ನಿಶ್ಚಿಂತತೆಗೆ ಈ ದೃಢತೆಯ ದುರ್ಭೇಧ್ಯ ಪಾಗಾರವಿದ್ದುದರಿಂದ ನಾವು ಅಂಥ ಮಾತುಗಳಿಗೆ ಮನಸ್ಸು ಹರಿಸಿ ಕಾರ್ಯವನ್ನು ಜಡ್ಡುಗೊಳಿಸುವಂತಹುದಕ್ಕೆ ಕೈಹಾಕುವ ಅವಶ್ಯಕತೆ ಬರಲಿಲ್ಲ.

ಇದೀಗ, ನಮ್ಮ ಪ್ರಕಾಶನದ ಎರಡನೆಯ ಪ್ರಕಟಣೆಯಾಗಿ 'ಅನ್ನಾವತಾರ'ವನ್ನು ಕನ್ನಡಿಗರ ಮುಂದಿಡಲು ಸಂತೋಷ ಪಡುವೆವು.

ಜನರ ಬಡತನ, ಹಸಿವುಗಳಿಂದುಂಟಾಗುವ ದುರಂತವನ್ನು ಚಿತ್ರಿಸುವುದು ಇತ್ತೀಚೆಗೆ ಸಾಹಿತಿಗಳ ಒಂದು ಸಾಮಾನ್ಯ ಅಭ್ಯಾಸವಾಗಿಬಿಟ್ಟಿದೆಯೆಂಬ ಅಪವಾದನೆ ನಾವೀಗ ಕೆಲವೆಡೆಗಳಿಂದ ಕೇಳುತ್ತೇವೆ. ಇದರಲ್ಲಿ ವಾಸ್ತವತೆಯು ಇದೆಯಾದರೂ, ಬರಹಗಾರರನ್ನು ಈ ಅಪವಾದನೆಯಿಂದ ಸಂಪೂರ್ಣ ಅಚ್ಚೊತ್ತಿಬಿಡುವುದು ಯೋಗ್ಯವೆನಿಸದು. ಸರಿಯಾದ ಲೆಕ್ಕಣಿಗಳ ಸನಿಹಕ್ಕೆ 'ಶಾಜಾಮುಸಿ' ಇನ್ನೂ ಕನ್ನಡಿಯ ಗಂಟಾಗಿಯೇ ಉಳಿದಿರುವುದೆಂಬುದು ನಾವು ನೆನಕೆಗೆ ತಂದುಕೊಳ್ಳಬೇಕಾದ ಸಂಗತಿ. ಇಂತಿರುವಾಗ ಕೃತಿಗಳಲ್ಲಿ ಸಹೃದಯತೆ ಮೂಡಿಬರುವುದು ಅಸ್ವಭಾವಿಕವೆಂದೆನಿಸದು. ಶ್ರೀ. ತ.ರಾ ಸು. ರವರು 'ಅನ್ನಾವತಾರ'ದಲ್ಲಿ ಭಾರತೀಯ ಹಸಿವಿನ ಮೂಲ ಕಾರಣದ ಗುಹೆಯನ್ನು ಹೊಕ್ಕು, ನಿರ್ಭಯವಾಗಿ ಹೊಕ್ಕು ಪರಿಣಾಮದ ಮೃಗವನ್ನು ಹೊರಕ್ಕೆ ಎಳೆದು ಬಿಟ್ಟಿದ್ದಾರೆ. ಪ್ರತ್ಯಕ್ಷ ವಾತಾವರಣವನ್ನು ಸವಿದವರಿಗೆ ಇದರ ಗಭೀರತೆಯು ಅರಿವಾಗಲು ಕಷ್ಟವಾಗದು.

ಕರ್ನಾಟಕವು ಯಾವ ರಂಗದಲ್ಲೂ ಹಿಂದುಳಿದಿಲ್ಲ. ಇದಕ್ಕೆ ಇಲ್ಲಿ ಆಗಿಹೋದ ಐತಿಹಾಸಿಕ ಘಟನೆಗಳೇ ಪ್ರಮಾಣ. ಇತಿಹಾಸದಲ್ಲಿ "ವೀರರಕಳ"ಗಳಿಂದು ಪ್ರಸಿದ್ಧವಾದ ಬಂಗಾಳ, ಮಹಾರಾಷ್ಟ್ರ, ರಜಪುತಾನ, ಪಂಜಾಬ್‌ಗಳು ಬಿಳಿ-ದೌಲತ್ತಿನ ತುಳಿತವನ್ನು ಪ್ರಸಾದವೋ ಎಂಬಂತೆ ಅನುಭವಿಸುತ್ತಿದ್ದಾಗ, ಕೆರಳಿ ನಿಂತು ಕಡೆಯತನಕವೂ ಹೋರಾಡಿ ಅಮರನಾದವನೆಂದರೆ, ಕರ್ನಾಟಕದ ಹುಲಿ-ಟೀಪುಸುಲ್ತಾನ್. ಸಂಧಾನದ ಷರತ್ತಿಗೆ ಅನುಗುಣವಾಗಿ ಸುಲ್ತಾನನು ತನ್ನ ಮಕ್ಕಳಿಬ್ಬರನ್ನು ಠೇವಣಿಯ ಬಂದಿಗಳಾಗಿ 'ಇಂಗ್ರೇಜಿ'ಯವರ ಶಿಬಿರಕ್ಕೆ ಕಳುಹಬೇಕೆಂದಾಗ, "ನನ್ನ ಮಕ್ಕಳು—ಹುಲಿಯ ಮರಿ, ಠೇವಣಿಯ ಬಂದಿ! ಇದು ಸಂಧಾನವಲ್ಲ ಗುಲಾಂ ಅಳಿ, ಹೈದರನ ವಂಶವನ್ನು ನಿರ್ಮೂಲ

ಮಾಡುವ ಶಸಿಸಂಚು, ಥೂ... ... ತೊಲಗಾಚೆ ನನ್ನೆದುರಿನಿಂದ ........" ಎಂದು ಟೀಪು ಹೇಳುವ ಮಾತನ್ನು ಕೇಳಿದರೆ ಎಂಥ ಹೇಡಿ ಸ್ವಭಾವದವನಾದರೂ ಒಮ್ಮೆಗೆ ಕೆರಳಿ ಸೆಟೆದು ನಿಲ್ಲುವುದರಲ್ಲಿ ಸಂಶಯವಿಲ್ಲ. ಒಂದೇ ಮಾತಿನಲ್ಲಿ ಹೇಳುವುದಿದ್ದರೆ ಕರ್ನಾಟಕ — ಗಂಡುಮೆಟ್ಟು.

ಬೆಳೆಯುತ್ತಿರುವ ಜನಸಂಖ್ಯೆ, ಅಭಿವೃದ್ಧಿಗೊಳ್ಳುತ್ತಿರುವ ವ್ಯೈಯ್ಯುಕ್ತಿಕತೆ, ಹೆಚ್ಚುತ್ತಿರುವ ಸುಖಾಭಿಲಾಷೆಗಳು ಇಂದು ಸಮಾಜದ ಅವಿಭಕ್ತ ಕುಟುಂಬಗಳನ್ನು ಒಂದೇ ಸಮನೆ ಒಡೆಯುತ್ತಿವೆ. ಮನಸ್ಸಿನಲ್ಲೆ ನೋಗಾಳಿಗೋಪುರಗಳನ್ನು ಕಟ್ಟಿಕೊಂಡು ಜನರು ಭೂಮಿಯ ಇನ್ನಷ್ಟು ಪಾಲುಗಾರಿಕೆಯನ್ನು ಅಪೇಕ್ಷಿಸುತ್ತಾರೆ ವಿನಾ, ಮುಂಬರುವ ಅನಾಹುತಗಳನ್ನು ಗಣನೆಗೆ ತರುವುದಿಲ್ಲ. ಪರಿಣಾಮವಾಗಿ ಭೂಮಿಯ ಹಿಡುವಳಿಗಳು ತೀರ ಸಣ್ಣದಾಗಿ, ವ್ಯವಸಾಯಕ್ಕೆ ಬಾರದವುಗಳಾಗಿ ಪರಿಣಮಿಸುತ್ತವೆ ಈ ದೃಷ್ಟಿಯಿಂದ ನೋಡಿದರೆ ನಮ್ಮ ಸುತ್ತಮುತ್ತಲೂ ಅನಾರ್ಥಿಕ ಹಿಡುವಳಿಗ (un-economic holdings) ಳೇ ಹೆಚ್ಚುತ್ತಿರುವುದನ್ನು ನೋಡಬಹುದಾಗಿದೆ ಮುಂಬಯಿ ರಾಜ್ಯದ ರತ್ನಗಿರಿ ಜಿಲ್ಲೆಯಲ್ಲೊಂದೆಡೆ ಒಂದು ಕುಟುಂಬದ ಹಿಡುವಳಿಯು ಕೇವಲ ೪೦ ಸೆಂಟ್ಸ್‌ಗಳಿಗಿಂತಲೂ ಕಡಮೆಯಾಗಿದೆಯೆಂದು ಶ್ರೀ ಬಿ. ವಿ. ನಾರಾಯಣಸ್ವಾಮಿನಾಯ್ಡು, ಅವರು ತಮ್ಮ ರೂರಲ್ ಇಕೋನೊಮಿಕ್ಸ್, ಪುಸ್ತಕದಲ್ಲಿ ಹೇಳಿದ್ದಾರೆ. ಇದನ್ನು ತಡೆಹಿಡಿಯುವುದಕ್ಕೆ ಕೈಗಾರಿಕೆಯು ಅಭಿವೃದ್ಧಿಗೊಳ್ಳದೆ ಗತ್ಯಂತರವಿಲ್ಲವೆಂದು ಅವರು ಪ್ರತಿಪಾದಿಸಿದ್ದಾರೆ. "ನರಕವಾದ ನಂದನ" ದಲ್ಲಿ ತರಾಸು ಸುಖಸಂತೋಷಗಳಲ್ಲಿ ತೇಲಾಡುತ್ತಿದ್ದ ಅವಿಭಕ್ತ ಕುಟುಂಬವೊಂದು ಪಾಲುಗಾರಿಕೆಯಿಂದ ಹೇಗೆ ಅವಸಾನ ಹೊಂದಿತೆಂಬುದನ್ನು ಕರುಳು ಬಿರಿಯುವಂತೆ ಚಿತ್ರಿಸಿದ್ದಾರೆ.

ಹೀಗೆ, ಈ ಪುಸ್ತಕದ ಉದ್ದಗಲಕ್ಕೂ ಜೀವಕಳೆಯೊಂದು ಸುಗ್ಗಿಯ ಲಾಸ್ಯವಾಡುತ್ತಿರುವುದನ್ನು ನಾವು ನೋಡಬಹುದಾಗಿದೆ. ಇದಕ್ಕಾಗಿ ನಾವು ಶ್ರೀ. ತ.ರಾ.ಸು. ಅವರಿಗೆ ಚಿರಋಣಿಗಳು.

ಈ ಸಂಕಲನದಲ್ಲಿರುವ ನಾಟಕಗಳನ್ನು ಪ್ರಕಟಿಸಲು ಅನುಮತಿಯನ್ನಿತ್ತ ಮೈಸೂರಿನ ಆಲ್ ಇಂಡಿಯಾ ರೇಡಿಯೋ ಕೇಂದ್ರದ ಅಧಿಕಾರಿಗಳಿಗೆ ನಾವು ಕೃತಜ್ಞರು. ಹಾಗೆ ಪ್ರಕಾಶನದ ಲಾಂಛನವನ್ನು ಬರೆದುಕೊಟ್ಟ ಪಿ. ಆರ್. ತಿಪ್ಪೇಸ್ವಾಮಿ, ಅವರನ್ನು ನಾವು ಮರೆಯುವಂತಿಲ್ಲ. ಮತ್ತು ಸರ್ವ ವಿಧದಿಂದಲೂ ಸಹಾಯಮಾಡಿದ ನಮ್ಮ ಮಿತ್ರ ಸಮುದಾಯದ ನೆನಕೆ ನಮ್ಮನ್ನು ಬಿಟ್ಟುಹೋಗುವಂತಿಲ್ಲ. ಇದಲ್ಲದೆ ಈ ಪುಸ್ತಕವನ್ನ ಅಂದವಾಗಿ, ಸಕಾಲದಲ್ಲಿ ಮುದ್ರಿಸಿಕೊಟ್ಟ ಮೈಸೂರಿನ ಪರಿಮಳ ಪ್ರೆಸ್ಸಿನ ಡಾ॥ ಹೆಚ್. ಕೆ. ವೇದವ್ಯಾಸಾಚಾರ್ಯರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಈ ಪುಸ್ತಕವು 'ಕಾಳಿ' ಎಂಬ ಹೆಸರಿನಿಂದ ಪ್ರಕಟಿಸಲ್ಪಡುವುದೆಂದು ನಾವು ಜಾಹಿರಾತು ಪಡಿಸಿದ್ದೆವು. ಆದರೆ ಮುದ್ರಣ ಕಾರ್ಯವು ಕೊನೆಯ ಘಟ್ಟಕ್ಕೆ ಬರುವುದರೊಳಗಾಗಿ ಕೆಲವು ಆಕಸ್ಮಿಕ, ಅನಿರೀಕ್ಷಿತ 'ಅಡಚಣೆ'ಗಳು ಕವಿದು ಬಂದುದರಿಂದ ಹೆಸರಿನಲ್ಲಿ ಈ ರೀತಿ ಬದಲಾವಣೆಯಾಗಬೇಕಾಯಿತು. ಇದನ್ನು ಗ್ರಹಿಸಿಕೊಂಡು ವಾಚಕರು ನೆಮ್ಮದಿ ಮನಸ್ಕರಾಗಬೇಕೆಂದು ಕೋರಲಾಗಿದೆ.

ಕೊನೆಯದಾಗಿ, ನಮ್ಮ ಪ್ರಕಾಶನದ ಕೇಂದ್ರವನ್ನು ಮಂಗಳೂರಿನಿಂದ ಕಾಸರಗೋಡಿಗೆ ಸ್ಥಳಾಂತರಿಸಲಾಗಿದೆ. ಇದನ್ನು ವಾಚಕರ ಗಮನದಲ್ಲಿಟ್ಟುಕೊಳ್ಳುವುದು.

ಕಾಸರಗೋಡು
೧೧—೪—೫೪ }

ವೈ. ಮಹಾಲಿಂಗ ಭಟ್

# ನಮ್ಮ ಕುರಿತು....

ಪ್ರಕಾಶಕರು :
ಮಿತ್ರವೃಂದ ಪ್ರಕಾಶನ
ಕಾಸರಗೋಡು, ದ. ಕ.

ಸಂಪಾದಕರು :
ವೈ. ಮಹಾಲಿಂಗ ಭಟ್.

## ಸಾಹಿತ್ಯ ಸಲಹೆ :

ರಾಷ್ಟ್ರಕವಿ ಗೋವಿಂದಪೈ.
ಪಿ. ಕೆ. ಶಾಸ್ತ್ರಿ, ಎಂ.ಎ.ಬಿ.ಟಿ.,
ಕೆ. ಮಹಾಬಲ ಭಂಡಾರಿ, ಎಂ.ಎ, ಎಲ್.ಎಲ್.ಬಿ.
ಶಾ. ಬಾಲುರಾವ್
ರಾ. ಕೃ. ನಾಯಕ್,
ಜಿ. ಶಂಕರಭಟ್, ಬಿ. ಎ. ಬಿ.ಟಿ.

ಕಲಾಗಾರರು :
ಪಿ. ಆರ್. ತಿಪ್ಪೇಸ್ವಾಮಿ.
ಎಂ. ಶಿವರಾಮ ಭಟ್
ವೈ. ನಾರಾಯಣ ಆಚಾರ್

ಪ್ರಚಾರ:
ಶ್ರೀ. ವಿಷಕಂಠ
ಶ್ರೀ. ಮಹಾಬಲ ಆಳ್ವ
ವಿ. ಬಿ. ಕೋಳಾರಿ

## ಶಾಖೆಗಳು :

**ಮೈಸೂರಿನಲ್ಲಿ:**
2755, ನಗುನಿವಾಸ
ವಿ. ವಿ. ಮೊಹಲ್ಲ
ಮೈಸೂರು

**ಚಾಮರಾಜನಗರದಲ್ಲಿ:**
ಶ್ರೀ. ವಿಷಕಂಠ
ಹಳೆ ಪೋಸ್ಟಾಫೀಸ್ ಬಿಲ್ಡಿಂಗ್
ಚಾಮರಾಜನಗರ.

**ಮಂಗಳೂರಿನಲ್ಲಿ :**
ರಾ. ಕೃ. ನಾಯಕ್
ಭವಂತಿ ರಸ್ತೆ, ಮಂಗಳೂರು-೧



ಈ ಗ್ರಂಥಪ್ರಕಟನೆ ಯಾರ ಔದಾರ್ಯ, ಸಾಹಿತ್ಯಾಭಿರುಚಿಯ
ಫಲವೋ ಆ ಆತ್ಮೀಯ ಬಂಧು ಕೊಡಿಯಾಲ
ಮೂಲೆ ರಾಮಭಟ್, ಅವರಿಗೆ ಪ್ರಕಾಶಕರ
ಕೃತಜ್ಞತೆಯೊಡನೆ ಅರ್ಪಿಸಲಾಗಿದೆ.

# ಒಳಗೆ:

೧. ಅನ್ನಾವತಾರ
೨. ಸ್ವಾತಂತ್ರ್ಯವೀರ ಟೀಶು.
೩. ನರಕವಾದ ನಂದನ
೪. ಕರವಸ್ತ್ರ
೫. ಗಂಗಾದೇವಿ

# ಅನ್ನಾವತಾರ

[ನಾಟಕದ ಪ್ರಕಟಣೆಯನಂತರ... ....ಹಿನ್ನೆಲೆಯ ವಾದ್ಯ ಸಂಗೀತ, ಶುಷ್ಕ, ಭಯಾನಕ, ಮತ್ತು ವೇದನೆಗಳಿಂದ ಕೂಡಿದ ವಾತಾವರಣವನ್ನು ಚಿತ್ರಿಸುವಂತೆ ಜತೆಯಲ್ಲಿ ನಾಯಿಗಳ ಬೊಗಳುವಿಕೆ, ಗಿಡುಗಗಳ ಕರ್ಕಶಕೂಗುವಿಕೆ, ಮನುಷ್ಯರ ದಾರುಣ ಯಾತನೆಗಳು ಕೂಡ ಸೂಚಿತವಾಗುತ್ತಿವೆ—ವೇದನೆಯಿಂದ ಕೂಡಿದ ಪದ್ಯ ವೊಂದು ನಿಧಾನವಾಗಿ ಒಳ ಪ್ರವೇಶಿಸುವುದು.]

ಧ್ವನಿಗಳು :—ಹಸಿವೋ ಹಸಿವು ।
ಕೊನೆಯೇ ಕಾಣದ ಹಸಿವು ॥
ಹಸಿದಿದೆ ಬಸಿರು ।
ಬತ್ತಿದೆ ಉಸಿರು ।
ಕುಡಿಯಲು ಕಂಬನಿ ನೀರು ॥
ಹಸಿರಿಲ್ಲ ನೆಲದಲಿ ।
ಕಸುವಿಲ್ಲ ಮೈಯಲ್ಲಿ ।
ಹಸುವಿನ ಭೂತವೆ ಎಲ್ಲೆಲ್ಲು ॥

(ಧ್ವನಿ ನಿಧಾನವಾಗಿ ಹಿನ್ನೆಲೆಯ ಸಂಗೀತದೊಂದಿಗೆ ಮಿಲನವಾಗಿ ಮತ್ತೆ ನಿಧಾನವಾಗಿ ಕ್ಷೀಣಿಸುವುದು.)

ನಿರೂಪಕ :—ಹಸಿವು, ಹಸಿವು, ಎಲ್ಲೆಲ್ಲೂ ಹೊಟ್ಟೆ ಹಸಿದು ಅಲೆಯುವ ಜೀವಂತ ಪ್ರೇತಗಳು—ಇದು ಇಂದಿನ ಹಿಂದೂಸ್ಥಾನ!! ನೂರು ಕೋಟಿ ಹುತಾತ್ಮರ ಬಲಿದಾನದ ವಜ್ರವೇದಿಕೆಯ ಮೇಲೆ ನಿರ್ಮಾಣ ವಾದ ಸ್ವತಂತ್ರಭಾರತ! ಭೋರ್ಗರೆವ ಕಡಲಿನಂತೆ ಉಕ್ಕಿ ಮೆರೆಯುವ ಆ ಗಂಭೀರಘೋಷವನ್ನಾಲಿಸಿ,

[ಹಿನ್ನೆಲೆಯ ಸಂಗೀತ—ಸ್ವತಂತ್ರ ಭಾರತ್ ಕೀ ಜೈ-ಹಿಂದೂಸ್ಥಾ್ನ್
ಹಮಾರಾ ಹೈ]

(ಗುಂಪಿನ ಘೋಷಣೆ)

ನಿರೂಪಕ :—ನಾವು ಸ್ವತಂತ್ರರು, ನಾವು ಪರತಂತ್ರರಲ್ಲ. ಒಂದು ಕಡೆ ಈ ಹೆಮ್ಮೆಯ ವಿಜಯಘೋಷ, ಇನ್ನೊಂದು ಕಡೆ—ಆ ಭಾಷಣ ವನ್ನು ಕೇಳಿ.... ....

ಭಾಷಣಕಾರ :—(ಗಂಭೀರಧ್ವನಿಯಲ್ಲಿ) ಹಿಂದೆ ಯಾವಾಗಲೂ ಇರದಂಥ ಭಯಂಕರ ದಾಸ್ಯ ಇಂದು ಹಿಂದೂಸ್ಥಾನಕ್ಕೆ ಪ್ರಾಪ್ತವಾಗಿದೆ. ಪರ ಕೀಯರ ಪಾಶವೀ ಪಾದದಡಿಯಿಂದ ಗೆದ್ದು ಬಂದ ನಮ್ಮ ದೇಶ ಅನ್ನಕ್ಕಾಗಿ, ಒಂದೇ ಒಂದು ಹಿಡಿ ತುತ್ತಿಗಾಗಿ ಪರರಾಷ್ಟ್ರಗಳ ಬಾಗಿಲು ತೆರೆಯುತ್ತಿರುವುದನ್ನೇ ಕಾದಿದೆ. ಅವರು ಅನ್ನವಿಟ್ಟರೆ ನಾವು ಉಳಿಯುತ್ತೇವೆ, ಇಲ್ಲವಾದರೆ ಅಳಿಯುತ್ತೇವೆ. ನಮ್ಮ ಅಳಿವು, ಉಳಿವು ಕಂಡವರು ಇಡುವ ಕರುಣೆಯ ಕೂಳನ್ನು ಅವ ಲಂಬಿಸಿದೆ, ಕರುಣೆಯ ಕೂಳನ್ನು ಅವಲಂಬಿಸಿದೆ. ಅನ್ನಕ್ಕಾಗಿ ಕಂಡವರ ಬಾಗಿಲು ಕಾಯುವ ನಾವು ಸ್ವತಂತ್ರರೆ? ಅನ್ನದಾಸ್ಯ ಉಳಿದೆಲ್ಲ ದಾಸ್ಯಕ್ಕಿಂತಲೂ ಭಯಂಕರವಾದದ್ದು, ಹೀನಾಯವಾ ದುದು. (ಕ್ಷೀಣಿಸುವುದು)

ನಿರೂಪಕ :—ನಿಜ! ಆ ಮಾತು! ಅನ್ನದಾಸ್ಯವೇ ಹಸಿವಿನ ಹೋರಾಟ. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯದ, ನಮ್ಮ ರಾಷ್ಟ್ರಗೌರವಕ್ಕೆ ಧಕ್ಕೆ ತರುವಂಥದಷ್ಟೇ ಅಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಮಾನವನನ್ನು ಪಶುವನ್ನಾಗಿ ಮಾಡುತ್ತದೆ. ಘೋರ ಹಾಲಾಹಲದಂತೆ ಮಾನ ವನ ಮಾನವತೆಯನ್ನು ಕೊಲ್ಲುತ್ತದೆ. ಹಸಿದವನಿಗೆ ತನ್ನ ಹಸಿವು ವಿನಾ ಉಳಿದಾವುದೂ ಬೇಕಾಗುವುದಿಲ್ಲ. ಹಿಂದೊಮ್ಮೆ ಉಪನಿಷ ತ್ಕಾಲದಲ್ಲಿ ಭಯಂಕರ ಕ್ಷಾಮ ಬಂದಾಗ್ಯೆ..........

(ಸಹಸ್ರ ವರ್ಷಗಳ ಹಿಂದಿನ ಕಾಲವನ್ನು ಸೂಚಿಸುವಂತಿರುವ
ಸಂಗೀತ ಕಲಕಲರವ)

ಮಾಂಡವ್ಯ :— ಹೋ! ಅಬ್ರಾಹ್ಮಣ್ಯ! ಧರ್ಮದ್ರೋಹ! (ಕಿರುಚುತ್ತಾ)

ಗಾಲವ :— ಏನಾಯಿತು ಮಾಂಡವ್ಯ. ಮುಗಿಲು ಹರಿದು ಬಿದ್ದಂತೆ ಕೂಗುತ್ತಿದ್ದೀಯಲ್ಲಾ ?

ಮಾಂಡವ್ಯ :— ವಿಶ್ವಾಮಿತ್ರ ಮಹಾಋಷಿ ಹಸಿವಿನ ಬಾಧೆ ತಾಳಲಾರದೆ, ಚಂಡಾಲರ ಮನೆಯಲ್ಲಿದ್ದ ನಾಯಿಯ ಮಾಂಸವನ್ನು ಕದ್ದು ತಿಂದನು.

ಗಾಲವ :— ವಿಶ್ವಾಮಿತ್ರ .... ಚಂಡಾಲನ ಮನೆ ...... ನಾಯಿಯ ಮಾಂಸ .... ಕದ್ದು ತಿಂದನು! ಎಲ್ಲಾದರೂ ನಂಬುವ ಮಾತೆ ? ಮಾಂಡವ್ಯ?

ಮಾಂಡವ್ಯ :— ನನ್ನ ಮಾತನ್ನು ನಂಬದೆ ಹೋದರೆ ಬಿಡು. ವಿಶ್ವಾಮಿತ್ರರೇ ಬರುತ್ತಿದ್ದಾರಲ್ಲ, ಅವರನ್ನೇ ಕೇಳು.

ಗಾಲವ :— ಮಹರ್ಷಿಗಳೆ ? ನಿಜವೆ ಇವನ ಮಾತು ?

ವಿಶ್ವಾಮಿತ್ರ :— ಅಷ್ಟೇಕೆ ಗಾಬರಿಯಾಗುತ್ತಿ ಗಾಲವ ? ಮಾಂಡವ್ಯನಾಡಿದ ಮಾತು ನನಗೆ ಕೇಳಿಸಿತು, ಅದು ನಿಜ.

ಗಾಲವ :— ನಿಜ! ಹಾಗೆ ಮಾಡಬಹುದೆ ಆಚಾರ್ಯ ?

ವಿಶ್ವಾಮಿತ್ರ :— ಮಾಡಬಹುದು ಗಾಲವ, ಮಾಡಬಹುದಾದುದರಿಂದಲೇ ನಾನು ಆ ರೀತಿ ಮಾಡಿದ್ದು. ನೀನಿನ್ನೂ ಹಸುಳೆ! ಮನುಷ್ಯನಾಗಿ ಹುಟ್ಟಿದವನಿಗೆ ಜೀವದ ರಕ್ಷಣೆ ಮೊದಲ ಧರ್ಮ. ಆ ಧರ್ಮಕ್ಕಿಂತ ಹಿರಿದಾದ ಧರ್ಮವಿಲ್ಲ. ಅನ್ನಕ್ಕಿಂತ ಹಿರಿದಾದ ದೈವವಿಲ್ಲ. ಅನ್ನವೇ ಬ್ರಹ್ಮ! (ಕ್ಷೀಣಿಸುವುದು)

ನಿರೂಪಕ :— ಅಂದು ಹಸಿವು ಒಬ್ಬ ಮಹಾಋಷಿಯೊಬ್ಬನಿಂದ ಆ ಕೆಲಸ ಮಾಡಿಸಿತು, ಆ ಮಾತು ಆಡಿಸಿತು. ಅಂದಿಗೂ, ಇಂದಿಗೂ ಸಾವಿರಾರು ವರ್ಷಗಳು ಸಂದಿವೆ. ಆದರೆ ಮಾನವನ ಮೇಲೆ

ಹಸಿವಿನ ಪ್ರಭಾವ ಮಾತ್ರ ಬೇರೆಯಾಗಲಿಲ್ಲ. ಅನ್ನಕ್ಕಾಗಿ ಅಂದು ಋಷಿ ಚೋರನಾದ, ಇಂದು .... .....

(ಸಂದೇಹವನ್ನು ಸೂಚಿಸುವಂತೆ ಹಿನ್ನೆಲೆಯ ಸಂಗೀತ)

ಒಬ್ಬ :—(ಪಿಸುಧ್ವನಿಯಲ್ಲಿ) ನನಗೆ ಗೊತ್ತೈತೆ ಅವರ ಮನ್ಯಾಗೆ ನಾಲ್ಕು ಚೀಲ ಕಾಳು ಇವೆ.

ಇನ್ನೊಬ್ಬ :—ಅವನ ಮನ್ಯಾಗೆ ಇದ್ರೆ ನಮಗೇನು ಬಂದಂಗಾತು.... ..... ಚಂದ್ರನ ಬೆಳದಿಂಗಳು ನೋಡಿದ್ರೆ ಬೆಂಕಿ ಆಗ್ತದಾ ?

ಒಬ್ಬ :—ಅದೇ ನಾನು ಏಳಾದು. ನಾನಾಗ್ಲೆ ನಾಲ್ಕಾರು ಜನಾನಾ ತರ ಬೇತು ಮಾಡೀವ್ನಿ. ನಾಳೆ ರಾತ್ರಿ ಎಲ್ಲರೂ ಮನ್ಗಿರೋವಾಗ ಅವರ ಮನೆಗೆ ಬೆಂಕಿ ಅಚ್ಬಿಟ್ಟು ಗದ್ದಲಾಗ್ತಾಗೆ ಕಾಳು ಸಾಗಿ ಸ್ಕೊಂಡು ಓಗ್ಬಿಡೋದು, ಎಂಗಯ್ತೆ ಯೋಚ್ನೆ ?

ಇನ್ನೊಬ್ಬ-ಯೋಚ್ನೆ, ಸಂದಾಗೈತೆ. ಬೆಂಕೀಲಿ ಯಾರಾದ್ರೂ ಸತ್ತೋದ್ರೆ....!

ಒಬ್ಬ :—ಸಾಯ್ಲೀಳು. ಒಂದೋ ನಾವು ಸಾಯ್ಬೇಕು, ಇಲ್ಲ.... ಬೇರೆ ಯಾರಾದ್ರು ಸಾಯ್ಬೇಕು. ಈ ಕಾಲದ ನೀತೀನೇ ಅಂಗಿದೆ.

ಮೂರನೆ :—ಅದೆಲ್ಲಾದ್ರೂ ಹೋಗ್ಲಿ ! ಯಾರ್ಗಾರ ಗೊತ್ತಾಗ್ಬಿಟ್ಟು ಜೈಲಾದ್ರೆ ?

ಒಬ್ಬ :—ಅನ್ಕೊಳ್ಳೆ ಆಯ್ತಿಲ್ಲ

ಮೂರನೆ :—ಅದೆಂಗಾ ?

ಒಬ್ಬ :—ಅಲ್ಲಾ ಮತ್ತೆ. ಅಯ್ಯೋ ಬೆಪ್ಪುಕಡಿ. ಜೈಲಾದ್ರೆ ಏನಾಯ್ತದೆ ? ಇಲ್ಲಿ ಅಸ್ಕೊಂಡಿರೋ ಬದ್ಲು ಅಲ್ಲಿ ಒಟ್ಟೆಗೆ ಗಂಟೆ ತಪ್ಪದ ಹಾಗೆ ಮುದ್ದೆ ಹಾಕ್ತಾರೆ. ದಿನಾಗ಼್ೂ ನಾವ್ಕೇಳಾದು ಅಷ್ಟೇ ಅಲ್ವಾ ಇಲ್ಲಾದ್ರೇನು, ಜೈಲಾದ್ರೇನು ? ಒಟ್ಟೆ ತುಂಬಿದ್ರೆ ಬಂತು.

ಮೂರನೆ :—ಅಂತು ನಿನ್ಮಾತು ಕೇಳಿದ್ರೆ ಒಟ್ಟೆ ತುಂಬಿಸ್ಕೊಳ್ಳೋಕೆ ಮನ್ಸ ಏನ್ಬೇಕಾದ್ರೂ ಮಾಡ್ಬೋದು ಅಂದಂಗಾಯ್ತು.

ಒಬ್ಬ :—ಅಷ್ಟೇನೆ ಸೈ.

ಮೂರನೆ :—ಅಂಗಂದ್ರೆ ಮನ್ಷಂಗೂ ಮೃಗಕ್ಕೂ ವ್ಯತ್ಯಾಸಾನೆ ಇಲ್ದಂಗಾ ಯ್ತಲ್ಲ.

ಒಬ್ಬ :—ಹಸ್ದ ಮನ್ಷ ಮೃಗಕ್ಕಿಂತಲೂ ಕಡೆ.

ನಿರೂಪಕ :—ಹಸಿದ ಮನುಷ್ಯ ಮೃಗಕ್ಕಿಂತಲೂ ಕಡೆ. ಎಂಥ ಕಠೋರ ಸತ್ಯ ಹಸಿದ ಮನುಷ್ಯನ ಬದುಕು ಮೃಗಕ್ಕಿಂತಲೂ ಕಡೆ. ಅವರ ಸಾವು ಅದಕ್ಕೂ ಕೀಳು. ಎಷ್ಟು ಜನ ಬಲಿಯಾದರು—ಈ ಬರದ ಮಾರಿಗೆ? ಎಷ್ಟು ಲಕ್ಷಾಂತರ ಜನರ ಆಹುತಿಯಾಗಿದೆ, ಈ ಕ್ಷಾಮದ ಕುಂಡದಲ್ಲಿ. ಬಂಗಾಲ, ಬಿಹಾರ, ಬಿಜಾಪುರಗಳಲ್ಲಿ ಕೋಟ್ಯಂತರ ಜನ ಯುದ್ಧರಂಗಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಕ್ಷಾಮಕ್ಕೆ ತುತ್ತಾಗಿ ಸತ್ತರು. ಹೆಂಗಸರು, ಗಂಡಸರು, ಮಕ್ಕಳು ಹಿಡಿತುತ್ತು ಕಾಣದೆಸತ್ತರು. ಪ್ರೇತಗಳಾಗಿ ಬದುಕಿರುವ ನಮ್ಮ ನ್ನಿಂದು ಕೇಳುತ್ತಿದ್ದಾರೆ.

(ಹಿನ್ನೆಲೆಯ ಸಂಗೀತ ಕ್ಷೀಣಿಸುವುದು.)

ಪ್ರೇತಧ್ವನಿ :—೧: ನನಗೇಕೆ ಅನ್ನವಿಲ್ಲದೆ ಸಾವಾಯಿತು.(ನಾಟುವಂತೆ)

೨: (ಕೋಪದಿಂದ) ಗಂಗಾ, ನರ್ಮದ, ಕಾವೇರಿಗಳು ಹರಿಯುವ ದೇಶದಲ್ಲಿ ನೆಲ ಬರಿದಾಗಿ ಹಿಡಿತುತ್ತು ಅನ್ನ ಸಿಗದೆ, ನಾನು ಸತ್ತದ್ದೇಕೆ?

೩: (ಗಾಬರಿಯಾಗಿ) ಜಗತ್ತಿಗೆ ವೇದೋಪನಿಷತ್ತುಗಳ ಜ್ಞಾನದಾನ ನೀಡಿದ ಪುಣ್ಯಭೂಮಿಯಲ್ಲಿ ನನಗೆ ಈ ಭಿಕಾರಿ ಸಾವೆ?

೪: ಕೃಷ್ಣ, ಶಂಕರ, ಬುದ್ಧ, ಮಹಾವೀರ, ಗಾಂಧೀಜಿ ಯವರಿಂದ ಪ್ರಖ್ಯಾತವಾದ ಈ ದೇಶದಲ್ಲಿ ಅನ್ನಾವತಾರವೇಕೆ ಆಗಲಿಲ್ಲ?

೫: (ಘರ್ಜಿಸುತ್ತಾ) ನೆಲವಿದ್ದು, ಜಲವಿದ್ದು, ಜನವಿದ್ದು, ಧನವಿದ್ದು ನನಗೇಕೆ ಹಸಿವಿನ ಸಾವಾಯಿತು?

೬ (ಕಿರುಚುಧ್ವನಿಯಲ್ಲಿ ನಗುತ್ತ) ಹ್ಹ! ಹ್ಹ!! ಹ್ಹ! ಅನ್ನ ವಿದ್ದೂ ನನಗೆ ಮಾತ್ರ ಅನ್ನವಿಲ್ಲದ ಸಾವಾದದ್ದೇಕೆ ?

ಒಟ್ಟೆಗೆ :—ಏಕೆ ? ಏಕೆ ?

ನಿರೂಪಕ :—ನ್ಯಾಯವಾದ ಪ್ರಶ್ನೆಗಳು. ಬಂಗಾರದಂತೆಸೆಯುತ್ತಿದ್ದ ಭಾರತದಲ್ಲಿ ಇಂದು ಹಸಿದು ಬೆಂದವರ ನಿಟ್ಟುಸಿರಿನಿಂದ ಕಪ್ಪು ಮೋಡ ಕದಲದೆ ಕವಿದಿರುವುದೇಕೆ ?

ಪ್ರೇತಧ್ವನಿಗಳು :—ಉತ್ತರ ಕೊಡಿ ! ಯಾರಾದರೂ ಉತ್ತರ ಕೊಡಿ.

ಗಂಭೀರಧ್ವನಿ :—ಗದ್ದಲ ಬೇಡ, ನಾನು ಉತ್ತರ ಕೊಡುತ್ತೇನೆ.

ಪ್ರೇತಧ್ವನಿ :—ಉತ್ತರ ಕೊಡುತ್ತೀಯಾ ? ನೀನು ಯಾರು ?

ಗಂಭೀರ :—ನಾನು ಯಾರೆಂಬುದು ಮರೆತುಹೋಯಿತೆ ನಿನಗೆ ?

ಪ್ರೇತ :—ಹಸಿದ ಹೊಟ್ಟೆಗೆ ಯಾವ ನೆನಪೂ ಇರುವುದಿಲ್ಲ.

ಗಂಭೀರ:—ನಿಜ, ಆದರೆ ನನ್ನ ಮತ್ತು ನನ್ನ ಮಾತಿನ ಮರವೆಯೇ ನಿನ್ನ ಸಾವಿಗೆ ಕಾರಣ !

ಪ್ರೇತ :—(ತೇಗುತ್ತ) ಹಂಗಿಸುತ್ತೀಯಾ ?

ಗಂಭೀರ :—(ಅನಂತ ಕರುಣೆಯಿಂದ) ಹಂಗಿಸಲು ಅಲ್ಲ, ಅನುಕಂಪನೆಯಿಂದ. ನೀನು ಯಾರು ಬಲ್ಲೆಯಾ ? ಅಥವಾ ಅದು ಮರೆತು ಹೋಗಿದೆಯೋ ?

ಪ್ರೇತ :—ನಾನಾರೆಂಬುದು ನಿನಗೆ ನೆನಪಿದೆಯೇ ?

ಗಂಭೀರ :—ನೀನಾರು ?

ಪ್ರೇತ:—ನಾನು ಭಾರತೀಯ ಚತುರ್ವೇದಪಾರಂಗತ. ಗೀತೋಪನಿಷತ್ತು ನನಗೆ ಮುಖೋದ್ಗತ.

ಗಂಭೀರ :—ಆದರೂ ನಿನಗೂ ನನ್ನ ನೆನಪಿಲ್ಲ. ನೀನೂ ಹಸಿದು ಸತ್ತೆ. (ನಗುತ್ತಾನೆ.)

ಪ್ರೇತ :—ಮತ್ತೆ ಅಣಕಿಸುತ್ತೀಯಾ ?

ಗಂಭೀರ :—ಕ್ಷಮಿಸು. ನಾನು ಅಣಕಿಸಲಿಲ್ಲ. ನಿನ್ನ ಬಾಳೆ ಒಂದು ಅಣಕ! ಹೋಗಲಿ ಬಿಡು ವೇದ, ಉಪನಿಷತ್ತು, ಗೀತೆಗಳನ್ನು ಬಲ್ಲೆಯಲ್ಲಾ! ಅವುಗಳ ಉಪದೇಶ ನಿನಗೂ ನೆನಪಿಲ್ಲವೇ? ಪ್ರಾಣವು ಅನ್ನದಲ್ಲಿ ಪ್ರತಿಷ್ಠಿತವಾಗಿದೆ. ಅನ್ನವೇ ಆದಾಯ! ಅನ್ನವನ್ನು ನಿಂದಿಸಬೇಡ. ಅನ್ನವನ್ನು ಪರೀಕ್ಷಿಸಬೇಡ! "ಅನ್ನಂ ಬಹುಕುರ್ವೀತ." ಎಂಬ ಉಪನಿಷತ್ತಿನ ಉಪದೇಶ ನಿನಗೆ ನೆನಪಾಗದ್ದೆ ನಿನ್ನ, ಮತ್ತೆ ನನ್ನಂಥವರ ಸಾವಿಗೆ ಕಾರಣ.

ಪ್ರೇತ:—(ವ್ಯಂಗ್ಯವಾಗಿ) ನಿಜ! ನಿಜ! ಒಣವೇದಾಂತವನ್ನು ಓದಿ ಓದಿದುದೇ ನಾನು ಸತ್ತುದಕ್ಕೆ ಕಾರಣವೆಂಬುದು. ಸತ್ತ ಮೇಲೆ ಗೊತ್ತಾಯಿತು. ಈಗೇನು ಮಾಡಲಿ ಕಾಲಮೀರಿದೆ.

ಗಂಭೀರ:—ಮೂರ್ಖ ನೀನು ತತ್ವವನ್ನು ಜೀವನಕ್ಕೆ ಅನ್ವಯಿಸಿಕೊಳ್ಳಲಾರದೆ ತತ್ವಕ್ಕೇ ಅಪಕೀರ್ತಿ ತಂದ ಮಹಾ ಮೂರ್ಖ.

ಪ್ರೇತ :—(ನಗುತ್ತಾ) ನಾನು ನಂಬಿ ಸತ್ತದ್ದೆ ನನ್ನ ಮೂರ್ಖತೆಗೆ ಸಾಕ್ಷಿ! ನೀನು ಜಾಣ ಅಲ್ಲವೆ? ಹೇಳು ಅದನ್ನು ಹೇಗೆ ಅನ್ವಯಿಸಿಕೊಳ್ಳಬೇಕಾಗಿತ್ತು.?

ಗಂಭೀರ:—ಈಗಿರಲಿ ನಾನು ಹೇಳುವುದನ್ನು ಕೇಳು. ಆಮೇಲೆ ನಗು ನಿಯಂತೆ! ಗೀತೆಯಲ್ಲಿ ಕೃಷ್ಣ ಹೇಳಿದ್ದಾನೆ

(3ನೇ ಅಧ್ಯಾಯ ಶ್ಲೋಕ 15-16)

ಅನ್ನಾದ್ಭವಂತಿ ಭೂತಾನಿ |
ಪರ್ಜನ್ಯಾದನ್ನ ಸಂಭವಃ|
ಯಜ್ಞಾದ್ಭವತಿ ಪರ್ಜನ್ಯೋ
ಯಜ್ಞಃ ಕರ್ಮಸಮುದ್ಭವಃ
ಏವಂ ಪ್ರವರ್ತಿತಂ ಚಕ್ರಂ ನಾನು ವರ್ತಯತೀಹಯಃ
ಅಘಾಯುರಿಂದ್ರಿಯಾ ರಾಮೋ ಮೋಘಂ ಪಾರ್ಥ
ಸಜೀವತಿ

ಈ ಮಾತಿನ ಅರ್ಥ ನಿನಗೆ ಗೊತ್ತಿದೆಯೇ?

ಪ್ರೇತ:—ಸಕಲಚರಾಚರಜಗತ್ತು ಅನ್ನದಿಂದ ಉದ್ಭವವಾಗುತ್ತದೆ. ಮಳೆಯಿಂದ ಅನ್ನ ಜನಿಸುತ್ತದೆ. ಮಳೆಯಜ್ಞದ ಫಲ. ಯಜ್ಞ ಕರ್ಮಸಂಭೂತವಾದರೂ ಹಾಗೆ ಪ್ರವರ್ತಿಸುವ ಚಕ್ರಕ್ಕೆ ಅನುಗುಣವಾಗಿ ಯಾರೂ ವರ್ತಿಸುವುದಿಲ್ಲವೋ ಅಂಥವನು ಕೇವಲ ಇಂದ್ರಿಯ ವ್ಯಾಮೋಹಕ್ಕೆ ಒಳಗಾಗಿ ಪಾಪದಲ್ಲಿ ಜೀವಿಸುತ್ತಾನೆ ಇದು ಅಲ್ಲವೆ ಅದರ ಅರ್ಥ.

ಗಂಭೀರ:—ನಿಜ! ಯಜ್ಞವೆಂದರೆ ತ್ಯಾಗವೇ?

ಪ್ರೇತ:—ಹೌದು.

ಗಂಭೀರ:—ತ್ಯಾಗ ನಿನ್ನ ಕರ್ಮದಿಂದ ಸಂಜನಿತವಾದ್ದು ಎಂದರೆ ನಿನ್ನ ಕರ್ಮ. ನೀನು ಮಾಡುವ ಕೆಲಸ ತ್ಯಾಗ ಶೀಲವಾಗಿರಬೇಕು ಎಂದಲ್ಲವೇ? ನೀನು ಹಾಗೆ ಮಾಡಿದೆಯಾ? ನೀನು ಮಾಡುವ ಕರ್ಮದಲ್ಲಿ ತ್ಯಾಗವಿತ್ತೆ? ಇಲ್ಲ. ಸ್ವಾರ್ಥವಿತ್ತು. ನಾನು ಬಲ್ಲೆ. ನಿನ್ನ ಹೊಲದಲ್ಲಿ ಬೆಳೆದ ಬೆಳೆಯನ್ನು ನೀನೇ ಬೆಳೆದೆಯಾ?

ಪ್ರೇತ:—ಇಲ್ಲ.

ಗಂಭೀರ:—ನಿನ್ನ ಅನ್ನ ಬೇರೊಬ್ಬರ ಕರ್ಮದಿಂದ ಸಂಭವವಾಯಿತು. ಅದು ಮೊದಲ ತಪ್ಪು. ಅದರ ಪರಿಣಾಮ ಏನು ಬಲ್ಲೆಯಾ?

ಪ್ರೇತ:—ಇಲ್ಲಾ.

ಗಂಭೀರ:—ಯಾರೋ ದುಡಿದು ಸೃಷ್ಟಿಸಿದ ಅನ್ನವನ್ನು ದುಡಿಯದೆ ಕುಳಿತ ನೀನು ತಿಂದ ಫಲ-ದುಡಿಯುವವನಿಗೆ ಅನ್ನವಿಲ್ಲದಾಯಿತು. ಇದರಲ್ಲಿ ತ್ಯಾಗವಿರಲಿಲ್ಲ. ಸ್ವಾರ್ಥ ಪಿಪಾಸೆ ಮತ್ತು ದುಡಿಯದೆ ಫಲಭೋಗಿಸುವ ಪಾಶವೀಚಪಲವಿತ್ತು. ಇದರಿಂದ ನೀನು ಹಲವರ ಸಾವಿಗೆ ಕಾರಣನಾದೆ. ನಿನ್ನಂಥವನೆ ಆದರೆ ನಿನಗಿಂತ ದೊಡ್ಡ ಸ್ವಾರ್ಥಿಯೊಬ್ಬನಿಂದ ನಿನ್ನ ಸಾವು ಪ್ರಾಪ್ತಿಯಾಯಿತು.

ಪ್ರೇತ:—ಯಾರವನು?

ಗಂಭೀರ:—ಲಾಭ ಬಡುಕ! ಕಾಳಸಂತೆಗಾರ! ದೊಡ್ಡ ಮೀನು ನುಂಗಿದ ಚಿಕ್ಕ ಮೀನು ನೀನು! ನಿನ್ನದು ಸಾವಲ್ಲ ಆತ್ಮಹತ್ಯೆ!

ಪ್ರೇತ:— ಹಾ! ಹೇಗಾಯಿತದು?

ಗಂಭೀರ:— ಅದು ಇಂದಿನ ಅಥವಾ ಒಂದು ತಲೆ ಮಾರಿನ ಕಥೆಯಲ್ಲ. ಹಲವಾರು ತಲೆಮಾರುಗಳ ಕಾಲ, ನಿನ್ನ ಅಜ್ಞಾನದ, ಸ್ವಾರ್ಥದ ಬೆಳವಣಿಗೆಯ ದುರಂತ ನಾಟಕ. ಹಿಂದೆ ಬಹು ಹಿಂದೆ (ಗತಕಾಲ ವನ್ನು ಸೂಚಿಸುವಂತೆ ಸಂಗೀತ) ನೂರಾರು ವರ್ಷಗಳ ಹಿಂದೆ (ನಿಧಾನವಾಗಿ ಕ್ಷೀಣಿಸುವುದು—ಥಕ್ಕನೆ ಸಂಗೀತ ಮೃದುವಾಗಿ ಆಹ್ಲಾದಕರವವನ್ನು ಸೂಚಿಸುವುದು)

ನಿರೂಪಕ:—ಬಹುದಿನಗಳ ಹಿಂದೆ ಭಾರತದ ರೈತ ಹುಲುಸಾಗಿ ಬೆಳೆ ಬೆಳೆದು ಸುಖ ಸಂತೋಷದ ಆಗರವಾಗಿದ್ದ. ಹಳ್ಳಿ, ಹರ್ಷ, ತೃಪ್ತಿಯ ನೆಲಮನೆಯಾಗಿತ್ತು ಆಗ.

(ಹಿನ್ನಲೆಯ ಸಂಗೀತ ಸ್ಪಷ್ಟವಾಗುವುದು)

ಹೆಣ್ಣು ಧ್ವನಿಗಳು:—(ಕೋಲಾಟದ ಧಾಟಿಯಲ್ಲಿ)

ಸುಗ್ಗಿಯ ಶೃಂಗಾರ ನೋಡೆಲಾ ಚಲುವ |
ಸುಗ್ಗಿಯ ಶೃಂಗಾರ ಹಾಡೆಲಾ ಚಲುವ ||
ಬೇಲಿಗೆ ಬಿಗಿದಿದೆ ಹೂವಿನ ಹಾರ |
ಮುಗಿಲಲ್ಲಿ ಹೊಳೆತಾನೆ ಹೊನ್ನಿನ ಚಂದಿರ |
ಹೊಲವೆಲ್ಲ ಭಂಗಾರ |
ನೆಲವೆಲ್ಲ ಸಿಂಗಾರ || (ಹಾಡು ಕ್ಷೀಣಿಸುವುದು)

(ಜಾಗಟೆ, ಶಂಖಗಳ ಸದ್ದು)

ತರುಣ ರೈತ :—(ಅವಾಕದ ಸಿಟ್ಟಿನಲ್ಲಿ) ಓ! ಈ ಅಯ್ನೋರ ಕಾಟ ಬಾಳ ಆಗೋಯ್ತು. ದಾಸಯ್ನೂ ಬಂದ್ಬುಟ್ಟಿದ್ನೆ ಕಣಾ ಎಲ್ಲ ಇವರಿಗೆ ಅಳ್ದುಳ್ದು ಬರಿದಾಗೋಯ್ತು.

ವೃ. ರೈತ :—ಏ! ಬಂಡು ಏನ್ಮಾತಾಡಿಯಾ ಭೂತಾಯಿ ಕೋಡೋವಾಗ

ಇಲ್ಲಾನ್ವಾರ್ರ್ದು ಮಗೆ. ತಾಯಿ ಸಂತೋಸ್ಟಾಗಿ ಕೊಟ್ಟಾಗ ಮಗಜೀಸ್ತನ ಮಾಡ್ವಾರ್ರು. ಹತ್ತತ್ತು ಸೇರು ಅಳದ್ಬುಡು. ಸುತ್ಲ ಇರೋ ಜನ ನಗ್ತಾ ಇನ್ರೇನೆ ನಾವೂ ಸಂತೋಸ್ಸಾಗಿರೋವುದು.

(ಸ್ವರ ಮತ್ತು ಸಂಗೀತ ಕ್ಷೀಣವಾಗುವುದು)

ನಿರೂಪಕ :—ಇದು ಅಂದಿನ ಭಾವನೆ. ಬೆಳೆದದ್ದೆಲ್ಲಾ ತನಗೆ ಇರಬೇಕೆಂಬ ಸ್ವಾರ್ಥವಿರದೆ ಹತ್ತು ಜನರ ಹರ್ಷದಲ್ಲಿ ತಮ್ಮ ಬಾಳ ಸ್ವರ್ಗವನ್ನು ಕಾಣುತಿದ್ದ ಕಾಲವದು. ಆಗ ಹತ್ತು ಜನರಿದ್ದರೂ ಒಂದೇ ಕುಟುಂಬ. ವ್ಯವಹಾರಕ್ಕೆ ನಾಣ್ಯ ಆಧಾರವಾಗಿರಲಿಲ್ಲ ಆದರೆ ಬರಬರುತ್ತಾ ಕಾಲ ಬದಲಾಯಿಸಿತು.

(ಸಂಗೀತದ ಗತಿ ಬದಲಾವಣೆಯಾಗಿ ತುಸು ಹೆಚ್ಚಾಗುವುದು)

ವೃ. ರೈತ :—ಶಿವ ! ಶಿವ! ಎಂಥ ಕಾಲ ಬಂದೋಯ್ತು ಭಗವಂತ! ನಾನು ಕಣ್ಮುಚ್ಚಾಕೆ ಮೊದ್ಲೇ ಜಮಾನೆಲ್ಲಾ ಪಾಲ್ಮಾಡಿಬಿಡು ಅಂತ ಗಂಟಿಟ್ಬಿಟ್ಟವರೆ ಈ ಮಕ್ಳು. ತಾಯಿನ ಹಂಚ್ಕೊಂಡು ಮಗ ಬದ್ಕೊದುಂಟಾ ? ಇರೋ ನಾಕೆಕ್ರೆ ಜಮಾನು ಒಟ್ಗೆ ಇದ್ರೆ ಹತ್ತು ಜನಾನಾದ್ರು ಸಾಕ್ತದೆ. ಅದ್ನೆ ನಾಕ್ಜನ ಹಂಚ್ಕಂಡ್ರೆ ಯಾರೂ ಬದ್ಕೊಕಾಗೋಲ್ಲ. ನನ್ಮಾತು ಕೇಳೋ ಮಗಾ ಹಟಾಬ್ಯಾಡ ನಾನೇಳಾದು ಬದ್ಕೋ ಮಾತು.

ತ. ರೈತ :—ಹಂಗಾಗಕಿಲ್ಲ. ನಾನಾಗ್ಲೆ ಬಂದದು ಹೇಳ್ಬಿಟ್ಟೇನ್ವಿ. ಒಂದೆ ಕರೇನೋ, ಕಾಲೆಕರೇನೋ, ನಂದೂ ಅನ್ನಾದು ಕಡ್ಡಿಕೋರ್ದು ಬೇರೆ ಮಾಡ್ಕೋಬೌದು ಬದಕಿದ್ರೆ ನಾನು ಬದಕ್ತೇನಿ. ಸತ್ರೆ ನಾನೇ ಸಾಯ್ತೀನಿ, ಒಬ್ನ ಹಂಗ್ನಾಗಿರಾಕೆ ನನ್ಕೈಯಿಂದ ಸಾಧ್ಯ ವಿಲ್ಲ.

ವೃ. ರೈತ :—ನನ್ದೇನ್ನೈತೆ, ಎಂಗ್ಬೇಕೋ ಅಂಗ್ಮಾಡಿಕೊಳ್ರಿ! ನಾನಿನೆಷ್ಟು ದಿನ ಬದುಕ್ತೇನಿ ! ಊರು ಹೋಗು ಅಂತೈತೆ, ಕಾಡು ಬಾಂತ

ಕರಿತ್ತೈತೆ. ನನ್ನಾಲ ಆಗೋಯ್ತು. (ಹಿನ್ನಲೆಯ ಸಂಗೀತ ಸ್ವಲ್ಪ ಹೆಚ್ಚು ದಾರುಣವಾಗುವುದು.)

ನಿರೂಪಕ :—ಅವಿಭಕ್ತ ಕುಟುಂಬದ ಸುಖ ಸಂತೃಪ್ತಿಯ ಕಾಲ ಬದಲಾಗಿ ವಿಭಕ್ತ ಕುಟುಂಬದ ಅಸಂತೃಪ್ತಿಯ ಕಾಲ ಆರಂಭವಾಯಿತು ಒಂದು ಕುಟುಂಬಕ್ಕೆ ನಾಲ್ಕು ಎಕರೆ ಇದ್ದದ್ದೂ ಒಂದು ಸಲ ಸಾಲಕ್ಕೆ ಒಂದುವರೆಯಾಯಿತು. ನಾಲ್ಕು ಎಕರೆಗೂ ಒಂದೇ ನೇಗಿಲು, ಒಂದು ಜತೆ ಎತ್ತು ಸಾಕಾಗುತ್ತಿದ್ದವು. ಈಗ ಒಂದು ಎಕರೆಗೇ ಒಂದು ನೇಗಿಲು, ಒಂದು ಜತೆ ಎತ್ತು ಬೇಕಾಯಿತು. ವ್ಯವಸಾಯದ ವೆಚ್ಚ ಹೆಚ್ಚಿತು, ಅದರೊಂದಿಗೆ.........

ಬಸವಮ್ಮ :—ಅಂಗಂದ್ರೆ ಎಂಗಾದಾತು, ಮಗ ಎದೆ ಉದ್ದ ಬೆಳೆದು ನಿಂತಿದಾನೆ. ಹೋದವರ್ಷವೇ ಮದ್ವೆ ಮಾಡ್ಬೇಕಾಗಿತ್ತು. ಮಳೆಬೆಳೆ ಆಗ್ಲಿಲ್ಲಾಂತ ಬಿಟ್ಟಿದ್ದಾಯ್ತು. ಇನ್ನು ಹಿಂಗೇಬಿಟ್ರೆ ಬೆಳೆದ ಹುಡುಗ ಕೈಗೆ ಸಿಗ್ತಾನಾ?

ರೈತ :—ನಿನೇಳಾದು ನಿಜ! ಆದ್ರೆ ದುಡ್ಡೆಲ್ಲಿಂದಾ ತರಾನಾ ಈಗಂತೂ ಮಾತೆತ್ತಿದರೆ ದುಡ್ಡು ಮೊದಲು ರೊಕ್ಕ ಮಡ್ಗಿ ಮಾತಾಡು ಅಂತಾರೆ ಜನ.

ಬಸವಮ್ಮ :—ನಿನ್ನಿಷ್ಟ. ಇಲ್ಲಾಂತ ನಾನು ಅನ್ಲಿಲ್ಲಾ. ನನ್ಗೂ, ಅದು ಗೊತ್ತೈತೆ ಆದ್ರೂ ಎಲ್ಲಾದ್ರೂ ಸಾಲಾಸೋದ್ರು ಕೊಂಡು ಅದೊಂದು ಮುಗಿಸ್ಬಿಡಬೇಕು.

ರೈತ :—ನಾವು ಹಾಳಾಗಾಕೆ ಅದೊಂದೇ ಉಳಿದಿರಾದು........

ನಿರೂಪಕ :—ಸಾಲ ತೆಗೆಯುವುದು ವಿನಾಶದ ಹಾದಿ ಎಂದು ಅವನಿಗೆ ಗೊತ್ತಿತ್ತು. ಆದರೆ ಕುಟುಂಬದ ಐಕ್ಯತೆಯ ಅಸ್ತಿಯ ಭಾರ ಸಡಲಿದಂದೇ ಗ್ರಾಮದ ಐಕ್ಯತೆಯ ಭಾರವೂ ಕಳಚಿ ಸಾಲದ ರೀತಿಯಲ್ಲಲ್ಲದೆ ಒಬ್ಬರು ಮತ್ತೊಬ್ಬರಿಗೆ ನೆರವು ನೀಡುವ ಪರಿಸ್ಥಿತಿ

ತೊಲಗಿ ಹೋಗಿತ್ತು. ಸಾಲ ಕೊಳ್ಳುವುದು ಪತನಕ್ಕೆ ದಾರಿ ಎಂದು ತಿಳಿದು ತಿಳಿದು ರೈತ ಅನಿವಾರ್ಯವಾಗಿ ಸಾಲ ತೆಗೆಯಲೇ ಹೋಗಬೇಕಾಯಿತು.

(ಹಿನ್ನೆಲೆಯ ಗಂಭೀರ ಸಂಗೀತ ಆಗುವುದು)

ನಿರೂಪಕ :— ಸಾಹುಕಾರನ ಷರತ್ತುಗಳಿಗೆ ಒಪ್ಪಿ ರೈತ ಇನ್ನೂರು ರೂಪ್ಯಾಗೆ ಪತ್ರ ಬರೆದು ಕೊಟ್ಟು ನೂರಿಪ್ಪತ್ತು ರೂಪಾಯಿ ತೆಗೆದು ಕೊಂಡು ಬಂದ. ಮೂರನೇ ವರ್ಷ ಮಳೆ ತಪ್ಪಿತು, ಬೆಳೆ ಬರಲಿಲ್ಲ. ಸಾಲ ತೀರಲಿಲ್ಲ. ಬಡ್ಡಿ ಬೆಳೆದು ಬಲವಾಯಿತು. ಮರು ವರ್ಷ ಮಳೆಯೇನೋ ಬಂತು. ಬೆಳೆಯೂ ಆಯಿತು. ಆದರೆ ಕಂದಾಯ, ಸಾಲದ ಬಡ್ಡಿ ತೀರಿಸಲೇ ಅರ್ಧ ಬೆಳೆ ವೆಚ್ಚವಾಗಿ ಸಾಲ ಉಳಿಯಿತು. ಅರೆಹೊಟ್ಟೆ ಊಟವಾಯಿತು ಮುಂದಿನ ವರ್ಷ ಅದೇ ಕಥೆ. ಕಡೆಗೊಂದು ದಿನ .... ....

(ತಮಟೆಯ ಸದ್ದು. ಹಳ್ಳಿಯ ಆಳು ಆ ಸದ್ದಿನೊಂದಿಗೆ ಕೂಗುತ್ತಾನೆ.)

ತಮಟೆಯವನು :— ಕೇಳ್ರಪ್ಪ, ಕೇಳಿ, ಕೆಳಮನೆ ಬೋರಯ್ನ ಹೊಲಾನಾ ಈ ದಿನ ಮಧ್ಯಾಹ್ನ ಪಂಚಾಯ್ತಿರ ಇದ್ರು ಬಹಿರಂಗ ಹರಾಜು ಮಾಡ್ತವ್ರೆ. ಯಾರ್ಕೇನಾದ್ರೂ ಸವಾಲ್ ಮಾಡಬೈದು .... ....

ನಿರೂಪಕ :— ಸಾಲದ ಬಾಕಿಗೆ ಬೋರಯ್ನ ಹೊಲ ಹರಾಜಾಯಿತು. ಸ್ವತಂತ್ರ ರೈತನಾದ ಬೋರಯ್ಯ ಹೊಟ್ಟೆಯ ಪಾಡಿಗೆ ಬೇರೆ ದಾರಿಯಿಲ್ಲದೆ ಸಾಹುಕಾರನ ಹೊಲದಲ್ಲೆ ಊಳಿಗದ ಆಳಾದ. ಅವನ ಸಂಸಾರವೇ ಸಾಹುಕಾರನ ಗುಲಾಮವಾಯಿತು. ಒಂದು ಕಾಲಕ್ಕೆ ಉಳುಮೆ ಅವನಿಗೆ ಸಂತೋಷದ ಆಗರವಾಗಿತ್ತು. ಈಗ ಅದು ಬೇಸರದ ಬದುಕು–ಉತ್ಸಾಹವಿಲ್ಲದ ಉಳುಮೆಯಿಂದ ಯಾರಿಗೂ ಸಾಕಾಗುವಷ್ಟು ಬೆಳೆ ಬರಲಿಲ್ಲ. ಬಂದದ್ದರಲ್ಲಿ ಮೂರು ಪಾಲು ಪಟ್ಟಣದಲ್ಲಿ ಕೂತ ಧಣಿಗೆ–ಉಳಿದದ್ದು–ಕಾಲು ಹೊಟ್ಟೆಯ ಕೂಳು ಉಳುವ ರೈತನಿಗೆ. ಹೀಗಾಗಿ .... ....

ರೈತ :—(ಉಬ್ಬಸದಿಂದ ಕೆಮ್ಮುತ್ತ) ಚನ್ನ ! ಹೊಲ್ದ ಕಡೆ ಹೋಗಾಲ್ವೇನ? ಆಗ್ಲೆ ಬಿಸ್ಲು ನೆತ್ತೀಯ್ಯಾಗೆ ಬಂತು.

ಚನ್ನ :—ಈ ಆರಂಭ ಯಾವೋನಿಗೆ ಬೇಕು ! ದುಡ್ಡು, ದುಡ್ಡು .... ನಾವು ಸಣ್ಣಗಾಗೋವುದು, ಯಾವೋನೋ ತಂಪಾಗಿ ಕೂತು ಮಜಾ ಮಾಡೋವುದು. ಈ ಬದ್ಕು ನನ್ಕೈಲಿ ಆಗಾಕಿಲ್ಲ. ಅಯ್ಯೋ ನಾನೆಲ್ಲಾದ್ರೂ ಒರಟೋಯ್ತೀನಿ.

ರೈತ :—ಎಲ್ಲೋಗ್ತೀಯಾ ! ಎಲ್ಲೋದ್ರು ಚಾಕ್ರಿ ಮಾಡೋದೇ. ಮಾಡಿ ಮನೆ ರಂಗಪ್ಪನ ಮಗನ ಹಾಗೆ ನೀನು ಏನು ಇದ್ಯಾ ಕಲ್ತಿದ್ರೆ, ಅವನಂಗೆ ನೀನೂ ಸರಕಾರಿ ಚಾಕ್ರಿ ಮಾಡ್ಬೋದಾಗಿತ್ತು. ಏನೂ ಅರೀದ ಮುಕ್ತ ನೀನು, ನೀನೇನು ಮಾಡ್ತಿ?

ಚನ್ನ :—ಯಾಕಯ್ಯ ಇಂಗಂತಿ ? ಪಟ್ನದಾಗ ಬೋಡೊಡ್ಡ ಕಾರ್ಖಾನೆ ಆಗಿದಂತೆ. ದಿನಕ್ಕೆ ೧ ರೂಪಾಯಿ ಕೂಲಿ ಕೊಡ್ತಾರಂತೆ. ಇದ್ಕಿಂತ ಅದು ಮೇಲಲ್ವಾ ?

ರೈತ :—ಓದ್ದೋರಿಗಂತು ಹಳ್ಳಿ ಬ್ಯಾಡಾಯ್ತು. ನಿನ್ನಂತೋರು ಕಾರ್ಖಾನೆ ಅಂತ ಹೋಗ್ಬಿಟ್ರೆ ಇಲ್ಲಿ ಗೈಯ್ಯೋರು ಯಾರು ? ಹೊಲ್ದಾಗೆ ಕೆಲ್ಸ ಮಾಡೋದು ನಮ್ಮಜ್ಜ, ಮುತ್ತಜ್ಜನ ಕಾಲದಿಂದ ಬಂದದ್ದು ...... ......

ಚನ್ನ :—ಅಪ್ಪಾ ಆಕಿದ ಆಲದ ಮರಾಂತ ಅದ್ನೇ ನೇಣು ಹಾಕಿಕೊಂಡ್ರೆ ಹೂಳೋಕೆ ಯಾರೂ ಬರೋಕಿಲ್ಲ. ಯಾರಾದ್ರು ಗ್ಯಾಳೀಳು. ನನ್ಗಂತೂ ಸಾಕಾಗಿ ಓಗಿದೆ ಈ ಬೇಸಾಯ. ನಾಳೆ ಬೆಳಿಗ್ಗಾಗೆ ನಾನು ಪಟ್ಣಕ್ಕೋಯ್ತೀನಿ. ಮಗ್ಲ ಮನೆ ಈರ, ಆಚೆಮನೆ ಕಾಳ, ಮುಂದ್ಲ ಮನೆ ಅಜ್ಜಿಗ ಎಲ್ಲರೂ ಬರ್ತಾರಂತೆ ...... ......

(ಸಂಗೀತ ತೀರ ಬಿರುಸಾಗುವುದು)

ನಿರೂಪಕ :—ಚನ್ನ-ಅಜ್ಜಿಗ-ಈರ-ಕಾಳ ಒಬ್ಬೊಬ್ಬರಾಗಿ ಹಳ್ಳಿಯ ಹೂ

ಗಳು—ಯೌವನದಲ್ಲಿ ಬಹಳ ಕಷ್ಟವನ್ನು ಭರಿಸಲಾರದೆ ಕಾರ್ಖಾನೆಯಲ್ಲಿ ಸಿಗುವ ನಗದು ಕೂಲಿಗೆ ಆಸೆ ಪಟ್ಟು ನಗರಕ್ಕೆ ತೆರಳಿದರು. ಒಂದು ಕಡೆ ಅವಿದ್ಯಾವಂತರ ಅಸಂತೃಪ್ತ ರೈತಯುವಕರು, ಕಾರ್ಖಾನೆಗೆ ರಫ್ತಾದರೆ ಮತ್ತೊಂದು ಕಡೆ ಅಷ್ಟಿಷ್ಟು ಕಲಿತವರು.

ಬಸವಯ್ಯ :— ಈ ಹಾಳು ಹಳ್ಳೀಲಿ ಹ್ಯಾಗಪ್ಪ ಇರೋದು. ಇಲ್ಲೇನು ಅಂದಾನೇ, ಚಂದಾನೇ. ಶುದ್ಧ ಕಾಡು ಕೊಂಪೆ. ನಾನು ವಿದ್ಯಾ ಕಲಿತದ್ದು ಇಲ್ಲಿ ಸಾಯುಲಿಕ್ಕಂದೇ. ಇಲ್ಲೇನಿದೆ ಬರಡು ಭೂಮಿಲಿ ಬೆವರು ಸುರಿಸಿದರೆ ಬದುಕಿದ್ದಕ್ಕೆ ಸಾರ್ಥಕವಾದ ಹಾಗಾಯಿತು.

ತಂದೆ :—ಹಾಗಾದರೆ ಏನು ಮಾಡುತ್ತೀಯಾ ?

ಬಸವಯ್ಯ :— ಬೆಂಗಳೂರಿನಲ್ಲಿ ಸರಕಾರಿ ಚಾಕ್ರಿ ಮಾಡ್ತೀನಿ.

ನಿರೂಪಕ :— ಸರಕಾರಿ ಚಾಕರಿ ! ಅದೊಂದು ಬಲೆ, ದಿನದಿನಕ್ಕೆ ಹಾಳಾಗುವ ಗ್ರಾಮದ ಅನಾಕರ್ಷಕ ಜೀವನ ಕಲಿತವರನ್ನು ಪಟ್ಟಣದತ್ತ ಕಳುಹಿಸಿತು. ಕಲಿಯದವರು ಕೂಲಿಗೆಂದು ಪಟ್ಟಣಕ್ಕೆ ಹೋದರೆ ಕಲಿತವರು ಸರಕಾರಿ ಚಾಕರಿಗೆಂದು ಪಟ್ಟಣಕ್ಕೆ ಹೋದರು. ಹಳ್ಳಿಯ ಜೀವ ಬೆಳೆಯುದಂತೆ ದವಸವೂ ...... ....

ಒಬ್ಬ :— ಏನಯ್ಯ ಇಷ್ಟೊತ್ತಿಗೆ ಗಾಡಿ ಕಟ್ತಾ ಇದ್ದೀಯ ?

ಇನ್ನೊಬ್ಬ :— ಸಾಹುಕಾರ್ರ ದವಸ ಪಟ್ಟಣಕ್ಕೆ ಹಾಕಿ ಬರಬೇಕು. ಹಾಗೆ ನಂದು ನಾಲ್ಕು ಚೀಲ ಕಾಳಿದೆ. ಪಟ್ಟಣದಲ್ಲಿ ಒಳ್ಳೆ ಧಾರಣೆ ಸಿಗುತ್ತೆ. ಹೋಗ್ತೀನಪ್ಪ. ಬಿಸಿಲೇರುತ್ತದೆ. (ಗಾಡಿ ಹೋಗುವ ಸದ್ದು.)

ನಿರೂಪಕ :— ಜನ, ಧನ, ಬೆಳೆ ಎಲ್ಲವೂ ಹಳ್ಳಿಯಿಂದ ಪಟ್ಟಣದತ್ತ ಕೋಡಿ ಬಿದ್ದ ಕೆರೆಯಂತೆ ಹರಿಯಿತು. ದಿನದಿನಕ್ಕೆ ಹಳ್ಳಿ ನಿರ್ಜನ ಅರಣ್ಯವಾಯಿತು. ರೈತರಿಲ್ಲದೆ ಹೊಲಗಳು ಬೀಳು ಬಿದ್ದವು. ಮನೆಗಳು ದೀಪವಾರಿ ಕತ್ತಲ ಗೂಡಾದುವು ...... ......

(ನಿರ್ಗತಿಕ ಹಳ್ಳಿ ಜೀವನದ ಚಿತ್ರಿಸುವಂತೆ. ....ನಾಯಿಗಳ ಬೊಗಳು ವಿಕೆ ..... ಅಂತೆ ಹಿನ್ನೆಲೆಯ ವಾದ್ಯ ಸಂಗೀತ.)

ನಿರೂಪಕ :—ಆದರೆ ಪಟ್ಟಣದಲ್ಲಿ ...... ....

(ಜನಭರಿತ ಪಟ್ಟಣದ ಕೋಲಾಹಲವನ್ನು .... ಕಾರ್ಖಾನೆಯ ಗದ್ದಲವನ್ನು ಚಿತ್ರಿಸುವಂತೆ ಹಿನ್ನಲೆಯ ವಾದ್ಯಸಂಗೀತ)

ಪಟ್ಟಣದಲ್ಲಿ ಕಾಲಿಡಲು ತೆರವಿಲ್ಲದಷ್ಟು ಜನಸಂದಣಿ .... ಇಲ್ಲಿ ವಿಶಾಲವಾದ ರಾಜವೀಥಿಗಳು, ಹೊಳೆವ ಅಂಗಡಿ ಮುಂಗಟ್ಟು ಗಳು. ರಸ್ತೆಗಳೊಂದಿಗೆ, ಜನರೊಂದಿಗೆ ಸ್ಪರ್ಧಿಸುವ ಕಾರು, ಮೋಟಾರು, ರೈಲು, ಜಟಕಾ, ಹಲವಾರು ಬಗೆಯ ವಾಹನಗಳು ...... ಹಳ್ಳಿ ಹಾಳಾಗಿ ಪಟ್ಟಣ ಬೆಳೆಯಿತು, ದೈತ್ಯನಂತೆ ಬೆಳೆಯಿತು. ವೇಶ್ಯೆಯಂತೆ ಗ್ರಾಮದಿಂದ—ಜನರನ್ನು ಹಲವಾರು ಬಲೆ ಹಾಕಿ ಸೆಳೆಯಿತು ಪಟ್ಟಣ. ಪಟ್ಟಣದ ವೈಭವಕ್ಕೆ ಮನಸೋತು ಬಂದರು ಜನ. ದಿನದಿನಕ್ಕೆ ಬೆಳೆಯಿತು ಜನಸಂದಣಿ. ಮೂರು ಜನ ನಿಲ್ಲುವಲ್ಲಿ ನೂರಾರು ಜನ ಮಲಗಿ ಜೀವನ ಮಾಡುತ್ತಾರೆ. ಆದರೆ ತಮ್ಮ ಕೆಳಗೆ ಭೂಮಿ ಕುಸಿಯುತ್ತಿರುವ ಅರಿವು ಯಾರಿಗೂ ಇಲ್ಲ.

(ಹಿನ್ನೆಲೆಯ ವಾದ್ಯಸಂಗೀತ ಬಿರುಸಾಗುವುದು.)

ಗುಮಾಸ್ತ :—ಸಾಕಪ್ಪ! ಸಾಕು ಈ ಪಟ್ಟಣದ ಜೀವನ. ಎಷ್ಟು ಸಂಬಳ ತಂದರೂ ಎರಡು ಹೊತ್ತಿನ ಊಟಕ್ಕೇ ನೇರವಾಗೋಲ್ಲ. ದಿನಕ್ಕೆಂಟು ಗಂಟೆ ಆಫೀಸಿನಲ್ಲಿ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿದರೂ ಮೈಮುಚ್ಚೋಕೆ ಒಂದು ಕೋಟು ಹೊಲಿಸಲಿಕ್ಕೆ ಸಾಧ್ಯವಿಲ್ಲ. ದುಡಿದದ್ದೆಲ್ಲ ಹೊಟ್ಟೆಗೆ—ಡಾಕ್ಟರ ಬಿಲ್ಲಿಗೆ. ಈ ಸರಕಾರಿ ಚಾಕರಿ ಬೇಡ ...... ......

ಕೂಲಿ :—ನಮ್ಮಂಥ ಕೂಲಿಯೋರ ಪಾಡು ಬೇಡ ಬದುಕಿರೋಕಿಂತ ಸಾಯೋದೇ ಮೇಲು.

ನಿರೂಪಕ :—ಜನಸಂದಣಿ ಬೆಳೆದಂತೆ ಜತೆಯಲ್ಲಿ ನಿರುದ್ಯೋಗವೂ ಬೆಳೆ

ಯಿತು. ಜನದಟ್ಟಣೆ, ಏರುವ ಜೀವನದ ವೆಚ್ಚ—ನಿರುದ್ಯೋಗ —ಅನಾರೋಗ್ಯ—ಮೀರಿದ ಶೋಷಣೆ ನಗರದಲ್ಲಿ! ಹಳ್ಳಿಯಲ್ಲಿ....

ಒಬ್ಬ ರೈತ :—ಏನು ಬಸಣ್ಣ ಇಂಗಾಗೋಯ್ತು. ಹೋದ ವರ್ಷ ೩೦ ಚೀಲ ಕಾಳು ಬಂತು. ಅಂಗಂದ್ರೆ ಈ ವರ್ಷ ೧೫ ಚೀಲಾನೂ ಆಗ್ಲಿಲ್ಲ. ಇಂಗಾದ್ರೇನಾ ಮಾಡೋದು?

ಇನ್ನೊಬ್ಬ :—ನಂಗೋ ಅಂಗೇ ಆಯ್ತು ಕಣಣ್ಣಾ. ಮಾಡೋಕೆ ರೈತರು ಸಿಕ್ದೆ ೧೦ ಎಕ್ರೆ ಜಮೀನು ಬೀಳ ಬಿಟ್ಬಿಟ್ಟೆ. ಮತ್ತೇನು ಮಾಡಾ ಕಾಗ್ತದೆ ಹೇಳು. ನಾನು ಒಬ್ನೆ ಎಷ್ಟು ಅಂತ ನೋಡ್ಕಳ್ಳಿ. ಇಬ್ರು ಮಕ್ಳು ಚಾಕ್ರಿಗೆ ಸೇರ್ಕೊಂಡು ಬಿಟ್ರು. ಮುದ್ಕ ನಾನೆಷ್ಟು ಗೇಯ್ಲಿ ಏಳು.

ಒಬ್ಬ :—ನನ್ಪಾಡು ಅಂಗೇ ಆಗ್ಯೆತೆ. ಅಲ್ಲಾ ಬಸಣ್ಣ—ಜನ ಹಳ್ಳಿ ಯಿಂದ ಓಯ್ತು ಅಂತಾ ಹಳ್ಯಾಗೆ ಮಳೇನೂ ಕಡ್ಮೆ ಆಗೋದಾ? ಇದೇನಾಚರ್ಯಂತೀನಿ.

ಇನ್ನೊಬ್ಬ :—ಜನ ಓದ್ರೂ ಅಂತ ಅಲ್ಲಣ್ಣ. ಪಟ್ನದಾಗೆ ಸೌದೆಗೆ ಬೆಲೆ ಸಿಗ್ತಾದೆ ಅಂತ ಸಣ್ಣಪುಟ್ಟ ಗಿಡಾನೂ ಬಿಡ್ದೆ ಕಾಡ್ನೆಲ್ಲಾ ಸವರಿ ಬಿಟ್ರೆ ನೆಲ್ದಾಗೆ ಹಸುರಿಲ್ದೆ ಮಳೆ ಹೋಯ್ತದಾ ...... ಇಲ್ಲೋ ...... ಭತ್ತ ಬೆಳೆಯೋಕೆ ಜನಾ ಇಲ್ಲ, ಇನ್ನು ಕಾಡು ಬೆಳೆಸೋರು ಯಾರು? ಯಾಕೋ ಬರ್ತಾ ಬರ್ತಾ ನಮ್ಮ ಸೀಮೆ ಮರಳ್ಗಾ ಡಾಗ್ತಾ ಇದೆ ...... ......

ಒಬ್ಬ :—ಹೌದೌದು. ಅಂಗೇ ಆಗದೆ ಈಗ ...... ....

ನಿರೂಪಕ:—ಕಾಲ ಕೆಟ್ಟು ಹೋಯಿತು! ಅದು ಜನರ ದೂರು. ಕಾಲ ವನ್ನು ಬೈಯ್ಯುತ್ತ ಹಳ್ಳಿಯ ಜನ ದಿನ ದಿನಕ್ಕೆ ಕೃಶರಾದರು.... ಅತ್ತ ಪಟ್ಟಣದ ಜನ ಜೀವಂತ ಜ್ವಾಲಾಮುಖಿಯ ಮೇಲೆ ಮೈ ಮರೆತು ಮಲಗಿದವರಂತೆ, ಗಾಣಕ್ಕೆ ಕಟ್ಟಿದ ಕೋಣಗಳಂತೆ ಬದು

ಕುತ್ತಿದ್ದರು. ಎಲ್ಲರಿಗೂ ವೈಮರೆವು ತಮ್ಮ ದುಃಖದ ಹೊಣೆ ಗಾರಿಕೆಯನ್ನು ಇತರರ ಮೇಲೆ ಹೊರಿಸುವ ಚಪಲ....

೧ ಕೂಲಿ:—ಇದೇನು ಗ್ರಹಚಾರ....ಅನ್ನದ ಬೆಲೆ ಒಂದಕ್ಕೆ ನಾಲ್ಕಾಯಿತು.

೨ ಕೂಲಿ:—ಇದು ಬಂಡವಾಳಗಾರರ ಪಿತೂರಿ. ನಾವು ಕೂಲಿ ಹೆಚ್ಚಿಸಲು ಮುಷ್ಕರ ಹೂಡಿದ್ದಕ್ಕೆ ಹೀಗೆ ಧಾನ್ಯದ ಬೆಲೆ ಹೆಚ್ಚಿಸಿ ಸೇಡು ತೀರಿಸುತಿದ್ದಾರೆ....ಇದು ನಮ್ಮನ್ನು ಮುರಿಯಲು ಒಳಸಂಚು....

(Cut)

ಭಾಷಣಕಾರ:—ಇದು ಭಾರತೀಯರನ್ನು ಸದಾ ದಾಸ್ಯಪಲ್ಲದ ಬಯಸಿದ ಪರದೇಶಿಯರ ದಬ್ಬಾಳಿಕೆ....ನಮ್ಮ ಸ್ವತಂತ್ರವನ್ನು ಕಸಿದಿದ್ದಲ್ಲದೆ ನಮ್ಮ ಬಾಯ ತುತ್ತನ್ನು ಕಸಿಯುವ ದರೋಡೆ. (Cut)

ನಾಗರಿಕ:—ಪಟ್ಟಣಿಗನು ಹಸಿದು ಸಾಯಬೇಕೆಂದು ಹಳ್ಳಿಯ ರೈತರ ಹಗಲು ದರೋಡೆ! (Cut)

ಮತ್ತೊಬ್ಬ:—ಅನ್ಯಾಯ! ಅತ್ಯಾಚಾರ! ಎಲ್ಲೆಲ್ಲಿ ತಿರುಗಿದರೂ ಅನ್ನವಿಲ್ಲ. ಅನ್ನಕ್ಕಾಗಿ ಕ್ರಾಂತಿ! ಕ್ರಾಂತಿ

ನಿರೂಪಕ:—ಅದು ಸರಿ! ಕ್ರಾಂತಿ....ಅನ್ನಕ್ಕಾಗಿ ಕ್ರಾಂತಿ! ಪಟ್ಟಣದಲ್ಲಿ ಕ್ರಾಂತಿಯ ಕೂಗಾಟ. ಹಳ್ಳಿಯಲ್ಲಿ....

೧ನೇ ರೈತ:—ಅಣ್ಣ! ಮಳೆ ಕೈಕೊಟ್ಟಿತು. ಹಾಕಿದ ಸಸಿ ಹೊಲದಲ್ಲೆ ಸುಟ್ಟುಹೋಗಿ ಬೀಜದ ಕಾಳು ವ್ಯರ್ಥವಾಯಿತು.

೨ನೇ ರೈತ:—ಅಯ್ಯಯ್ಯೋ! ಇಂಗಾಗ್ತದೆ ಅಂತ ಗೊತ್ತಿರ್ಲಿಲ್ಲ ಕಣಣ್ಣಾ ಹೋದ ವರ್ಷ ಇದ್ದ ನಾಲ್ಕು ಚೀಲ ಕಾಳ್ನೂ ಪೇಟೇಲಿ ಮಾರ್ಬಿಟ್ಟೆ.

೧ನೇ ರೈತ:—ಪಟ್ನದೋರು ಹಾಳಾಗ ದುಡ್ಡು ತೋರ್ಸಿ ನಮ್ಮ ಬಾಯಾಗೆ ಮಣ್ಣಾಕಿ ಬಿಟ್ರಲ್ಲಾ ಹಾಳಾದೋರು.

(ಇದ್ದಕ್ಕಿದ್ದಂತೆ ರೋಧನ ಧ್ವನಿ ವ್ಯಾಪಿಸುವುದು)

೧ನೇ ರೈತ:—ಏನಾಯ್ತಪ್ಪೋ ಇದು........

೨ನೇ ರೈತ:—ಮಾದಣ್ಣನ ಹೆಂಡ್ತಿ ಹೊಟ್ಟೇಗಿಲ್ದೆ ಸತ್ತೋದ್ಲು....

೧ನೇ ರೈತ:—ಅಯ್ಯೋ! ನನ್ನ ದನಾಸ ಯಾರೋ ಕೊಂದು ಹಾಕಿ ಬಿಟ್ರಲ್ಲೋ ಶಿವನೇ....

೨ನೇ ರೈತ:—ಅಯ್ಯಯ್ಯೋ! ನನ್ಮಗೀಗೆ ಹಾಲಿಲ್ದೆ ಜೀವ ಬಿಡ್ತಾ ಇದೆಲ್ಲಾ ಭಗವಂತಾ....

೩ನೇ ರೈತ—ಅವ್ವಾ! ಕವಳತಾಯಿ ಮೂರ್ದಿನ್ದಿಂದ ಹೊಟ್ಟೆಗಿಲ್ಲ. ಪ್ರಾಣ ಹೋಗಾದಪ್ಪಾ! ಒಂದಷ್ಟು ಗಂಜಿ ಹುಯ್ರಿ!

೪ನೇ ರೈತ:—ನಮ್ಮ ಕಾಳೆಲ್ಲಾ ಪಟ್ಣದಾಗಿದೆ ನಡೀರಿ......ಅಲ್ಲಾದು ಹೋಗೋಣ... ಇಲ್ಯಾಕೆ ಉಪಾಸಾ ಸಾಯೋದು....

ಗುಂಪು:—ನಡೀರಿ....ನಡೀರಿ....ನಡೀರಿ

ನಿರೂಪಕ:—ಕಾಳು ಬೆಳೆದು ಜಗತ್ತಿಗೆ ಅನ್ನವನ್ನು ನೀಡುವ ರೈತ ತಾನೇ ಅನ್ನ ಹುಡುಕಿಕೊಂಡು ಹೊರಟ!—ಕಾಳು ಬೆಳೆಯದ ಪಟ್ಟಣಕ್ಕೆ. ಎತ್ತು, ಕರ, ಹೊಲ, ಬಂಗಾರ, ಕಡೆಗೆ ಹೆಂಡಿರು ಮಕ್ಕಳನ್ನು ಮಾರಿದ ಅನ್ನಕ್ಕಾಗಿ ಹಳ್ಳಿಯಿಂದ ಪಟ್ಟಣದ ಮೇಲೆ ಕ್ಷಾಮವೇನೆ ಧಾಳಿ ಮಾಡಿತು. ಮೊದಲೇ ಅನ್ನಕ್ಕಾಗಿ ತಳಮಳಿಸುತಿದ್ದ ಪಟ್ಟಣ ಈ ಧಾಳಿಯಲ್ಲಿ ಸಿಕ್ಕಿ ಕಂಗಾಲಾಯಿತು ಅಲ್ಪ ಸ್ವಲ್ಪ ಇದ್ದವರು ಹಣಕ್ಕಾಗಿ ಮಾರಿ ಬರಿಗೈಯಾಗಿ ಪರಿತಪಿಸತೊಡಗಿದರು. ಅನ್ನಕ್ಕಾಗಿ ಬೀದಿ ಜಗಳಗಳಾದುವು. ನಾಯಿಗಳಿಂದ ಕಸಿದು ತಿಂದರು ಜನ—ಅನ್ನವಿರಬಹುದೆಂದು ತಿಳಿದ ಕಡೆ ಲೂಟಿ ಮಾಡಿದರು—ಎಲ್ಲೆಲ್ಲೂ ಹಸಿವಿನ ಕ್ರಾಂತಿ.

ಉದ್ರಿಕ್ತ ಗುಂಪು:—ನಡೆಯಿರಿ? ಧಾಳಿ ಮಾಡೋಣ.

ಗುಂಪು:—ಅನ್ನ ಇಲ್ಲವೆ ಕ್ರಾಂತಿ....ಅನ್ನ ಇಲ್ಲವೆ ಕ್ರಾಂತಿ! ಅನ್ನ ಇಲ್ಲವೇ ಕ್ರಾಂತಿ! (ಗುಂಪಿನ ಧ್ವನಿ ತೀಕ್ಷ್ಣವಾಗುವುದು)

*

# ಸ್ವಾತಂತ್ರ್ಯ ವೀರ ಟೀಪು

## (ನಾಟಕದ ಪ್ರಕಟಣೆಯ ನಂತರ........)

[ಉತ್ಸವ ಸೂಚಕವಾದ ವಾದ್ಯ ಸಂಗೀತ. ಆಗಸ್ಟ್ ೧೫ರ ಜಯಘೋಷ— 'ಅಜಾದ್ ಭಾರತ ಜಿಂದಾಬಾದ್'....'ಹಿಂದೂಸ್ತಾನ್ ಹಮಾರಾ ಹೈ'.... ಇತ್ಯಾದಿ]

ನಿರೂಪಕ—ಇಂದು ನಮ್ಮ ಬಿಡುಗಡೆಯ ಹಬ್ಬ! ಭಾರತದ ಧೀರ ಅಹಿಂಸೆಯ ಅಜೇಯ ಶಕ್ತಿಯಿಂದ ವಿದೇಶೀ ದಾಸ್ಯ ಪಿಶಾಚಿಯನ್ನು ಮೆಟ್ಟಿ ಮುಕ್ತವಾದ ಅಮರದಿನ. ಅನಂತ ಆನಂದವಿಂದು ನಮ್ಮ ದೇಶದಲ್ಲಿ ಮಯೂರ ಲಾಸ್ಯವಾಡುತ್ತಿದೆ. ಎಷ್ಟು ಜನರ ಬಲಿದಾನ, ತ್ಯಾಗದ ವಜ್ರ ವೇದಿಕೆಯ ಮೇಲೆ ನಿರ್ಮಿತವಾಯಿತು, ನಮ್ಮ ಸ್ವಾತಂತ್ರ್ಯದ ಜ್ಯೋತಿ ಮಂದಿರ. ಬಿಡುಗಡೆಯ ನೆನಪಾದಾಗ–ಶತ ಶತಮಾನಗಳಿಂದ ಅಹರ್ನಿಶಿ ಬಿಡುಗಡೆಯ ಹೋರಾಟ ನಡೆಸಿದ ಹುತಾತ್ಮರ ಪವಿತ್ರ ನೆನಪು ನಮ್ಮೆದೆಯಲ್ಲಿ ನುಗ್ಗಿ ಬರುತ್ತಿದೆ ನಿಜ—ಉಳಿದವರು ಕತ್ತಲೆಯಲ್ಲಿ ಮುಳುಗಿದ್ದಾಗ ತಾವು ಎಚ್ಚೆತ್ತು ನಾಡಿನ ಹೃದಯದಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯದ ಕಿರಣಕ್ಕೆ ತಮ್ಮ ಆತ್ಮ ತೈಲವನ್ನು ಎರೆದು ಆ ಜ್ಯೋತಿ ಎಂದೂ ಆರದಂತೆ ಕಾದವರ ನೆನಪು ನಮ್ಮೆದೆಯನ್ನಿಂದು ಕೃತಜ್ಞತಾ ಭಾರವಾಗಿ ಮಾಡುತ್ತಿದೆ. ಎಷ್ಟು ಜನ ಹುತಾತ್ಮರು! ಎಂಥ ಬಲಿದಾನ........................

೧ನೇ ಧ್ವನಿ—ಗಲ್ಲಿಗೇರಿದವರು ಹಲವರು!

೨ನೇ " —ಗುಂಡಿಗೆ ಎದೆಗೊಟ್ಟವರು ಹಲವರು!

೩ನೇ " —ಸರ್ವಸ್ವವನ್ನು ಸ್ವಾತಂತ್ರ್ಯದ ನೆನಪಿಗೆ ಬಲಿಕೊಟ್ಟವರು!

೪ನೇ " —ಮನೆಮಾರನ್ನೇ ತೊರೆದು ದೇಶಾಂತರ ವಾಸಮಾಡಿದವರು!

೫ನೇ ಧ್ವನಿ— ಸ್ವಾತಂತ್ರ್ಯದ ಏಕೈಕ ಬಯಕೆಯಿಂದ ಶತ್ರುವಿನಲ್ಲಿ ಮಕ್ಕಳನ್ನೇ ಒತ್ತೆಯಿಟ್ಟವರು !

ನಿರೂಪಕ—ನಿಜ, ಇಂದಲ್ಲ ನಾಳೆ ದೇಶವನ್ನು ಪರದೇಶಿಯರ ಬಂಧನದಿಂದ, ಶೋಷಣೆಯಿಂದ ಬಿಡುಗಡೆ ಮಾಡುವೆನೆಂದು ಬಯಸಿ ಆ ದಿನಕ್ಕಾಗಿ ಕಾಯಲು, ಕವಿದು ಬಂದ ಶತ್ರುವಿಗೆ ಮಕ್ಕಳನ್ನೇ ಒಪ್ಪಿಸಿ ಇತಿಹಾಸದಲ್ಲಿ ಚಿರಂಜೀವಿಯಾದವನು ಮೈಸೂರಿನ ಹುಲಿ ಟೀಪುಸುಲ್ತಾನ್............... ....

ಇಂದಿಗೆ ೧೫೦ ವರ್ಷಗಳ ಕೆಳಗೆ ೧೭೯೨ನೆ ಇಸವಿಯ ಫೆಬ್ರವರಿ ತಿಂಗಳ ೬ನೆ ತಾರೀಕು ತಕ್ಕಡಿ ಹಿಡಿದು ವ್ಯಾಪಾರಕ್ಕೆ ಬಂದು ಶನಿ ತಂತ್ರದಿಂದ ಭಾರತದ ಸ್ವಾತಂತ್ರ್ಯವನ್ನೇ ಕಬಳಿಸಿದ ಪಡೆಮರು ಬೇಟೆಯಾಡುವ ಮಿಗವನ್ನು ಹಿಂಬಾಲಿಸುವ ನರಿ ಹದ್ದುಗಳಂತೆ ನಿಜಾಮು ಮತ್ತು ಮರಾಟರ ಸೇನೆ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದುವು. ಆ ದಿನ ರಾತ್ರಿ ಇದ್‌ಗಾ ಬತ್ತೇರಿ ಮಸೋಸ್‌ನ ಸೇನೆಯ ಪಾಲಾಯಿತು.

(ಯುದ್ಧ ಸೂಚಕ ವಾದ್ಯ ಸಂಗೀತ)

ಸೇನೆ ಹೆಜ್ಜೆಗೆ ಹತ್ತು ಜನರ ಬಲಿ ತೆಗೆದುಕೊಂಡು ಹಿಂದೆ ಸರಿಯಿತು....ಮೈಸೂರು ಸಮರಾಂಗಣದಲ್ಲಿ ಮಿಂಚಿನಂತೆ ಸಂಚರಿಸುತ್ತ ಟೀಪು ಎಲ್ಲರೆದೆಯಲ್ಲಿ ಸಾಹಸವನ್ನು ತುಂಬುತಿದ್ದ.

(ಸಮರಘೋಷ ...... ..... ಒಂದೇ ಸವನೆ)

ಟೀಪು—ಮೈಸೂರಿನ ವೀರಸೈನಿಕರೇ, ಹಿಂಜರಿಯಬೇಡಿ. ಸಿಡಿಲಿನಂತೆ ಎರಗಿ—ಮುಂದೆ ನುಗ್ಗಿದವರನ್ನು ಕತ್ತರಿಸಿ. ಬಿಡುಗಡೆಯ ಹೋರಾಟಕ್ಕೆ ಸೋಲಿಲ್ಲ.

[ಗೋಲಂದಾಜ್ ತೋಪು ಹಾರಿತು.... ....ಹಲವಾರು ಮಂದಿ ಚೀರುವ ಧ್ವನಿ. "ಟೀಪುಸುಲ್ತಾನ್ ಜಿಂದಾಬಾದ್"]

ಸೈನಿಕ—ಸಾಯಿ ! ಸೈತಾನ್.... ಶ್ರೀರಂಗಪಟ್ಟಣ ನಿನ್ನ ಗೋರಿ !

(ಬಂದೂಕದ ಶಬ್ದ)

ಇಂಗ್ಲೀಷ್ ಸೈನಿಕ—Oh .....God ....(ಸಾಯುವನು)

ನಿರೂಪಕ--ಎಷ್ಟು ಖಡಕಿನಿಂದ ಹೋರಾಡಿದಗೂ ಸುತ್ತುವರಿದ ಸೇನೆಯ ಇದಿರು ಮೈಸೂರು ಬಲ ಹಿಂಜರಿಯುತ್ತಿತ್ತು. ದಿನಕ್ಕೊಂದು ದುರ್ವಾರ್ತೆ ಸುಲ್ತಾನನ ಎದೆಯನ್ನು ಇರಿಯುತ್ತಿತ್ತು

ದೂತ—ಜಹಪನಾ ಫ್ರೆಂಚರು ಮೋಸಮಾಡಿದರು !

ಟೀಪು—ಏನಾಯಿತು ?

ದೂತ—ಇಂಜಿನೀಯರ್ ಬೆಲ್ಲಿ, ಬೋಫೋ ಮತ್ತು ಜೋಸೆಫ್ ಪೆತ್ರೋ ಮೊದಲಾದವರು ಬ್ರಿಟಿಷರೊಂದಿಗೆ ಸೇರಿಕೊಂಡರು.

ಟೀಪು—ಯಾ ! ಖುದಾ !

(ವಾದ್ಯ ಸಂಗೀತ)

ನಿರೂಪಕ....ಫ್ರೆಂಚರೊಂದಿಗೆ ಕೊಡಗಿನವರೂ ಮೋಸಮಾಡಿದರು........

ಟೀಪು—ಒಳಸಂಚು ! ಪಿತೂರಿ ! ನನ್ನವರೇ ನನ್ನೆದೆಯನ್ನಿರಿಯುತ್ತಿದ್ದಾರೆ. ಖುದಾ ! ಇದು ನಿನ್ನ ಇಚ್ಛೆಯೇ ? ದ್ರೋಹಿಗಳ ವಿದ್ರೋಹದಿಂದ ಶ್ರೀರಂಗಪಟ್ಟಣದ ಸಾಮ್ರಾಜ್ಯ ಲಕ್ಷ್ಮಿ ವಿಧವೆಯಾಗಬೇಕೇ ? ಪರವರ್ದಿಗಾರ್ ! ನನ್ನ ತೋಳುಗಳಿಗೆ ಬಲ ಕೊಡು—ಈ ವಿದೇಶಿ ಲೂಟಿಗಾರರೊಂದಿಗೆ ಈ ದೇಶದ್ರೋಹಿಗಳನ್ನು ಹೊಸಗುವ ಶಕ್ತಿ ಕೊಡು........

(ಕಲಕಲಧ್ವನಿ)

ಧ್ವನಿ ೧—ಜಹಪನಾ—ಇಂಗ್ರೇಜಿ ಪಿಶಾಚಿಗಳು ಷಹರ್ ಗಂಜನ್ನು ಲೂಟಿಗೊಳ್ಳುತ್ತಿದ್ದಾರೆ........

ಧ್ವನಿ ೨—ಲಾಲ್‌ಬಾಗಿನ ಉದ್ಯಾನದಲ್ಲಿ ಅವರ ಸೇನೆಯ ಹೇಸರಗತ್ತೆ ಮೇಯುತ್ತಿದೆ ಖಾವಂದ್........

ಧ್ವನಿ ೩ — ಜಹಪನಾ.... ನಿಮ್ಮ ಲಾಲ್‌ಬಾಗಿನ ಅರಮನೆ ಅವರ ವೇಶ್ಯಾ ಮಂದಿರವಾಗಿದೆ........

ನಿರೂಪಕ — ಅಭಿಮಾನಿಯಾದ ಸುಲ್ತಾನನ ಹೃದಯ ಇಂಥ ಸುದ್ದಿಯನ್ನು ಒಂದೊಂದು ಬಾರಿ ಕೇಳಿದಾಗಲೂ ಜ್ವಾಲಾಮುಖಿಯಂತೆ ಉಗ್ರವಾಗುತ್ತಿತ್ತು........

ಟೀಪು — ಬಿಷ್ಟೋಪಂತರೇ ನನಗಿಂದು ಉಳಿದಿರುವುದು ಒಂದೇ ದಾರಿ. ಕತ್ತಿ ಹಿಡಿದು ಕೋಟೆಯ ಮೇಲೆ ನಿಂತು ಹೋರಾಡಿ ಕೆಳಗುರುಳುವುದು. ಜೀವಂತನಾಗಿದ್ದು ನಾನು ಈ ಅಪಮಾನವನ್ನು ಸಹಿಸಲಾರೆ ಸಾವು ಮೇಲು........

ಬಿಷ್ಟೋ — ಪ್ರಾವಂದರು ಅಷ್ಟು ಹತಾಶರಾಗಬಾರದು. ನಿಮ್ಮ ಜೀವದ ಮೇಲೆ ದೊಡ್ಡದೊಂದು ಕನಸಿನ ಸಾಧನೆಯ ಫಲಾಫಲಗಳು ಅವಲಂಭಿಸಿದೆ. ಇಂಥ ಸಾಹಸ ನಿಮ್ಮ ವ್ಯಕ್ತಿತ್ವಕ್ಕೆ ಅಲಂಕಾರವಾದರೂ ಆದರ್ಶಕ್ಕೆ ಹಾನಿಕರ.

ಟೀಪು — ನನ್ನ ಕನಸು—ಭಾರತದ ಭೂಮಿಯನ್ನು ವಿದೇಶೀ ಸೈತಾನರ ಪಡೆಯಿಂದ ವಿಮೋಚನೆಗೊಳಿಸುವ ಕನಸು ಕೈಗೂಡ ಬಹುದೇ ಬಿಷ್ಟೋಪಂತ್!........ಯಾರಿಗೆಬೇಕಾಗಿದೆ ಅದು? ನನಗೊಬ್ಬನಿಗೆ.... ನನಗೊಬ್ಬನಿಗೆ.... ...! ಉಳಿದವರೆಲ್ಲರಿಗೂ ಅವರ ಪಾದ ಸೇವೆಯೇ ರುಚಿಕರವಾಗಿದೆ.

ಬಿಷ್ಟೋ — ಹಾಗೆಂದು ನಿರಾಶರಾಗಬಾರದು ಜಹಪನಾ! ನಿರಾಶೆಯಲ್ಲೂ ಆಶೆಯನ್ನು ಬೆಳಗಿಸುವುದೇ ವೀರೋಚಿತವಾದದ್ದು.

ಟೀಪು — ಇನ್ನೆಷ್ಟು ದಿನ ಆ ಆಸೆ ಇಟ್ಟುಕೊಳ್ಳಲಿ ಬಿಷ್ಟೋಪಂತ್! ಫ್ರೆಂಚರೊಂದಿಗೆ ಬ್ರಿಟೀಷರ ಮೂಲೋಚ್ಛಾಟನ ಒಪ್ಪಂದ ಮಾಡಿಕೊಳ್ಳಲೆಂದು ಎರಡುಬಾರಿ ಪ್ಯಾರಿಸಿಗೆ ಕಳುಹಿಸಿದ ನಿಯೋಗ ಬರಿಗೈಯಲ್ಲಿ ಹಿಂದಿರುಗಿತು. ನಿಜಾಮನಿಗೂ ದೇಶಕ್ಕಿಂತ ತನ್ನ ಸ್ವಾರ್ಥ ಹಿರಿದಾಗಿ ಸಂಧಿಗೆ ನಿರಾಕರಿಸಿದ. ನಮ್ಮನ್ನು ಮುರಿದ

ತಮ್ಮ ಬೊಕ್ಕಸ ತುಂಬಿಕೊಳ್ಳುವುದೇ ಅವರ ಪರಮಾರ್ಥವಾಗಿದೆ ಇಂದು ಮಿತ್ರರಂತೆ ನಟಿಸುವ ಇಂಗ್ಲೀಷರು ನಾಳೆ ದೇಶಕ್ಕೆ ಮಾರಿಗಳಾಗುವುದು ಇವರಾರಿಗೂ ಕಾಣುತ್ತಿಲ್ಲಿ. ಎಲ್ಲರ ದೃಷ್ಟಿಯೂ ಶ್ರೀರಂಗಪಟ್ಟಣದ ಸಂಪತ್ತಿನ ಮೇಲೆ. ಅಖಂಡ ದೇಶದ ದೃಷ್ಟಿ ಯಾರಿಗೂ ಇಲ್ಲ. ಹೀಗಿರುವಾಗ ನನ್ನ ಕನಸಿಗೇನು ಬಲ ?

ಬಿಷ್ಟೋ—ಆತ್ಮ ಬಲ.

ಟೀಪು—ಹೊರಗೆ ಮಿತ್ರರಿಲ್ಲ. ಒಳಗೆ ಸಂಚಿನ ಬೀಡು. ಈ ಉದ್ದೇಶ, ಅಪನಂಬಿಕೆ ತೊಲಗದೆ ಈ ದೇಶ ಬದುಕುವುದು ಸಾಧ್ಯವೇ ಬಿಷ್ಟೋಪಂತ್ !

ಬಿಷ್ಟೋ—ಸುಲ್ತಾನರು ಕ್ಷುಲ್ಲಕ ಅಪಪ್ರಚಾರಕ್ಕೆ ಮನಸೋಲಬಾರದು ಖಾವಂದರ ಆಪ್ತರೆಂದೆನಿಸಿಕೊಂಡ ಮಿರ್ ಸಾಜಕ್‌ರಂಥವರಿಂದ ಈ ಕಲಂಕ ತಗಲಿದೆ. ಸುಲ್ತಾನರಿದನ್ನು ಅರಿತವರಾದರೂ ಇದಕ್ಕೆ ಮರುಳಾಗಬಾರದು. ಇಂದಲ್ಲ ನಾಳೆ ಸತ್ಯತಿಳಿಯುವುದು ಜಹಪನಾ ! ಮಾನವನಶ್ವರ ! ಆದರೆ ಸತ್ಯ ಅಮರ. ನಂಬಿಕೆ ಕೆಡಬೇಡಿ.

ಟೀಪು—ಈಗೇನುದಾರಿ ಬಿಷ್ಟೋಪಂತ್........ನನಗೆ ಸೋಲಿನ ಅಪಮಾನವನ್ನು ರಕ್ತ ಸ್ನಾನದಿಂದ ಕೊಳೆಯುವುದು ವಿನಾ........

ಬಿಷ್ಟೋ—ಹಾಗಲ್ಲ ಜಹಪನಾ ! ನೀವು ತಪ್ಪು ತಿಳಿದುಕೊಳ್ಳದಿದ್ದರೆ ನಾನು ಒಂದು ಮಾತು ಸೂಚಿಸಬೇಕೆಂದಿದ್ದೇನೆ

ಟೀಪು—ನಾನ. ?

ಬಿಷ್ಟೋ—ಸದ್ಯಕ್ಕೆ ಏನಾದರೊಂದು ಒಪ್ಪಂದ ಮಾಡಿಕೊಂಡು ಹೊತ್ತು ಕಾಯಬೇಕು ಬಾಗಿಲಿಗೆ ಬಂದ ಈ ಗಂಡಾಂತರ ತೊಲಗದಿದ್ದರೆ .... .....

ಟೀಪು--ಶತ್ರುವಿನಲ್ಲಿ ಶಾಂತಿಸೂಚನೆ ? ಇದೊಂದೇ ಬಾರಿ ಉಳಿದಿರು

ವುದು! ಉಹೂ .... ಇದಾಗದು. ನನ್ನ ಹೆಣದ ಮೇಲೆ ಒಪ್ಪಂದ ಮಾಡಿಕೊಳ್ಳಿ.

ಬಿಷ್ಟೋ—ಆ ಮಾತು ನಡೆಯದು ಜಹಾಪನಾ! ನಮಗಿಂದು ವೇಳೆ ಅನುಕೂಲವಾಗಿಲ್ಲ. ಭಾರತದ ಬಿಡುಗಡೆಯ ಕನಸು ನಿಮ್ಮನ್ನು ಅವಲಂಬಿಸಿದೆ. ಅದಕ್ಕಾಗಿ ಈ ತಾತ್ಕಾಲಿಕ ಅಪಮಾನವನ್ನು ಸುಲ್ತಾನರು ಸಹನೆ ಮಾಡಿಕೊಳ್ಳಬೇಕು.

ಟೀಪು—ನನ್ನ ಕನಸಿಗೆ ಎಷ್ಟು ಬೆಲೆ ಕೊಡಬೇಕು ಬಿಷ್ಟೋಪಂತ್ ?

(ಸಂಗೀತ ಬಿರುಸಾಗಿ ಸಾಗುವುದು)

ನಿರೂಪಕ—ಎದೆಯಲ್ಲಿ ಅಪಮಾನದ ದಾವಾಗ್ನಿ ದಹಿಸುತ್ತಿದ್ದರೂ, ವಿವೇಚನೆಯ ಮಾತಿಗೆ ಒಡಂಬಟ್ಟು, ಸುಲ್ತಾನ್ ಸಂಧಿಪ್ರಯತ್ನಕ್ಕೆ ಒಪ್ಪಿದ. ಸುಲ್ತಾನರ ವಕೀಲರಾದ ಗುಲಾಂ ಆಲೀಖಾನ್, ಆಲೀ ರಜಾಖಾನ್ ಸಂಧಾನದ ಮಾತುಕತೆಗೆ ಆರಂಭಿಸಿದರು .... ....

ಕಾರ್ನವಾಲೀಸ್—ಮಿ ಕನ್ವೇ, ನನ್ನ ಮಾತು ನೆನಪಿರಲಿ. ಈ ಸಂಧಿಯ ಮೂಲೋದ್ದೇಶ ಶಾಂತಿಯಲ್ಲ, ಸ್ನೇಹವಲ್ಲ ಆದಷ್ಟು ಸುಲ್ತಾನನ ಅಪಮಾನ ಮಾಡಿ, ಅವನ ಬಲ ಮುರಿದು, ಆತನಿಗೆ ಬೆಲೆಯಿಲ್ಲದಂತೆ ಮಾಡಬೇಕು. ಹಿಂದುಸ್ಥಾನದಲ್ಲಿ ನಮಗೆ ಟೀಪು ಒಬ್ಬನೇ ಪ್ರಬಲ ಶತ್ರು. ಉಳಿದವರ ಶತ್ರುತ್ವಕ್ಕಾಗಲೀ, ಮಿತ್ರತ್ವಕ್ಕಾಗಲೀ ಬೆಲೆಯಿಲ್ಲ.

ಕನ್ವೆ—ಅದೇನೋ ಸರಿ ಗವರ್ನರ್ ಜನರಲ್, ಆದರೆ ಇಷ್ಟು ಅಪಮಾನಕರವಾದ ಷರತ್ತುಗಳನ್ನು ಹಾಕಲು ಹರಿಪಂತರೂ, ನಿಜಾಮಾಲಿಯೂ ಒಪ್ಪಿದರೆ? ನಮಗೆ ರಕ್ತ ಕುದಿಸುವಂಥ ಷರತ್ತುಗಳಿವು. ಇಷ್ಟಾದರೂ ಇವರು ಒಂದೇ ದೇಶದವರು.

ಕಾರ್ನವಾಲೀಸ್—(ನಗುತ್ತ) ಒಂದೇ ದೇಶದವರು! ದೇಶವೆಂಬ ದೃಷ್ಟಿ ಇವರಿಗೆಲ್ಲಿದೆ ಕನ್ವೆ? ಆ ದೃಷ್ಟಿ ಇದ್ದಿದ್ದರೆ ಟೀಪುವನ್ನು ಮುರಿಯಲು ಇವರು ನೆರವಾಗುತ್ತಿದ್ದರೇ? ಟೀಪುವಿನ ಸ್ನೇಹದ ಬೇಡಿ

ಕೆಗೆ ಒಪ್ಪಿ ಒಂದಾಗುತ್ತಿದ್ದರು. ಇವರ ಪರಸ್ಪರ ದ್ವೇಷಾಸೂಯೆಯೇ ನಮ್ಮ ಸಾಮ್ರಾಜ್ಯಸ್ಥಾಪನೆಗೆ ಮೂಲಬಂಡವಾಳ. ನಮ್ಮ ದಾರಿಯಲ್ಲಿ ಟೀಪು ಒಬ್ಬನೇ ಮುಳ್ಳು.

ಕನ್ನೆ—ನಿಜ, ಭಯಂಕರ ಶತ್ರು. ಸೋಲಿನ ಮೇಲೆ ಸೋಲಾದರೂ ಸಹುರೋತ್ಸಾಹ ಕುಗ್ಗದ ಶೌರ್ಯ ಅವನದು.

ಕಾರ್ನವಾಲೀಸ್—ಅದಕ್ಕೆ ಅವನನ್ನು ಕಂಡರೆ ಇವರಿಗಷ್ಟು ಗಾಬರಿ. ಟೀಪುವಿನ ಕಥೆ ಮುಗಿದರೆ ಮುಂದಿನ ಸರದಿ ತಮ್ಮದೆಂದು ಗೊತ್ತು. ಅದಕ್ಕೇ ನಿಜಾಮನ ಮಾತಿಗೆ ಒಪ್ಪುತ್ತಿಲ್ಲ. ಹೇಗೂ ಇವರ ಅಂತಃ ಕಲಹ ನಮಗೆ ಬಂಗಾರದ ಸುಗ್ಗಿ. ಇದನ್ನು ಬೆಳೆಸುವುದೇ ನಮಗೆ ಲಾಭ. (ನಗುತ್ತಾನೆ)

ಕನ್ನೆ—Yes! Yes! (ನಗುತ್ತಾನೆ—ನಗುವಿನ ಮೇಲೆ)

ನಿರೂಪಕ—ಒಂದೆರಡು ದಿನ ಸಂಧಾನದ ಮಾತುಕತೆಗಳು ನಡೆದ ನಂತರ ಸುಲ್ತಾನರ ವಕೀಲರು ಸುಲ್ತಾನರಿಗೆ ವರದಿ ಮಾಡಿದರು.

ಟೀಪು—ಅದೇನು ಅವರ ಷರತ್ತುಗಳು?

ಗುಲಾಂ ಆಲಿ—ಹೇಳುವುದಕ್ಕೆ ಬಾಯಿ ಬರುವುದಿಲ್ಲ ಜಹಾಪನಾ!

ಟೀಪು—ಇರಲಿ ಹೇಳು.

ಗುಲಾಂ ಆಲಿ—ಮೊದಲನೆಯದಾಗಿ ನವಾಬರ ರಾಜ್ಯದಲ್ಲಿ ಅರ್ಧಭಾಗ ಅವರಿಗೆ ಸೇರಬೇಕು.

ಟೀಪು—(ಕರ್ಕಶವಾಗಿ) ಹೂ .... ....

ಗುಲಾಂ—ಎರಡನೆಯದಾಗಿ ಅವರ ಯುದ್ಧದ ವೆಚ್ಚವೆಂದು ೬ ಕೋಟಿ ರೂಪಾಯಿ ಕೊಡಬೇಕು.

ಟೀಪು—ನಾವು ಯುದ್ಧ ಮಾಡಬೇಕೆಂದು ಆಹ್ವಾನಿಸಿದ್ದೆವೇ? ಹೇಡಿಗಳು .... ಹೂ .... ಮುಂದೆ.

ಗುಲಾಂ—ಮೇಲಿನ ಎರಡು ಷರತ್ತುಗಳು ಸಂಪೂರ್ಣವಾಗಿ ನೆರವೇರುವ

ವರೆಗೂ ಅದಕ್ಕೆ ಠೇವಣಿಯಾಗಿ ಸುಲ್ತಾನರ ಇಬ್ಬರು ಮಕ್ಕಳನ್ನು
.... ....

ಟೀಪು—ಸುಲ್ತಾನರ ಮಕ್ಕಳನ್ನು ಏನು ಮಾಡಬೇಕು ?

ಗುಲಾಂ—ಠೇವಣಿ ಬಂದಿಗಳಾಗಿ ಅವರಿಗೆ ಒಪ್ಪಿಸಬೇಕು ..... .....

ಟೀಪು—(ತಟಕ್ಕನೆ ಕೆರಳಿ) ನನ್ನ ಮಕ್ಕಳು—ಹುಲಿಯ ಮರಿ, ಠೇವಣಿಯ ಬಂದಿ! ಇದು ಸಂಧಾನವಲ್ಲ ಗುಲಾಂ ಆಲಿ, ಅಪಮಾನ, ಹೈದರನ ವಂಶವನ್ನು ನಿರ್ಮೂಲ ಮಾಡುವ ಶನಿಸಂಚು. ಥೂ ..... ತೊಲಗಾಚೆ ನನ್ನೆದುರಿನಿಂದ (ಆವಸರವಾಗಿ ನಡೆವ ಸದ್ದು) ಖುದಾ, ಇದೇನು ವಿಷಪರೀಕ್ಷೆಗೆ ಗುರಿ ಮಾಡಿದೆಯಾ! ನನ್ನ ಮೇಲೆ ನಿನಗೂ ಹಗೆಯೋ? ಈ ಸ್ವಾತಂತ್ರ್ಯಯಜ್ಞಕ್ಕೆ ಯಾರನ್ನು ಬಲಿಕೊಡಲಿ? ಸಂಧಾನಕ್ಕೆ ಒಪ್ಪಿ ಮಕ್ಕಳನ್ನು ಬಲಿಕೊಡಲೇ? ಸಂಧಾನಕ್ಕೆ ಒಪ್ಪದೆ ನಿಶ್ಚಿತ ಸಾವಿಗೆ ಪ್ರಜೆಗಳನ್ನು ಬಲಿಕೊಡಲೇ? ಪರವರ್ದಿಗಾರ್! ಯಾರು ದಾರಿ ತೋರುವರು ನನಗೆ, ಈ ಕತ್ತಲ ಗವಿಯಿಂದ ಮಕ್ಕಳು .... ಯಾರು ನನ್ನ ಮಕ್ಕಳು! ಯಾರಿಗಾಗಿ ಈ ಹೋರಾಟ? ದಾದಾ .... ನೀನು ಸಾಯುವಾಗ ನುಡಿದ ಭವಿಷ್ಯವನ್ನು ಸತ್ಯವಾಗಿ ಮಾಡುವ ಶಕ್ತಿಯನ್ನು ಕೊಡು ನನಗೆ, ಹಿಂದೂಸ್ಥಾನಕ್ಕೆ ಒದಗಿದ ಬ್ರಿಟಿಷರ ಕುತ್ತನ್ನು ನಿವಾರಣೆ ಮಾಡುವ ಬಲ ಕೊಡು. ದಾರಿ ತೋರು ದಾದಾ! ಸ್ವರ್ಗದಲ್ಲಿರುವ ನೀನು ಕಣ್ಣು ತಿರುಗಿಸಬೇಡ. (ತಟಕ್ಕನೆ) ಹೂ, ನಿಜ. ಅವರೇ ನಿಶ್ಚಯ ಮಾಡಲಿ. ನನ್ನ ಕರುಳ ಬಳ್ಳಿಯನ್ನು ಕಡಿದೊಪ್ಪಿಸುವ ಈ ಸಮಸ್ಯೆಗೆ ಉತ್ತರ ಕೊಡಲು ನಾನು ಅಧಿಕಾರಿಯಲ್ಲ. (ಚಪ್ಪಾಳೆ ತಟ್ಟುವನು .... ಪಾದದ ಶಬ್ದ) ಖಾದರ್, ಈ ಸಂಜೆ ಜುಮ್ಮಾ ಮಸೀದಿಯಲ್ಲಿ ಎಲ್ಲಾ ಸರದಾರರೂ, ಭಕ್ಷಿಗಳೂ, ಸಮಾಲೋಚನೆಗೆ ಸೇರಬೇಕೆಂದು ತಿಳಿಸುವಂತೆ ದರ್ಬಾರ್ ಬಕ್ಷಿಗಳಿಗೆ ಹೇಳು.

(ಸಂಗೀತ)

ನಿರೂಪಕ—ಸುಲ್ತಾನರ ಅಪೇಕ್ಷೆಯಂತೆ ಆ ದಿನ ಸಂಜೆ, ಜುಮ್ಮಾ ಮಸೀದಿಯಲ್ಲಿ—ಎಲ್ಲಾ ಪ್ರಮುಖರ ಸಭೆ ಸೇರಿತು. ಸುಲ್ತಾನರ ಪರವಾಗಿ ಆಲಿರಜಾಖಾನ್ ಶಾಂತಿ ಸಂಧಾನದ ಷರತ್ತುಗಳನ್ನು ಸಭಿಕರಿಗೆ ತಿಳಿಸಿದ ಬಳಿಕ ಸುಲ್ತಾನರೆ ಹೇಳಿದರು.

ಟೀಪು—ನನ್ನ ಪ್ರೀತಿಯ ಸರದಾರರೇ, ಬಕ್ಷಿಗಳೇ ವಕೀಲರು ಹೇಳಿದದನ್ನು ನೀವೆಲ್ಲ ಕೇಳಿರುವಿರಿ. ಇಂದಿನ ವಿಷಯ ಪರಿಸ್ಥಿತಿ ನಿಮಗೆಲ್ಲರಿಗೂ ತಿಳಿದಿದೆ, ಶಾಂತಿಯ ಷರತ್ತುಗಳೂ ತಿಳಿದಿದೆ. ನಿಷಕ್ಷಪಾತವಾಗಿ ಹೇಳಿ—ಶಾಂತಿಯೋ-ಸಮರವೋ ?

ಸಭಿಕ—ಸಮರ.

" —ಇಂಥ ಶಾಂತಿಗಿಂತಲೂ ಸಾವು ಮೇಲು.

" —ಸುಲ್ತಾನರ ಮಕ್ಕಳನ್ನು ಒಪ್ಪಿಸುವುದಿಲ್ಲ. ನಮ್ಮೆಲ್ಲರನ್ನು ಬೇಕಾದರೆ ಕರೆದೊಯ್ಯಲಿ!

" —ಹನಿ ರಕ್ತ ವಿರುವವರೆಗೂ ಯುದ್ಧ.

(ಹೊರಗೆ ಕಲಕಲರವ. 'ಸುಲ್ತಾನರ ಮಕ್ಕಳನ್ನು ಒಪ್ಪಿಸಬೇಡಿ,' 'ಗೆಲವು ಇಲ್ಲವೇ ಸಾವು,' 'ಟೀಪುಸುಲ್ತಾನ್ ಜಿಂದಾಬಾದ್'—

(ಕಲಕಲರವ ನಿಲ್ಲುವುದು)

ಟೀಪು—ನಿಮ್ಮ ನಿರ್ಧಾರಕ್ಕೆ ಅಭಿನಂದನೆಗಳು. ಆದರೆ ಸುಲ್ತಾನರ ಮಕ್ಕಳನ್ನು ಶತ್ರುವಿಗೆ ಒಪ್ಪಿಸಬೇಕೆಂಬ ಅಭಿಮಾನದಿಂದ ನಿರ್ಧಾರ ಮಾಡಬೇಡಿ. ಸುಲ್ತಾನನ ಮಕ್ಕಳೂ ಈ ರಾಜ್ಯದ ಪ್ರಜೆಗಳು. ನಿಮ್ಮಷ್ಟೇ ಅವರಿಗೂ ತ್ಯಾಗಮಾಡಬೇಕಾದ ಜವಾಬ್ದಾರಿಯಿದೆ. ನನ್ನ ಮಕ್ಕಳನ್ನು ಒಪ್ಪಿಸಬಾರದೆಂದರೆ ಸಮರದ ಅಗ್ನಿಕುಂಡದಲ್ಲಿ—ನಮ್ಮೆಲ್ಲರ ಸ್ವಾತಂತ್ರ್ಯದ ಬಲಿದಾನ ನೀಡಬೇಕು. ಈಗ ಹೇಳಿ—ಯಾವುದು ಹೆಚ್ಚು ? ನನ್ನ ಮಕ್ಕಳೇ ಅಥವಾ ರಾಜ್ಯದ ಸ್ವಾತಂತ್ರ್ಯವೇ ?

ಸಭಿಕ—ಸ್ವಾತಂತ್ರ್ಯ—ಆದರೆ ನಾವೂ ನಿಮ್ಮ ಮಕ್ಕಳೇ ಜಹಾಪನಾ. ನಿಮ್ಮ ಆತ್ಮಾರ್ಪಣ ಮಾಡಲು ನಾವು ಸಿದ್ಧರಿದ್ದೇವೆ.

ಟೀಪು—(ಭಾವ ಬಿಗಿದ ಕಂಠದಲ್ಲಿ) ನನ್ನ ಮಕ್ಕಳು! ನೀವೆಲ್ಲರೂ ನನ್ನ ಮಕ್ಕಳು! ನಿಜ—ನಿಮ್ಮ ಪ್ರೀತಿಗೆ ನನಗೆ ದಾರಿ ತೋರಿತು. ಬಕ್ಷಿಗಳೇ ಸಭೆ ಬರಖಾಸ್ತಾಯಿತೆಂದು ತಿಳಿಸಿ.

(ಸಂಗೀತ)

ನಿರೂಪಕ—ಆದಿನ ರಾತ್ರಿ ಟೀಪು ಬೆಂಕಿಯ ಮೇಲೆ ಮಲಗಿದವನಂತೆ ಕಾಲ ಕಳೆದ. ರಾಣೀವಾಸಕ್ಕೆ ಮಕ್ಕಳನ್ನು ಶತ್ರುವಿಗೆ ಒಪ್ಪಿಸುವ ಸುದ್ದಿಯನ್ನು ತಿಳಿಸಬೇಕಾಗಿತ್ತು. ಆದರೆ ಹೇಗೆ ತಿಳಿಸುವುದೆಂಬ ಕೊರಗು ಆ ಅಭಿಮಾನಿಯ ಹೃದಯಕ್ಕೆ .... ....

ಟೀಪು—ನಿರ್ಧಾರವಾದಂತಾಯಿತು. ಹುಲಿ ತನ್ನ ಮರಿಗಳನ್ನು ತಾನೇ ಕೈಯಾರ ಬೇಟೆಗಾರನಿಗೆ ಒಪ್ಪಿಸಬೇಕು. ನಿರ್ಭಾಗ್ಯ ಟೀಪು—ನಿನ್ನ ಹಣೆಯಲ್ಲಿ ಇನ್ನೂ ಏನೇನು ಬರೆದಿದೆಯೋ? ಎಂಥೆಂಥ ಅಪಮಾನದ ಕಲಂಕವನ್ನು ಹೊತ್ತು ಉಸಿರೆಳೆಯಬೇಕೆಂದಿದೆಯೋ ನಿನ್ನ ಭಾಗ್ಯದಲ್ಲಿ. ತಾಯಂದಿರಿಗೆ ಹೇಗೆ ತಿಳಿಸಲಿ, ಈ ಸುದ್ದಿಯನ್ನು? ಯಾವ ಮುಖವಿಟ್ಟುಕೊಂಡು ಹೋಗಿ ಹೇಳಲಿ? ಅಬ್ಬ! ಎಂಥ ದುರ್ಭರ ಅಣಕವಾಯಿತು ನನ್ನ ಬಾಳು! ಯಾವನ ಹೆಸರು ಹೇಳಿದ ಮಾತ್ರಕ್ಕೆ ಶತ್ರುಹೃದಯ ಕಂಪಿಸುತ್ತಿತ್ತೋ, ಅವನೇ ಇಂದು ಶತ್ರುವಿಗೆ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಹಸುಳೆಗಳನ್ನು ಒಪ್ಪಿಸಿ ರಾಜ್ಯಕ್ಕೆ ಜೀವಭಿಕ್ಷೆ ಬೇಡಬೇಕು. ಖುದಾ! ನಿನ್ನ ಇಚ್ಛೆ ಏನಿದೆ ನಡೆಸಿಕೋ. ಟೀಪುವಿನ ನೆತ್ತಿಯ ಮೇಲೆ ಬೇಕಾದರೆ ಬೆಂಕಿಯ ಮಳೆಯನ್ನು ಕರೆ. ಆದರೆ ರಾಜ್ಯವನ್ನು ಮಾತ್ರ ಶತ್ರು ಪಾಲಾಗದಂತೆ ಕಾಪಾಡು. ಹಕೀಂ ನಜುಂಡ, ಈ ಶತ್ರುಜಾಡ್ಯವನ್ನು ನೀನು ಪರಿಹರಿಸಬೇಕು.

(ಚಪ್ಪಾಳೆ ತಟ್ಟುವನು.) ಬಾಂದೀ .... ಬಾಂದೀ ....

ದಾಸಿ—ಜಿ ! ಹುಜೂರ್ .... ....

ಟೀಪು—ಜನಾನಕ್ಕೆ ತೆರಳಿ, ನೂರುನ್ನೀಸಾಬೇಗಂಸಾಹೇಬರಿಗೆ ನಾವೀಗ ಅತ್ತಕಡೆ ಬರುವುದಾಗಿ ತಿಳಿಸು.

ದಾಸಿ—ಜೀ ! ಹುಜೂರ್. (ಸಂಗೀತ)

ನಿರೂಪಕ—ಮಕ್ಕಳನ್ನು ಶತ್ರುವಿಗೆ ಒಪ್ಪಿಸಬೇಕೆಂಬ ಸುಲ್ತಾನರ ನಿರ್ಧಾರ ಮರುಪ್ರಾತಃಕಾಲ ರಾಣೀವಾಸದಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಜನಾನದ ಮೇಲು ಮಾಳಿಗೆಯ ಮೇಲೆ ನಿಂತು, ಕೋಟೆಯ ಹೊರಗೆ—ಬೀಡುಬಿಟ್ಟ ಸೇನೆಯನ್ನು ನೋಡುತ್ತಿದ್ದ ಮೇಹರ್ ಬಾನೂಬೇಗಂ ಸಾಹೇಬರವರಿಗೆ ತಿಳಿಯಿತು.

ದಾಸಿ—(ಏದುತ್ತಾ) ಬೇಗಂಸಾಹೇಬಾ .... ಬೇಗಂಸಾಹೇಬಾ ....

ಮೆಹರ್—ಏನು ಬಾಂದಿ ?

ದಾಸಿ—ಕಠೋರವಾರ್ತೆ ಸಾಹೇಬಾ .... ....

ಮೆಹರ್—(ಬೆದರಿ) ಏನಾಯಿತು ? ಸುಲ್ತಾನರು ಕ್ಷೇಮವೇ ?

ದಾಸಿ—ಸುಲ್ತಾನರು ಕ್ಷೇಮ. ಆದರೆ ಷಹಜಾದರನ್ನು ಇಂಗ್ರೇಜಿಗಳಿಗೆ ಒಪ್ಪಿಸುವರಂತೆ.

ಮೆಹರ್—(ಬೆದರಿ) ಯಾರು ಹೇಳಿದರು ?

ದಾಸಿ—ದೊಡ್ಡ ಬೇಗಂರ ಬಾಂದಿ. ದೊಡ್ಡ ಬೇಗಂರೇ ಇತ್ತ ಬರುತ್ತಿದ್ದಾರೆ, ನಿಮಗೆ ಈ ಸುದ್ದಿ ತಿಳಿಸಲು.

ಮೆಹರ್—ಷಹಜಾದರನ್ನು ಒಪ್ಪಿಸಬೇಕೆ .... .... ಇಂಗ್ರೇಜಿಯವರಿಗೆ ! ಸತ್ಯವೇ ...... ....

ನೂರುನ್ನೀಸಾ—(ಪ್ರವೇಶಿಸುತ್ತ) ನಿಜ, ಮೆಹರ್. ಬಾಂದಿ......ನೀನಾಚೆ ಹೋಗು.

ಮೆಹರ್—ಅಕ್ಕಾ, ಮಯೂಸುದ್ದೀನನ್ನು ಶತ್ರುವಿಗೆ ಒಪ್ಪಿಸಬೇಕೆ ?

ನೂರುನ್ನೀಸಾ—ಹೂ ಬಹೆನ್, ನನ್ನ ಮಗ ಖಾಲಿಕ್‌ನನ್ನೂ .... ....

ಮೆಹರ್—(ಸಿಡಿಲು ಬಡಿದವಳಂತೆ) ಆ .... ....

(ಇದ್ದಕ್ಕಿದ್ದಂತೆ ಶತ್ರುಪಾಳಯದಿಂದ ಫಿರಂಗಿ ಹಾರಿದ ಶಬ್ದ)

ಮೆಹರ್— ಖುದಾ! (ಚೀರಿ ಕೆಳಗುರುಳುವಳು.)

ನೂರುನ್ನೀಸಾ—(ಗಾಬರಿಯಾಗಿ) ಬಾಂದೀ .... ಬಾಂದೀ ....

(ದಾಸಿ ಅವಸರವಾಗಿ ಓಡಿಬರುವ ಸದ್ದು)

ದಾಸಿ—ಏನು ಬೇಗಂಸಾಹೇಬಾ .... ......

ನೂರು—ಬೇಗಂ ಮೂರ್ಛೆ ಬಿದ್ದಿದ್ದಾರೆ ...... ಬೇಗ ಹಕೀಮರನ್ನು ಬರ ಹೇಳು. ಹಾಗೆ .... ಸುಲ್ತಾನರನ್ನು ..... ಬೇಗ ಓಡು ...... ......

(ದಾಸಿ ಓಡುವಳು) ಮೆಹರ್.... ಮೆಹರ್ ..... ಮಾತಾಡು ತಂಗಿ .... ಮೆಹರ್ .... ನಮ್ಮನ್ನು ಬಿಟ್ಟುಹೋದೆಯಾ ಮೆಹರ್ .... .... (ಚಿಟಾರನೆ ಚೀರುವಳು)

ನಿರೂಪಕ:—ಶತ್ರುಪಾಳಯದ ಫಿರಂಗಿಯ ಸದ್ದಿಗೋ ಅಥವಾ ಅದಕ್ಕಿಂತ ಘೋರ ವಾರ್ತೆಯ ಸಿಡಿಲಿಗೋ ಬೇಗಂ ಮೇಹರ್‌ಬಾನು ಭೂಮಿಗುರುಳಿ ಕಣ್ಣುಮುಚ್ಚಿದರು. ಮತ್ತೆ ಕಣ್ಣು ತೆರೆಯಲಿಲ್ಲ. ಈ ಸಿಡಿಲೇಟಿಗೆ ಸುಲ್ತಾನ ತತ್ತರಿಸಿಹೋದ.

ಟೀಪು:—(ದುಃಖ ತುಂಬಿತುಳುಕುವ ಧ್ವನಿಯಲ್ಲಿ) ಮೆಹರ್, ಮೆಹರ್ ನನ್ನ ಪ್ರೈನಾ! ನಿನಗೂ ಈ ನಿರ್ಭಾಗ್ಯನ ಮೇಲೆ ಬೇಸರವಾಯಿತೇ? ನೀನೂ ಕೈಬಿಟ್ಟೆಯಾ ನನ್ನನ್ನು? (ದುಃಖವನ್ನು ತಡೆದುಕೊಳ್ಳುತ್ತ) ಹೋಗು, ನೀನು ನಿರ್ಭಾಗ್ಯವತಿ. ತಂದೆಯೇ ಮಕ್ಕಳನ್ನು ಶತ್ರುಗಳಿಗೆ ಒಪ್ಪಿಸುವ ನಾಚಿಕೆಗೇಡನ್ನು ನೋಡುವ ದೌರ್ಭಾಗ್ಯ ನಿನಗೆ ತಪ್ಪಿತು........ಪುಣ್ಯವಂತೆ ನೀನು. ಮೆಹರ್– ನನ್ನ ಬಾಳಿನ ರೋಷನೀ, ಸ್ವರ್ಗದಲ್ಲಿ ನಿಂತು ನನ್ನ ತೋಳುಗಳಿಗೆ ಶಕ್ತಿ ತುಂಬು............ ಈ ಅಪಮಾನದ ಸೇಡು ತೀರಿಸುವ ಬಲ ಕೊಡು. ನಿನ್ನ ಸಾವು, ಈ ಅಪಮಾನ........ ದೇಶದ ದಾಸ್ಯ... ....ಮುಂದಾದರೂ ಸೇಡನ್ನು ತೀರಿಸುತ್ತೇನೆ ಮೆಹರ್.... ಸಾಲು ಮರಕ್ಕೆ ಶತ್ರುಗಳನ್ನು ತೂಗುಹಾಕಿಸಿ, ತೋಫಿನ ಬಾಯಿಗೆ

ಕೊಟ್ಟು—ಹಗೆ ತೀರಿಸುತ್ತೇನೆ. ಭಾರತದ ಭೂಮಿಯಿಂದ ಶತ್ರು ತೊಲಗುವವರೆಗೂ ನನ್ನ ಶಕ್ತಿಗೆ ವಿಶ್ರಾಂತಿಯಿಲ್ಲ. ಒಂದೇ ದಿನ ನನ್ನ........ದುಃಖವನ್ನೂ — ದೇಶದ ದುಃಖವನ್ನೂ ತೀರಿಸುತ್ತೇನೆ. ಮೆಹರ್, ಸ್ವರ್ಗದಲ್ಲಿ ನಿಂತು ನಗುತ್ತ ನೋಡುತ್ತಿರು, ಈ ಶತ್ರುವಿನ ಮಾರಣ ಯಜ್ಞವನ್ನು.

ನಿರೂಪಕ—ಬೇಗಂ ಸಾಹೇಬರ ಮರಣ ವಾರ್ತೆ, ಮತ್ತು ಮಕ್ಕಳನ್ನೊಪ್ಪಿಸುವ ಸುದ್ದಿ ಪುರಜನರಿಗೆ ತಿಳಿದೊಡನೆಯೇ ಅವರು ಕ್ರೋಧದಿಂದ ಮೊರೆಯಲಾರಂಭಿಸಿದರು.

(ಪೌರರ ಕಲಕಲರವ ಹೆಚ್ಚುವುದು)

ನಿರೂಪಕ—ನಗರದಲ್ಲಿ ಈ ಕೋಲಾಹಲವಾಗುತ್ತಿದ್ದರೆ, ಅರಮನೆಯ ಅಂತಃಪುರದಲ್ಲಿ ಬೇಗಂ ನೂರುನ್ನೀಸ ಶತ್ರುವಿಗೊಪ್ಪಿಸಲು ಮಕ್ಕಳನ್ನು ಬದ್ಧಮಾಡುತಿದ್ದಳು.

ನೂರ್—ಖಾಲಿಕ್! ಫರಂಗಿಯವರ ಶಿಬಿರಕ್ಕೆ ಹೋಗಲು ನಿನಗೆ ಹೆದರಿಕೆಯಾಗುತ್ತದೆಯೇ ಬೇಟಾ?

ಖಾಲಿಕ್—(ಎಂಟು ವರ್ಷ) ಹಃ! ಹೆದರಿಕೆಯೇ! ಮಾ, ಕತ್ತಿ ಕೊಟ್ಟು ನೋಡು, ಅಷ್ಟು ಜನರನ್ನು ನಾನೊಬ್ಬನೇ ಕೊಂದು ಬರುತ್ತೇನೆ. ದಾದಾಗೆ ನಾನು ಮೊನ್ನೆಯೇ ಹೇಳಿದೆ.

ನೂರ್—ಏನೆಂದು?

ಖಾಲಿಕ್—ನನ್ನನ್ನು ಯುದ್ಧಕ್ಕೆ ಕರೆದುಕೊಂಡು ಹೋಗಿ ಎಂದು—ಕೇಳಲಿಲ್ಲ.

ನೂರ್—ಯುದ್ಧಕ್ಕೆ ಏಕೆ ಹೋಗಬೇಕೆಂದಿದ್ದೆ ಬೇಟಾ?

ಖಾಲಿಕ್ :—ನನಗೆ ಫರಂಗಿಯವರ ತಲೆ ಬೇಕಾಗಿತ್ತು.

ನೂರ್—ಏಕೆ?

ಖಾಲಿಕ್—ಚೆಂಡಾಟವಾಡುವುದಕ್ಕೆ!

ನೂರ್—ಶಾಭಾಸ್, ಹುಲಿಯುಮರಿ (ಕಣ್ಣೀರು ತುಂಬುತ್ತ) ಆದರೆ...... ಆದರೆ......... ಖಾಲಿಕ್........... ನೀನೀಗ ಫರಂಗಿಯವರ ಬಂದಿಯಾಗಿ ಹೋಗಬೇಕು......ನಾವೀಗ ಸೋತಿದ್ದೇವೆ.

ಖಾಲಿಕ್:—ಷ್! ಆ ಮಾತು ಬೇಡ ಮಾ! ದಾ ದಾ ಸಿಟ್ಟಾಗುತ್ತಾರೆ. ನೀವು ಸುಳ್ಳು ಹೇಳಬಾರದು.

ನೂರ್:—ನಾನೇನು ಸುಳ್ಳು ಹೇಳಿದೆ ಬೇಟಾ?

ಖಾಲಿಕ್—ಸುಳ್ಳಲ್ಲವೇ? ನಾವು ಫರಂಗಿಯವರಿಗೆ ಸೋಲುವುದುಂಟೇ ಮಾ?

ನೂರ್—(ದುಃಖೋದ್ರೇಕದಿಂದ) ಖುದಾ, ಈ ಮಗುವಿನ ಮಾತು ಸತ್ಯವಾಗಲಿ (ದುಃಖವನ್ನು ತಡೆ ಹಿಡಿಯುತ್ತ) ಹಾಗೆಲ್ಲ ಮಾತಾಡಬಾರದು ಬೇಟ. ಈಗ ಸದ್ಯಕ್ಕೆ ನೀನು ಫರಂಗಿಯವರ ಬಂದಿಯಾಗಿ ಹೋಗಬೇಕು. ಮಯಾಸುದ್ದೀನ್ ನಿನ್ನ ಸಂಗಡ ಬರುತ್ತಾನೆ.

ಖಾಲಿಕ್—ಮುಯಾಸ್ ಬೇಡ ಮಾ, ನಾನೊಬ್ಬನೇ ಹೋಗುತ್ತೇನೆ.

ನೂರ್— ಏಕೆ?

ಖಾಲಿಕ್—ಮುಯಾಸ್ ಅಮ್ಮ ಹೋಗಳೆಂದು ಅಳುತಿದ್ದಾನೆ ಪಾಪ! ಅವನು ಬೇಡ. ನಾನೊಬ್ಬನೇ ಹೋಗುತ್ತೇನೆ. ಒಬ್ಬನೇ ಹೋಗಲು ನನಗೇನೂ ದಿಗಿಲಿಲ್ಲ.

ನೂರ್—ಸುಲ್ತಾನರು ನಿಮ್ಮಿಬ್ಬರನ್ನೂ ಕಳಿಸಬೇಕೆಂದಿದ್ದಾರೆ ಬೇಟಾ......

ಖಾಲಿಕ್—ದಾದಾಗೆ ನೀನು ಹೇಳು, ನಿನ್ನ ಮಾತು ಕೇಳುತ್ತಾರೆ.

ನೂರ್—ಖುದಾ! ಮಗುವಿನ ಬಾಯಲ್ಲಿ ಹೀಗೆ ಮಾತಾಡಿಸಿ ನನ್ನನ್ನು ಕೊಲ್ಲುತ್ತೀಯಾ? ಖಾಲಿಕ್, ನೋಡು ಬೇಟಾ, ಈಗ ನಾನು ಹೇಳುವುದನ್ನು ಕೇಳು. ಸುಮ್ಮನೆ ಮಾತಾಡಿ ನನ್ನನ್ನು ಅಳಿಸಬೇಡ.

ಖಾಲಿಕ್—ನಾನು ಮಾತಾಡಿದರೆ ನಿನಗೆ ಅಳು ಬರುತ್ತದೆಯೇ ಮಾ?

ನೂರ್— ಹೂ, ಈ ಹೊತ್ತು.

ಖಾಲಿಕ್— ಹಾಗಾದರೆ ನಾನು ಮಾತಾಡುವುದಿಲ್ಲ.

ನೂರ್— ನಾನು ಹೇಳಿದ ಹಾಗೆ ಕೇಳುತ್ತೀಯಾ ?

ಖಾಲಿಕ್— ಹೂ.

ನೂರ್— ನಾಳೆ ಸುಲ್ತಾನರು ನಿನ್ನನ್ನೂ, ಮಯಾಸ್‌ನನ್ನೂ ಗುಲಾಂ ಆಲೀಖಾನರೊಂದಿಗೆ ಇಂಗ್ಲೀಷರ ಪಾಳಯಕ್ಕೆ ಕಳುಹಿಸುತ್ತಾರೆ. ಅಲ್ಲಿ ನೀವು ಸುಲ್ತಾನರ ಹೆಸರು ಕೆಡದಂತೆ ನಡೆದುಕೊಳ್ಳಬೇಕು.

ಖಾಲಿಕ್— ಹೇಗೆ ?

ನೂರ್— ಗಂಭೀರವಾಗಿ, ಹೆಚ್ಚು ಮಾತಾಡಕೂಡದು. ಇಲ್ಲಿ ಮಾಡಿದ ಹಾಗೆ ಯಾವುದಕ್ಕೂ ಹಟಮಾಡಕೂಡದು. ಅಳಬಾರದು. ತಮ್ಮನ ಕೂಡ ಜಗಳಾಡಕೂಡದು. ಸುಲ್ತಾನರ ಮಕ್ಕಳೆಂದರೆ ಜನ ಬಾಯ ಮೇಲೆ ಬೆರಳಿಟ್ಟುಕೊಳ್ಳಬೇಕು. ಆ........ಹಾಗಿರುತ್ತೀಯಾ ?

ಖಾಲಿಕ್— ಆಗಲಿ...... ಎಷ್ಟು ದಿನ ಹಾಗಿರಬೇಕು ?

ನೂರ್— ಸ್ವಲ್ಪ ದಿನ. ಬಹು ಬೇಗ ಸುಲ್ತಾನರು ಬಂದು ನಿಮ್ಮನ್ನು ಕರೆದುಕೊಂಡು ಬರುತ್ತಾರೆ.

ಖಾಲಿಕ್— ಹಾಗೆ ಆಗಲಿ ಮಾ.

ನೂರ್— ಬಂಗಾರದಂಥ ಮಗ. ನೂರು ಕಾಲ ಬಾಳು ಕಂದಾ !

ದಾಸಿ—(ಪ್ರವೇಶಿಸುತ್ತ)ಸುಲ್ತಾನರು ಬರುತಿದ್ದಾರೆ ಬೇಗಂ ಸಾಹೇಬಾ....

ನೂರ್— ಹೋಗು ಖಾಲಿಕ್....... ಆಟವಾಡಿಕೋ......

ಖಾಲಿಕ್— ನೀನು ಸುಮ್ಮನೆ ಹೇಳಿದರೆ ಹೋಗುವುದಿಲ್ಲ.

ನೂರ್— ಮತ್ತೇನು ಬೇಕು ನಿನಗೆ ?

ಖಾಲಿಕ್— ಮುತ್ತು ಕೊಡುವುದಿಲ್ಲವೇ ?

ನೂರ್— ಖಾಲಿಕ್ ! ಖಾಲಿಕ್ ! ಬೇಟಾ ಅಳುತ್ತಾ ಮುತ್ತು ಕೊಡು

ವಳು. ಹುಡುಗನು ಓಡುವ ಸದ್ದು. ನೂರ್ ಬಿಕ್ಕಿ ಬಿಕ್ಕಿ ಅಳಲಾರಂಭಿಸುತ್ತಾಳೆ. ಸುಲ್ತಾನರು ಪ್ರವೇಶಿಸುವ ಸದ್ದು.)

ಟೀಪು—(ದುಃಖಭಾರವಾದ, ಸಂತೈಸುವಸ್ವರದಲ್ಲಿ) ನೂರ್... ನೂರ್

ನೂರ್—ಜಹಪನಾ!

ಟೀಪು—ನೀನೂ ಅಳುತ್ತಿಯಾ ನೂರ್? ನನಗಾವ ಧೈರ್ಯ?

ನೂರ್—ಕ್ಷಮಿಸಿ ಜಹಪನಾ.......(ಸಂತೈಸಿಕೊಳ್ಳುತ್ತ)

ಟೀಪು—ಕ್ಷಮೆ! ನಿನ್ನನ್ನು ನಾನು ಕ್ಷಮಿಸುವುದೇ ನೂರ್ ........ ನಿನ್ನ ಮಗುವನ್ನು ಶತ್ರುವಿಗೊಪ್ಪಿಸಲು ಹೋತ್ತಾಯಿತೆಂದು ಹೇಳಬಂದ —ನಾನು ಕ್ಷಮಿಸುವುದೇ ನೂರ್....! ಆ ಮಾತಾಡಿ ನನ್ನನ್ನು ಕೊಲ್ಲಬೇಡ. ನಿನ್ನೆದೆಯಲ್ಲಿ ಮುಖಮುರಿಸಿ ನನ್ನ ಎದೆಯ ಬೆಂಕಿಯನ್ನು ಮರೆಯಲೆಂದು ಬಂದಿದ್ದೇನೆ. ನೂರ್.......

ನೂರ್—ಸುಲ್ತಾನರು ಅಧೀರರಾಗಬಾರದು.

ಟೀಪು—ನೀನೇಕೆ ಕಂಬನಿ ಇಡುತಿದ್ದೆ ನೂರ್? ನಾನಾಗಲೇ ಹೇಳಲಿಲ್ಲವೇ, ದಾನಮಾಡುವಾಗ ಕಂಬನಿ ಇಡಬಾರದೆಂದು. ನೀನು ಕಂಬನಿ ಇಟ್ಟರೆ ಈ ದೇಶಕ್ಕೆ ಶುಭವಾಗುವುದಿಲ್ಲ ನೂರ್. ಈ ದೇಶಕ್ಕಾಗಿ ನಾವು ಮಕ್ಕಳ ದಾನ ಮಾಡಬೇಕು. ನಿನ್ನ ಪತಿಯಂತಲ್ಲ, ಈ ದೇಶದ ಸ್ವಾತಂತ್ರ್ಯ ರಕ್ಷಣೆಯ ಭಾರ ಹೊತ್ತ ದಾಸನಂತೆ ನಿನ್ನನ್ನು ಬೇಡುತ್ತೇನೆ. ನೂರ್, ನಗುನಗುತ್ತ ಪುತ್ರ ದಾನ ನೀಡು.

ನೂರ್—ನನ್ನನ್ನು ನೀವು ಬೇಡುವುದೇ, ಅಪ್ಪಣೆಮಾಡಿ ಜಹಪನಾ! ಈ ರಾಜ್ಯವನ್ನು ರಕ್ಷಿಸಲೆಂದೇ ಧೀರ ಮಗನಾಗಬೇಕೆಂದು ಅಲ್ಲಾನಲ್ಲಿ ಪ್ರಾರ್ಥಿಸಿದೆ. ಆತನಿಂದ ಹೀಗೆ ರಾಜ್ಯ ರಕ್ಷಣೆಯಾಗಬೇಕೆಂದು ಖುದಾನ ಮನಸ್ಸಿದ್ದರೆ ಹೆಮ್ಮೆಯಿಂದ ಆತನ ಇಚ್ಛೆಗೆ ತಲೆಬಾಗುತ್ತೇನೆ. ಆದರೂ........

ಟೀಪು—ಏನು.... ಆದರೂ ನೂರ್ ?

ನೂರ್—ನನ್ನ ಮಗನನ್ನು ಕಳುಹಿಸಲು ದುಃಖವಿಲ್ಲ. ಆದರೆ ನಿನ್ನೆ ತಾಯಿಯನ್ನು ಕಳೆದುಕೊಂಡ ತಬ್ಬಲಿ, ಐದು ವರ್ಷದ ಚಿಗುರು ಮುರ್ತುಜಾನನ್ನು ಕಳುಹಿಸಲು ಎದೆ ಸೀಳುತ್ತದೆ.

ಟೀಪು—ನಿಜ, ನೂರ್ ನಿಜ. ದೊಡ್ಡವರಿಗೆ, ರಾಜ್ಯ ಕಟ್ಟಿದವರಿಗೇ ತಮ್ಮ ಸ್ವಾರ್ಥ ಹಿರಿದಾಗಿ, ಅಖಂಡ ರಾಜ್ಯದ ಹಿತಬೇಡವಾದಾಗ ತಬ್ಬಲಿಯೂ ರಾಜ್ಯ ರಕ್ಷಣೆಗೆ ಬಲಿಯಾಗಬೇಕು ನೂರ್. ತಬ್ಬಲಿಯ ತ್ಯಾಗ ಖಂಡಾಗೆ ಪ್ರಿಯವಾಗಿ ಆತನಾದರೂ ನಿಜಾಮು, ಹರಿಪಂತರಂಥ ಸ್ವಾರ್ಥಿಗಳಿಗೆ ಬೆಳಕು ತೋರಿಸಲಿ ಫರಂಗಿಯವರ ಏಕೈಕ ಶತ್ರುವನ್ನು ಬಲಿಹಾಕಲು ತಾವೇ ನೇರವಾಗಿಯೂ, ಅದೇ ಸಾಲವೆಂಬಂತೆ, ತಾಂಬೂಲದ ವೆಚ್ಚಕ್ಕೆ ತಾನು ೬೦ ಲಕ್ಷ ರೂಪಾಯಿ ಕೊಡಬೇಕೆನ್ನುವ ಹರಿಪಂತ, ಟೀಪುವಿಗೆ ಹೆಸರು ವಿನಾ ಬೇರೇನೂ ಉಳಿಸಬಾರದೆನ್ನುವ ಮುಷೀರ್ ಉಲ್‌ಮುಲ್ಕ್‌ನಂತಹ ದೇಶದ್ರೋಹಿಗಳ ಸ್ವಾರ್ಥಾಂಧ ನೇತ್ರ ತಬ್ಬಲಿಯ ತ್ಯಾಗದಿಂದಲಾದರೂ ತೆರೆಯಲಿ. ಇಂದು ನಮಗೇನಾದರೂ ಆಗಲಿ ನೂರ್, ಉರಿಯುವ ಬೆಂಕಿಯನ್ನು ಅಪ್ಪಿಕೊಳ್ಳೋಣ. ನಾಳಿನ ಇತಿಹಾಸ ನಮ್ಮನ್ನು ದೇಶದ್ರೋಹಿ ಎನ್ನದಿದ್ದರೆ ಸಾಕು. ಭಾರತವನ್ನು ಫರಂಗಿಯವರಿಂದ ಮುಕ್ತಗೊಳಿಸಬೇಕೆನ್ನುವ ದಾದಾನ ಕೊನೆಯ ದಿನದ ಕನಸು ಸತ್ಯವಾದರೆ ಸಾಕು.

ನೂರ್—ನಿಮ್ಮದು ಬಹು ದೊಡ್ಡ ಹೃದಯ ಜಹಪನಾ. ನಿಮ್ಮ ಕನಸು ಸತ್ಯವಾಗಲಿ. ನಿಮ್ಮ ಯೋಗ್ಯತೆಗೆ ಸರಿಯಾಗಿ ಬದುಕುವ ಭಾಗ್ಯವನ್ನು ಅಲ್ಲಾ ನನಗೆ ಕರುಣಿಸಲಿ.

ಟೀಪು—ಮಗನನ್ನೇ ಬಲಿಕೊಡಲು ಒಪ್ಪಿದ ತಾಯಿ—ನಿನಗಿಂತ ನಾನು ದೊಡ್ಡವನೇ ನೂರ್. ನೀನು ನಾಳಿನ ಬೆಳಕು. ಹೋಗು ನೂರ್, ಮಕ್ಕಳಿಗೆ ಉಡುಪು ಬದಲಿಸಿ ಬೀಳ್ಕೊಡುವ ಸಿದ್ಧತೆ ಮಾಡು.

ರಾಜ ಕುಮಾರರು, ರಾಜಕುಮಾರರಂತೆ ಮನೆಬಿಡಲಿ. ಯಾರೂ ಕಣ್ಣೀರಿಡದಂತೆ ನೋಡಿಕೋ ನೂರ್. ಕಂಬನಿಯ ಕಾವಿನಲ್ಲಿ ನನ್ನ ಹೃದಯ ಬಿರಿದು ನನ್ನ ನಿರ್ಧಾರವನ್ನು ಬದಲಿಸೀತು.

ನೂರ್—ಹಾಗೆಯೇ ಆಗಲಿ ಜಹಪನಾ.

(ಸಂಗೀತ)

ನಿರೂಪಕ—ಅಂತಃಪುರದಲ್ಲಿ ಬೀಳ್ಕೊಡುವ ಸಿದ್ಧತೆಗಳಾಗಿ ಫೆಬ್ರವರಿ ೨೬ನೇ ತಾರೀಕಿನ ಮಧ್ಯಾಹ್ನ ರಾಜಕುಮಾರರನ್ನು ಕರೆದುಕೊಂಡು ವಕೀಲರು ಬ್ರಿಟಿಷರ ಪಾಳಯಕ್ಕೆ ಹೊರಟರು. ಆನೆಗಳ ಮೇಲೆ ಚಿನ್ನದ ಅಂಬಾರಿಗಳಲ್ಲಿ ಸರ್ವಾಲಂಕಾರ ಭೂಷಿತರಾಗಿ ರಾಜಕುಮಾರರಿಬ್ಬರೂ ಕುಳಿತ್ತಿದ್ದರು. ಮಧ್ಯಾಹ್ನದ ಸೂರ್ಯನ ಬಿಸಿಲಿನಲ್ಲಿ ಷಹಜಾದರ ವಜ್ರಾಭರಣಗಳು ಕಣ್ಣು ಕುಕ್ಕಿಸುವಂತೆ ಹೊಳೆಯುತ್ತಿದ್ದವು. ಅವರ ಪಕ್ಕದಲ್ಲಿ ಸಂಧಾನ ನಡೆಸಿದ ವಕೀಲರು, ಮುಂದೆ ಒಂಟೆಗಳ ಮೇಲೆ ಕುಳಿತ ಹರಿಕಾರರು, ಎಳು ಮಂದಿ ಹಸುರು ಧ್ವಜ ಹಿಡಿದವರು, ನೂರು ಮಂದಿ ಬೆಳ್ಳಿಯ ಭಲ್ಲೆಯುವರು ಹಿಂಬದಿಯ ಬೆಂಗಾವಲಿಗೆ ಇನ್ನೂರು ಮಂದಿ ಕುದುರೆ ಸವಾರರು—ಜನ ತುಂಬಿ ಕಿಕ್ಕಿರಿದ ಬೀದಿಗಳಲ್ಲಿ ಮೆರವಣಿಗೆ ಹೊರಟರು.

[ಜನಗಳ ಕಲಕಲಧ್ವನಿ.... ಜಯಘೋಷಣೆ.... ಉದ್ರಿಕ್ತ ಕೂಗುಗಳು. 'ದೇಶದ್ರೋಹಿಗಳ ಮನೆ ಹಾಳಾಗಲಿ', 'ಟೀಪು ಸುಲ್ತಾನ್ ಜಿಂದಬಾದ್'.... ಇತ್ಯಾದಿ]

ನಿರೂಪಕ—ಕಡೆಯ ಹೆಬ್ಬಾಗಿಲಿನ ಮೇಲೆ ಕಂಬನಿಗರೆಯುವ ಕಣ್ಣುಗಳಿಂದ ಟೀಪು ಶತ್ರು ಶಿಬಿರಕ್ಕೆ ಹೋಗುವ ಮಕ್ಕಳನ್ನು ನೋಡಿದ.

ಟೀಪು—ಬೇಟಾ! ಬೇಟಾ! ನಿಮ್ಮ ತ್ಯಾಗ ವಿಫಲವಾಗುವುದಿಲ್ಲ. ಉರಿವ ಸೂರ್ಯನಷ್ಟು ಸತ್ಯವಾಗಿ ಬ್ರಿಟೀಷರ ಸಾಮ್ರಾಜ್ಯ ಶಾಹಿ ಮಣ್ಣುಗೂಡಿ ಹೋಗುವುದು. ನಗುನಗುತ್ತಾ ಈ ಅತ್ಯಾಚಾರ ಮಾಡಿದವರು ಅಳುಅಳುತ್ತಾ ಈ ಪಾಪದ ಫಲವನ್ನು ಅನುಭವಿಸುವರು, ಹೋಗಿ—ದೇಶವನ್ನು ಕಾಯಲೆಂದು ಹೋಗಿ.......... ಈ ನನ್ನ ಷಹೀದ್! ಮಕ್ಕಳೇ ಮಕ್ಕಳೇ (ಗೋಲಂದಾಜ್ ಸಲಾಮಿನ ತೋಪು ಹಾರಿತು) ಖಾಲಿಕ್....ಮಯೂಸ್.... ಈ ಪಾಪಿ ತಂದೆಯನ್ನು ಮರೆಯಬೇಡಿ.

ನಿರೂಪಕ—ಶತ್ರು ಶಿಬಿರದ ಬಾಗಿಲನ್ನು ಸೇರಿದ ಮಕ್ಕಳನ್ನು ನೋಡಲಾರದೆ ಸುಲ್ತಾನರು ಪ್ರಜ್ಞೆ ತಪ್ಪಿದರು. ಪಟ್ಟಣದ ಕೋಟೆಯಿಂದ, ಬ್ರಿಟೀಷರ ಶಿಬಿರದಿಂದ ರಾಜಪುತ್ರರ ಗೌರವಾರ್ಥವಾಗಿ ಸಲಾಮಿನ ತೋಪುಗಳು ಹಾರಿದವು.

(ತೋಪಿನ ಶಬ್ದ ಎರಡು—ಮೂರು ಬಾರಿ)

ನಿರೂಪಕ—ಹೀಗೆ, ಇಂದಿಗೆ ನೂರು ಐವತ್ತು ವರ್ಷಗಳ ಹಿಂದೆ ಮೈಸೂರಿನ ಹುಲಿ ಸ್ವಾತಂತ್ರ್ಯ ಸಮರದ ಅಗ್ನಿಕುಂಡದಲ್ಲಿ ಇಬ್ಬರು ಮಕ್ಕಳನ್ನು ಬಲಿದಾನ ಮಾಡಿದ. ಎರಡೇ ಎರಡು ವರ್ಷಗಳ ನಂತರ ಸ್ವಯಂ ಸುಲ್ತಾನನೇ ಬ್ರಿಟಿಷರ ಶನಿತಂತ್ರದ ಸಮರದಲ್ಲಿ ಪ್ರಾಣಾರ್ಪಣಮಾಡಿದ. ಹುಟ್ಟಿದಂದಿನಿಂದ ಸಾಯುವ ಗಳಿಗೆಯವರೆಗೂ ಭಾರತವನ್ನು ಬ್ರಿಟಿಷರ ಬಂಧನದಿಂದ ಬಿಡಿಸಲು ದುಡಿದು ಮಡಿದ ಸ್ವಾತಂತ್ರ್ಯವೀರ ಸಾಯುವಾಗ ಬ್ರಿಟಿಷರ ವಿನಾಶವನ್ನು ಪ್ರವಾದಿಯಂತೆ ಕಂಡು ಅಸುದೊರೆದ—ಮೈಸೂರಿನ ಹಲಿ ಟೀಪು. ಇಂದು ಆತನ ಕನಸು ನಿಜವಾಗಿದೆ. ಆತನ ನೆನಪು ನಿತ್ಯಸ್ಫೂರ್ತಿಯಾಗಿದೆ ನಾಳಿನ ದಾಳಿಕಾರರಿಗೆ ಬೆದರಿಕೆಯ ಬಾವುಟವಾಗಿದೆ. ನಾವಿಂದು ಆತನ ತ್ಯಾಗವನ್ನು ನೆನಸಿ,

ಭಾರತದ ಸ್ವಾತಂತ್ರ್ಯ ರಕ್ಷಣೆಯ ಶಪಥ ಮಾಡೋಣ. ಆ ಪವಿತ್ರ ಶಪಥದ ವಜ್ರಕಂಕಣತೊಟ್ಟು ಹೆಮ್ಮೆಯಿಂದ ಹೇಳಿ.

ಗುಂಪು:—ಸ್ವತಂತ್ರ ಭಾರತ ಜಿಂದಾಬಾದ್ |
ಅಜಾದ್ ಭಾರತ ಅಮರ ರಹೆ |
ಹಿಂದೂಸ್ಥಾನ್ ಹಮಾರಾ ಹೈ |

(ಸಂಗೀತ)

# ನರಕವಾದ ನಂದನ

[ಶೋಕಮಯವಾದ ವಾತಾವರಣವನ್ನು ಸೂಚಿಸುವ ಏಕನಾದದ ಮಿಡಿತ. ವಾತಾವರಣವನ್ನು ಮುರಿಯುವಂತೆ ಆಗಾಗ ನಾಯಿಯ ಬೊಗಳುವಿಕೆ, ಕೋಳಿಯ ಕೂಗು. ಅರೆನಿಮಿಷ ಶುದ್ಧಮೌನ. ನಂತರ ಇದ್ದಕ್ಕಿದ್ದಂತೆಯೇ ಹುಚ್ಚು ನಗೆ. ದೂರದಲ್ಲಿ ಗಾಡಿಯೊಂದು ಹೋಗುವ ಸದ್ದು]

ರಂಗೇಗೌಡ:—(ನಗುತ್ತಾ) ಹ್ಹೋ ...... ಹ್ಹೋ ಹ್ಹೊ ...... ನನ್ನ ಮನೆ. ನೋಡ್ಬೇಕೂಂತ ಬಂದ್ನ...! ಚೋಸಂದಾಕ್ಕೈತೆ ನನ್ನ ಮನೆ. ಅಳ್ಳೀಗೆಲ್ಲಾ ನನ್ದೊಂದೇ ಗಾರೆ ಮನೆ. ಎಂಗೈತೇಂತೀಯಾ...... ......ಹ್ಹ ಹ್ಹ ಹ್ಹ ......... ಯಾವೂರಯ್ಯ ನಿಂದು? ...... ಎಳ್ನೀರು ಕುಡಿತೀಯಾ? ನಡ್ಡು ಶಾನ ದಣುವಾದಂಗ್ಕೈತೆ ನಿಂಗೆ...... ...... ನನ್ನ ತ್ವೋಟೆದ್ದು ಬಾಳೆ ಅಣ್ಣು ತಿಂತೀಯಾ........ಬಾಳೆ ಅಣ್ಣು .... ಹ್ಹೋ ಹ್ಹೋ...... ......ಬಾಳೆ ಅಣ್ಣು .... ಎಲ್ಲೈತೆ...... ಓಯ್ತು (ಬಿಕ್ಕಿ ಬಿಕ್ಕಿ ಅಳುತ್ತಾ) ಎಲ್ಲಾ ಶಿವನ ಪಾದ ಸೇರೋಯ್ತು........ಮನೆ ಹಾಳಮುಕ್ಳು ಬ್ಯಾಡ ಬ್ಯಾಡಾಂತ ಬಡ್ಕೊಂಡ್ರೂ ಕೇಳಿಲ್ಲ (ರೇಗುತ್ತ) ನನ್ನ ನೋಡಿ ತಮಾಷೆ ಮಾಡಬಂದ್ಯಾ .........ಎಂಗಿದ್ದ ರಂಗೇಗೌಡ ಎಂಗಾಗೋದಾಂತ ...... . ಹೋಗಲೇ .... ಯಾವೋನೋ ನೀನು? ಪೋಲೀಸಿಗೆ ಕೊಡ್ಬಿಡ್ತೀನಿ........ ಹಿಡಕೊಳ್ರೊ..... ಹಿಡಕೊಳ್ರೊ ಅವನ್ನ. (ಮತ್ತೆ ಕೂಗಲಾರಂಭಿಸುತ್ತಾನೆ. ಓಡುವ ಶಬ್ದ.... ಕೂಗುವ ಧ್ವನಿ ದೂರವಾಗಿ ಕ್ಷೀಣವಾಗುತ್ತದೆ)

ರೈತ— ಹೆದರಬ್ಯಾಡಿ ಬುದ್ಧಿ, ಏನೂ ಮಾಡಾಕಿಲ್ಲ. ಏನೋ ಗಾಸಾರ— ಎಂಗಿದ್ದ ರಂಗೇಗೌಡ! ನಮ್ಮೂರಿಗೆ ಡಿಪ್ಪಿನ ಮೀಷನ್ರಿದ್ದಂಗಿದ್ದ. ಭಗವಂತನ ದಯ ತಪ್ಪಾಯ್ತು, ಇಂಗಾಗೋದ ಸುಮ್ನೆ ಕೂಗ್ತಾನೆ. ಯಾರ್ಗೂ ಏನೂ ಮಾಡಾಕಿಲ್ಲ.

ಯುವಕ—(ಏದುತ್ತ) ಉಶಿ ? ನಿಜವಾಗಿಯೂ ನಾಣು ಹೆದರಿಬಿಟ್ಟೆದ್ದೆ. ಅವರಿಗೆ ಯಾಕೆ ಹೀಗಾಯಿತು ?

ರೈತ:—ಅಂತ ಮಕ್ಳು ಹುಟ್ಟಿದ್ರು—ಕಬ್ಬಿನ ಹೊಟ್ಟೇಲಿ ಸೂಲಂಗಿ ಹುಟ್ಟೋ ಹಂಗೆ.

ಯುವಕ:—ಅದೇನು ಕೊಂಚ ಹೇಳ್ತೀರಾ ಗೌಡ್ರೆ. ಸ್ವಾರಸ್ಯವಾಗಿರೊ ಹಾಗಿದೆ ಇವರ ವಿಚಾರ.

ರೈತ:—ಹೇಳ್ತೀನಿ, ಬನ್ನಿ. ಹತ್ತು ಜನ ಹೇಳಿ ಪಾಠ ಕಲಿಬೇಕಾಂತೋದು, ಅವರ ಕಥೆ. ಬೇವಿನ ಮರದ ಕೆಳಗೆ ಕೂತ್ಕೊಳ್ಳೋಣ ಬನ್ನಿ ಇಲ್ಲಿ ಬಾರಿ ಬಿಸ್ಲು.

(ಶುದ್ಧಮನೆ.....ಗಾಳಿಬೀಸುವ ಸದ್ದು.... ನಂತರ ಮೃದುವಾದ ಧ್ವನಿ)

ರೈತ:—ರಂಗೇಗೌಡರ ಮನೆ ಈ ಸುತ್ತಲ ಹಳ್ಳಿಗೆಲ್ಲಾ ಹೆಸರು ವಾಸಿಯಾದದ್ದು. ಹತ್ತು ಎಕರೆ ಗದ್ದೆ, ಒಂದೆಕರೆ ತೋಟ, ಮನೇಲಿ ನಾಲ್ಕಾರು ಕರಾವು. ಜನಾನ ಸಾಕೋಹಾಗಿದ್ದರು ಗೌಡರು. ಮನೇಲಿ ಅಲ್ಪಸ್ವಲ್ಪ ಬಂಗಾರವಿತ್ತು. ಗೌಡರ ಹೆಂಡತಿ ಈರಮ್ಮ ಬಂಗಾರದಂತಹ ಹೆಣ್ಮಗಳು. ಗೌಡರಿಗೆ ಇಬ್ಬರು ಗಂಡು ಮಕ್ಕಳು, ಚನ್ನೇಗೌಡ, ಶಂಕರೇಗೌಡಾಂತ. ಮೊದಮೊದಲು ಮಕ್ಕಳೂ ತಕ್ಕಹಾಗೆ ಇದ್ದರು, ನೇಗಿಲಿಗೆ ಜೋಡೆತ್ತು ಹೂಡಿದ ಹಂಗೆ. ಗೌಡರು ಪ್ರೀತಿಯಿಂದ ಅವರಿಬ್ಬರಿಗೂ ಒಳ್ಳೆ ಕಡೆಯಿಂದ ಹೆಣ್ಣು ತಂದರು. ಸೊಸೇರು ಮನೆಗೆ ಬಂದದ್ದೇ ತಡ, ಗೌಡರಿಗೆ ಗಾಸಾರ ವಕ್ರಿಸಿಬಿಟ್ಟಿತು............

(ಸಂಗೀತದ ನಮೂದನೆ)

ಚನ್ನೇಗೌಡ:—ಯಾಕೆ ಗೌರಿ, ಬೆಳಗ್ನಿಂದ ಮುಖ ಗಡಿಗೆ ಗಾತ್ರ ಮಾಡ್ಕೊಂಡು ಕುಂತಿದೀಯ ? ತೋಟಕ್ಕೆ ಬುತ್ತಿಣೂ ತಂದಿಲ್ಲ. ದುಡಿಯೋ ಗಂಡನ್ಗೆ ಹೊತ್ತು ಹೊತ್ತಿಗೆ ಮುದ್ದೆ ಇಕ್ದೆ ಓದ್ರೆ ಎಂಗಾ ದುಡಿಯೋದು ? ಇಷ್ಟೂ ಅರ್ಥಾಗಕಿಲ್ಲಾ..........

ಗೌರಿ :—ನಂಗೇನೂ ಅರ್ಥ ಆಗಾಕಿಲ್ಲ. ಚಿಕ್ಕಸೊಸೆ ಮನೇಲಿ ಕೂತ್ಕೊಂಡು ರಾಗಿ ಗಿರಿ ಮಾಡಿದ್ರೆ ನಾನೇನಾ ಎಲ್ಲಾರ ಪರಿಚಾಕರಿ ಮಾಡ್ಬೇಕೇನೋ...... ?

ಚ.ಗೌಡ:—ಅದ್ಕೆ ನಾ ಕೇಳಿದ್ದು ಏನಾಯ್ತೂಂತ. ದಿನಾ ಬೆಳಗಾದ್ರೆ ನಿಮ್ಮದೊಂದು ವ್ಯವಹಾರ. ಇಬ್ರೋರಿಬ್ರು. ಒಂದಿಕೊಂಡು ಹೋಗಾದುಬಿಟ್ಟು ಮೂರೊತ್ತು ನಾಯಿ ಬೆಕ್ಕು ಜಗಳಾಡ್ತಾಂಗೆ ಆಡ್ತಾ ಇದ್ರೆ ಉಳಿದೋರು ಇರಬೇಕಾ, ಎಲ್ಲಾರೂ ಓಗಬೇಕೋ. ಇನ್ನೊಂದು ದಿನ ಏನಾದ್ರೂ ಇಂಗಾದ್ರೆ ಸೆಣೆದು ಬಿಡ್ತೀನಿ (ರೇಗುವನು)

ಗೌರಿ:—(ಅಣಕದ ಧ್ವನಿಯಲ್ಲಿ) ಅಷ್ಟೆ ನಿಮ್ಕೈಲಿ ಆಗೋದು. ತೋಟದಾಗೆ ಕತ್ತೆ ದುಡಿದಾಂಗೆ ದುಡಿಯೋದು, ಮನೆಗೆ ಬಂದ ಹೆಂಡ್ತೀನ ಹೊಡಿಯೋದು. ಎಲ್ಲಾರೂ ಇಂಗೆ ಮಾಡ್ತಾರಾ? ಅವರವರ ಹೆಂಡ್ರು ಅಂದ್ರೆ ಎಲ್ಲಾರ್ಗೂ ಪ್ರೀತಿ. ನಿಮಗೆ ಮಾತ್ರ ನಾನು ಬ್ಯಾಡಾಗಿದೀನಿ. (ಅಳುತ್ತ) ಅಷ್ಟು ಬ್ಯಾಡವಾದ್ರೆ ಹೇಳ್ಬಿಡ್ರಿ ನಾನೆಲ್ಲಾರೂ ಬಾವಿ ಕೆರೆ ನೋಡ್ಕೋತೀನಿ.

ಚ.ಗೌಡ:—(ಕರಗುತ್ತಾ) ಕೊಂಕು ಮಾತೆತ್ತಿದ್ರೆ ಅಳ್ತಿ. ನಿಮಗಷ್ಟೇ ಗೊತ್ತಿರೋದು.

ಗೌರಿ :—ಅಳ್ದೆ ಮತ್ತೇನ್ಮಾಡ್ಲಿ. ಎಲ್ಲಾರೂ ನನ್ಮೇಲೆ ದೌಲತ್ತು ಮಾಡ್ತಾರೆ. ಅತ್ತೆ, ಮಾವ, ಅಂದ್ರೆ ಸಹಿಸಿಕೋ ಬಹುದು:—ಮೈದುನನೂ ಅನ್ನೋದೇ........ ವಾರಿಗಿತ್ತಿನೂ ನನ್ನ ತಲೆ ಮೇಲೆ ಮೆಣಸು ಅರೆಯೋಳೆ. ಯಾರಿಗೂ ಬ್ಯಾಡವಾದ ಕಸಾಗಿ ಬಿಟ್ಟೆ ನಾನು......

ಚ.ಗೌಡ :—ಏನಂದ್ಳು ಅವ್ಳು... ಆಚೆ ನಾರಿ!

ಗೌರಿ :—ನಿಮಗೆ ನಾನು ಬ್ಯಾಡವಾದ ಮೇಲೆ ಯಾರು ಏನಂದ್ರೂ ಅನ್ನಿಸ್ಕೋಬೇಕು. ನೀವು ನನ್ಮಾತು ಕೇಳಿದ್ರ ಇಂಗಾಗ್ತಿತ್ತಾ?

ಚ. ಗೌಡ :— ಏನ್ಮಾಡ್ಬೇಕೂ ಅಂತಿ ನೀನು! ನನ್ಗೂ ಸಾಕಾಗೋಗದೆ ಈ ರಾಮಾಯಣ

ಗೌರಿ:—ನಿಮ್ಮ ಪಾಲು ಕೊಟ್ಬಿಡ್ರಿ ಅಂತ ಮಾವನ್ನೋರಿಗೆ ಹೇಳ್ಬಿಡ್ರಿ. ಅವರವರ ಸಂಸಾರ ಭಾರ ಹೆಗಲಮೇಲೆ ಬಿದ್ರೆ ಆಗ ಗೊತ್ತಾಗುತ್ತದೆ. ದುಡಿಯೋದು ಒಬ್ಬನಿದ್ರೆ ಎಲ್ಲರೂ ದೌಲತ್ತು ಮಾಡೋರೇ................

ಚ. ಗೌಡ—ನಂಗೂ ಅಂಗೆ ಅನಿಸುತ್ತದೆ. ಎಲ್ಲಾರೂ ತಿನ್ನೋಲಿ, ನಾನೊಬ್ಬ ಯಾಕೆ ದುಡಿಯಬೇಕು....(ತುಸು ಸಂಗೀತ)

ರಂಗೇಗೌಡ--ಅಂಗೆಲ್ಲಾ ಕೋಪ ಮಾಡ್ಬಾರ್ದು ಮಗ. ಸಂಸಾರದ ಮೇಲೆ ಇದೆಲ್ಲಾ ಇರೋದೇ. ಚನ್ನಣ್ಣಂದು ಸ್ವಲ್ಪ ಕೋಪದ ಸ್ವಭಾವ. ಏನಾದ್ರೂ ಅಂದ್ರೆ ಹಿರಿಯ ಅಂತ ಸೈಸ್ಕೋ ಬೇಕು. ಇಷ್ಟು ಸಣ್ಣ ಮಾತ್ಗೆಲ್ಲಾ ಮನೆ ಮುರಿಯೋ ಇಚಾರ ಮಾಡಬಾರ್ದು.

ಶಂಕರೇಗೌಡ—ನನಗಂದ್ರೆ ಅಣ್ಣಾ ಅನಿಸ್ಕೋ ಬೇಕು. ಮನೆ ಎಂಗಸರೆಲ್ಲ ಅನ್ನೋಕೆ ಬಂದ್ರೆ ಸುಮ್ನಿರೋದು ಆಗಾಕಿಲ್ಲ. ನನ್ನ ಹೆಂಡ್ತೀನಾ ಅವನೇನಾ ಸಾಕ ಬೇಕಾಗಿಲ್ಲ ಆಖೈರಿ ಮಾತು ಹೇಳ್ಬಿಡ್ತೀನಿ ಅಪ್ಪಯ್ಯ, ನನ್ನ ಪಾಲು ಕೊಟ್ರೆ ಕೊಡು ಇಲ್ದಿದ್ರೆ ನನ್ನ ಹೆಂಡ್ತೀನಾ ಕಟ್ಕೊಂಡು ನಾನೆಲ್ಲಾರೂ ದೇಸಾಂತರ ಹೋಗ್ಬಿಡ್ತೀನಿ. ಒಬ್ಬ ಮಗ ನಿನ್ನ ಪಾಲಿಗೆ ಸತ್ತೋದಾಂತ ತಿಳ್ಕೋ.

ರಂ. ಗೌಡ--ಶಿವಶಿವ! ಎಂತ ಮಾತಾಡ್ತಿಯೋ ಶಂಕರ. ನಾನು ಜೀವಂತ ಇರೋ ತನ್ಕ ಆದ್ರೂ ಅಣ್ಣ ತಮ್ಮ ಒಂದಾಗ್ಬಿಡ್ರಿ. ಆ ಮೇಲೇನಾರ ಮಾಡ್ಕೊಳ್ರಿ. ಏನಾದ್ರೂ ನೋಡಾಕೆ ನಾನಿರೋಲ್ಲ

ಶಂ. ಗೌಡ--ಪಾಲಾದ್ರೆ ಏನೂ ಆಗಾಕಿಲ್ಲ. ಆ ಕಿತಾಪತಿ ಎಲ್ಲಾ ತಪ್ಪಿದ್ರೆ ನಾವೂ ವಿಶ್ವಾಸ್ದಾಗೇ ಇರ್ತೀವಿ.

ರಂ. ಗೌಡ--ಅಂಗಾಗಾಕಿಲ್ಲ ಕಣಾ ಮಗ. ಮನೆ ಮುರಿದ್ರೆ ಸರಿ ಮಾಡ್ಬೋದು. ಮನಸ್ಮುರಿದ ಮೇಲೆ ಗಾಜಾದ್ದಂಗೆ. ದಿನಕ್ಕೆ ದಿನಾ ಈ ಕ್ವಾಪ, ದ್ವೇಷ ಬೆಳೀತದೆ. ಆಮ್ಯಾಲೆ ಮನೆಗಳು ಉಳಿಯಾಕಿಲ್ಲ .... ......

(ವಾದ್ಯಸಂಗೀತ .... ಮುಂಬರುವ ದುರಂತವನ್ನು ನಿಧಾನವಾಗಿ ಸೂಚಿಸುವಂತೆ)

ರೈತ--ರೋಗ ಬಂದ ಬಾಯ್ಗೆ ಔಸದಿ ಬೇಕಾಗೋಲ್ಲ. ಬುದ್ಧಿ ಆ ಹುಡುಗರ್ಗೂ ಅಂಗೇ ಆಯ್ತು. ರಂಗೇಗೌಡ ಗಿಣಿಗೇಳ್ದಂಗೆ ಏಳ್ದ. ಅವಕನ್ಯಗಳೊಂತ ಅತ್ಬುಟ್ರು. ಏನಾದ್ರೂ ಆ ಇಬ್ಬರ್ದೂ ಒಂದೇ ಹಟ—ನಾವಿಬ್ರೂ ಒಂದಾಗಿರಾಕಿಲ್ಲ, ಆಸ್ತಿ ಪಾಲು ಮಾಡ್ಕೊಟ್ಟು ಬಿಡು ಎಂತ. ಅಂಥವರಿಗೆ ಹೇಳಿಕೊಡಾಕೆ ನಮ್ಮೂರಲ್ಲೇನು ಜನ ಕಡಮೆ ಇಲ್ಲ. ಫುಟ್‌ಲಾಯರಿ ಕರಿಯಪ್ಪಂಗೆ ಇದೇ ಜೀವನೋಪಾಯ.

(ಗಂಭೀರತೆಯನ್ನು ಚಿತ್ರಿಸುವಂತೆ ಸಂಗೀತ)

ಚ. ಗೌಡ—ಇದು ನಂಬೋ ಮಾತಲ್ಲ ಕರಿಯಪ್ಪ. ಶಂಕರನದು ದುಡುಕು ಬುದ್ಧಿ. ಆದ್ರೆ ಇಂಥಾದ್ದೆಲ್ಲ ಮನಸ್ಸು ಮಾಡೋನಲ್ಲ.

ಕರಿಯಪ್ಪ—ನಂಗೇನು ಗೊತ್ತಪ್ಪ ಪತ್ರ ಬರಿಯೋಕೆ. ಸಾಹುಕಾರ ಶರಣಪ್ಪ ಹೇಳಿ ಕಳಿಸಿದ್ರು. ಆಸ್ತಿ ಪಾಲಾಗೋಕೆ ಮುಂಚೇನೇ ಅಣ್ಣ ತಮ್ಮಂದಿರಲ್ಲಿ ವ್ಯಾಜ್ಯಕ್ಕೆ ಕಾರಣವಾಗೋ ಆ ಸರಭಾರಿ ಪತ್ರಕ್ಕೆ ನಾನು ಬರೆದುಕೊಡೋಲ್ಲಾಂದೆ. ಶಂಕರೇಗೌಡ್ರೆ ಬಲವಂತ ಮಾಡಿದ್ರು. ನಮ್ಮಪ್ಪ ಆ ಪಾಲು ವಿಭಾಗ ಮಾಡೋಲ್ಲಾಂತಾನೆ. ಚನ್ನಣ್ಣನೂ ಅದಕ್ಕೆ ಒತ್ತಾಸೆಯಾಗವ್ನೆ. ಹೀಗೆ ಮಾಡಿ ಅವರ ಕೈಗೆ ಚಿಪ್ಪು ಕೊಡದಿದ್ರೆ ಸಾಕು, ಶಂಕರೇಗೌಡನೇ ಅಲ್ಲಾಂತ. ಅಂತೂ ನಿನ್ನ ಲೇವಾಲೇವಿ ನೀನಿರೋದು ಉತ್ತಮಾಂತ ಹೇಳ್ದಿ.

ಚ. ಗೌಡ—(ಸಂದೇಹದಲ್ಲಿ ಕೂಗುವ ಸ್ವರದಲ್ಲಿ) ನೀನು ಹೇಳೋ ಮಾತು ಕೇಳಿದ್ರೆ ಆ ಅವಸ್ಥೆ ಎಲ್ಲಾ ಪಡೋಕಿಂತ ಪಾಲು ವಿಭಾಗ ಮಾಡ್ಕೊಂಡುಬಿಡೋದೇ ಒಳ್ಳೆವಂತ ಕಾಣ್ತದೆ. ಅಪ್ಪಯ್ಯಂಗೂ ಅದೇ ಮಾತು ಹೇಳ್ಬಿಡ್ತೀನಿ

(ಹಿನ್ನೆಲೆಯ ಸಂಗೀತ ಮೃದುವಾಗಿ .... ... ಆಮೇಲೆ ತುಸು ಕಠಿಣವಾಗುವುದು)

ರೈತ—(ಕಹಿಸ್ವರದಲ್ಲಿ) ಅಂತೂ ಕಡೆಗೊಂದು ದಿನ ಅಣ್ಣತಮ್ಮಂದಿರಲ್ಲಿ ಪಾಲಾಗಿ ಹೋಯ್ತು. ಆದಿನ ಊರಿನಲ್ಲಿ ಎಲ್ಲರಿಗೂ ಶರ ಬಡಿದ ಹಾಗಾಯಿತು, ಆ ಸುದ್ದಿ ಕೇಳಿ ರಂಗೇಗೌಡರ ಮನೆಯಲ್ಲಿ ಆ ತರಹ ಆಗಬಹುದೆಂದು ಯಾರೂ ಊಹಿಸಿರಲಿಲ್ಲ.

(ಜನಗಳ ಗಜುಗುಜು ಗದ್ದಲ. ಸ್ಪಷ್ಟವಾಗಿ, ಅಸ್ಪಷ್ಟವಾಗಿ.... ಹೆಣ್ಣಿನ ಬಿಕ್ಕುವ ಧ್ವನಿ ) ಮನೆ, ಹೊಲ, ಆಸ್ತಿ ಎಲ್ಲವೂ ಪಾಲಾಗಿ ಹೋಯಿತು ರಂಗೇಗೌಡರ ಕೈಯಲ್ಲಿದ್ದ ಉಂಗುರ, ಈರಮ್ಮನ ಕತ್ತಿನಲ್ಲಿದ್ದ ಅಡ್ಡಿಕೆ, ಓಲೆ ಕೂಡ ಅವರು ಸತ್ತ ಮೇಲೆ ಯಾರಿಗೆ ಸೇರಬೇಕೂಂತ ಲೆಕ್ಕಾಚಾರ ಕಟ್ಟಿಟ್ರು.

(ಹಿನ್ನೆಲೆಯ ಸಂಗೀತ ತೀಕ್ಷ್ಣವಾಗಿ ಸ್ತಿಮಿತಕ್ಕೆ ಬರುವುದು)

ರಂ ಗೌಡ—ಎಲ್ಲಾ ಮಾಡ್ಕೊಂಡು ಬಿಟ್ರಲ್ಲಾ .... ನನ್ನೂ, ಅವಳನ್ನೂ ಪಾಲ್ಮಾಡ್ಕೊಂಬಿಡ್ರಿ. ಅವಳ ತಾಳೀಣ ಹಂಚ್ಕೊಂಬ್ಬಿಡ್ರಿ. ಮನೆ ಹಾಳ್ರ, ಮನೆಹಾಳ್ರ ಕಂಡೋರ ಮಾತು ಕೇಳ್ಕೊಂಡು ಈ ಮನೆ ಮರ್ಯಾದೆ ಕಳ್ಸಿಟ್ರ. ಜಗಳಾಡೋರಿಗೆ ಬುದ್ಧಿ ಹೇಳೋ ಬದ್ಲು ನಾನೇ ಬುದ್ಧಿ ಕೇಳಾಕೆ ಹೋಗೋ ಹಾಗ್ಮಾಡ್ಕೊಂಡ್ರಿ. ನಾನು ಬದುಕಿದ್ದ ಹಾಗೆ ಕೊಂದ್ಬಿಟ್ರಿ .... ...

ಈರಮ್ಮ—(ಅಳುತ್ತ) ಇದೇನು ಗಾಸಾರ ಬಂತು ಶಿವಾ! ಹಾಲ್ನಾಗೆ ಕೈ ತೊಳೆಯೋ ಮಕ್ಳು ಒಡಕು ಪಾತ್ರೇಗೆ ಪ್ಯಾಚ್ಯ ಕಾಯೋ

ಅಂಗೆ ಮಾಡ್ದೆಯಾ? ಇಂಗಾಗೋಕಿಂತ ಮುಂಚೆ ನನಗೇಕೆ ಸಾವು ಬರ್ಲಿಲ್ಲಾ ಶಿವನೇ! ಎಂತ ಗೋಳು ತಂದ್ಬಿಟ್ಟೆ. (ಹಣೆ ಗಟ್ಟಿಸಿ ಕೊಂಡು ಅಳುವಳು.

ರೈತ—ಅಂಥ ತಂದೆ ತಾಯೀನ ಗೋಳು ಗುಟ್ಟಿಸಿ, ಏನೋ ಸುಖ ಸುರು ಕೊಂಬೇವೀಂತ ಪಾಲ್ಮಾಡ್ಕೊಂಡ್ರು. ಆದ್ರೆ ಇಬ್ರೂ ಸುಖವಾಗಿ ರಲಿಲ್ಲ. ಸುಖವಾಗಿದ್ದೇರೇ ಬೇಕೆ ಫುಟ್ ಲಾಯರ್ ಕರಿಯಪ್ಪ....

ಕರಿಯಪ್ಪ—ಚನ್ನೇಗೌಡ, ಶಂಕರೇಗೌಡ ಪಾಲಾಗಿ, ನನ್ನ ಹೆಂಡ್ರೀಗೆ ಬಂಗಾರದ ಬಳೆ ಬಂತು. ಇನ್ನೂ ನಾಲ್ಕು ದಿನ ಆ ವ್ಯಾಜ್ಯ ನಡೆ ದರೆ ಒಂದೆರಡು ಎಕರೆ ಜಮೀನು ಮಾಡ್ಕೋಬಹುದು. (ನಗು ವನು ......)

ಶರಣಪ್ಪ—ಇವರಿಬ್ಬರಿಗೂ ಪಾಲಾಗಿ ಜಗಳ ಆಡಿದ್ರೆ ಆ ತೋಟ ಅಷ್ಟು ಸುಲಭ ಬೆಲೆಗೇ ನನಗೆ ಸಿಗ್ತಾ ಇತ್ತು. ಹತ್ತು ಸಾವಿರಕ್ಕೆ ಕೇಳಿದ ತೋಟ ಮೂರು ಸಾವಿರಕ್ಕೆ ಬಂತು. (ನಗುವರು)

ರೈತ—ಪಟ್ಟಣದ ಲಾಯರ್ ನಂಜುಂಡಪ್ಪ ... ......

ನಂಜುಂಡಪ್ಪ—ಜನ ಜಗಳ ಆಡಿ ಕೋರ್ಟಿಗೆ ಬರದೆ ಹೋದ್ರೆ ಲಾಯರು ಬದುಕೋದು ಹೇಗೆ? ಚನ್ನೇಗೌಡನ ಸಿವಿಲ್ ವ್ಯಾಜ್ಯದಲ್ಲಿ ನನಗೆ ಎರಡು ಸಾವಿರ ರೂಪ್ಾ ಬಂತು. ಕ್ರಿಮಿನಲ್ ಕೇಸೂ ಆದ್ರೆ ಈ ವರ್ಷ ಮನೆ ಕಟ್ಟಿಸಬಹುದು. ಫುಟ್ ಲಾಯರ್ ಕರಿಯಪ್ಪನಿಗೆ ಹೇಳಿದ್ದೇನೆ, ಏನಾದರೂ ಮಾಡಿ ಪುಸಲಾಯಿಸು—ನಿನಗೂ ಅಷ್ಟು ಕೊಡುತ್ತೇನೆಂದು .... ನೂರು ಬಂದಾಗ ಹತ್ತುವರೆಯೇಕೆ ಕೊಡ ಬಾರದು? (ನಗುವರು)

(ಪೈಶಾಚಿಕ ಗುಂಪು ನಗೆ ....)

ರೈತ—ಅಣ್ಣತಮ್ಮಂದಿರು ಹೋರಾಡಿ ಇಬ್ಬರೂ ಬಡವಾಗುವುದನ್ನು ನೋ ಡಿದ್ದೆ. ಈರಮ್ಮ ಶಿವನ ಪಾದ ಸೇರ್ಬಿಟ್ಲು. ಸಾಯೋಗ್ಲೇ ಮಕ್ಕ ಳಿಬ್ಬರೂ ಪಾಲಾಗಿದ್ದು ಕೇಳ್ಕೊಂಡು, "ಆದ್ಯಾಗೋಯ್ತು, ಇನ್ನಾ

ದ್ರೂ ಈ ಮನೆಹಾಳು ಜಗ್ಗ ಬುಡ್ಬಿಡಿ. ಅಂಗೂ," ಅಂದಿದ್ರು.
ಆದರೆ ಹೊಳೇಲಿ ಬಿದ್ದೋನ್ನು ಹುಲ್ಲು ಕಡ್ಡಿ ತೇಲಿಸ್ತದಾ! ಕೆಟ್ರೂ ಇವಕ್ಕೆ ಹಟಾ ಹೆಚ್ಚಿತೇ ಹೊರ್‍ತು ಬುದ್ಧಿ ಬರ್‍ಲಿಲ್ಲ . ....

ಚ. ಗೌಡ—ಇಲ್ಲಿ ನೋಡಿ ಸ್ವಾಮಿ. ನನ್ನ ಮನೆ, ಮಠ, ತೊಳದೋದ್ರೂ ಚಿಂತೆಯಿಲ್ಲ. ಅವನ ಸೊಕ್ಕಡಗಿಸಿಬಿಡ್ತೀನಿ. ದನಾ ಬಿಟ್ಟು ನನ್ನ ಗದ್ದೇಲೆಲ್ಲ ಮೇಯಿಸಿಬಿಟ್ಟು ಕಾಳು, ದವಸ, ಕೂಡ ಸಿಗದಾಗೆ ಮಾಡಿದ್ದಾನೆ. ಅವನ ವಂಶ ನಿರ್ಮೂಲ ಮಾಡ್ದೇ ಓದ್ರೆ ನನ್ನೆಸರು ಚನ್ನೇಗೌಡ ಅಲ್ಲಾಂದ್ಬಿಡಿ. ಫೀಜುಗೀಜಿನ ಮುಖಾನ ನಾನು ಕೋಡಾಕಿಲ್ಲ. ಮುಂಗಡಾನೇ ಐವತ್ತು ರೂಪಾಯ್ ಕೊಟ್ಟದ್ದಿನಿ. ತಕೊಳ್ಳಿ. ಆದ್ರೆ ಅವನಿಗ್ಮಾತ್ರ ಸರಿಯಾದ್ಬಂದೋಬಸ್ತು ಮಾಡಿಡಬೇಕು. (ರೂಪಾಯಿಗಳ ಶಬ್ದ.)

ರೈತ—ಹೀಗೆ ಸೇರಿಗೆ ಸೇರು. ತನ್ನ ಹೊಲಕ್ಕೆ ದನ ನುಗ್ಗಿಸಿದ್ದಾ ಅನ್ನೋ ಸಿಟ್ಟಿನಿಂದ ಚನ್ನೇಗೌಡ ಹತ್ತಾರು ಜನ ಪುಂಡರನ್ನು ಕೂಡಿಸಿಕೊಂಡು ಸುಗ್ಗಿಯಲ್ಲಿ ಒಂದು ರಾತ್ರಿ ಶಂಕರೇಗೌಡನ ಕಣಜದಲ್ಲಿದ್ದ ರಾಗಿ ಬಣವೇಗೆ ...... .... (ವಿಶೇಷ ಗದ್ದಲಧ್ವನಿ)

ಧ್ವನಿ ೧—(ಕಾತರಧ್ವನಿಯಲ್ಲಿ) ಶಂಕರೇಗೌಡರ ಬಣವೇಗೆ ಬೆಂಕಿ ಬಿಟ್ಟರೈತೆ

ಹೆಣ್ಣುಧ್ವನಿ—(ಗೋಳಿಡುತ್ತ) ತಿನ್ನೋ ಅನ್ನಕ್ಕೆ ಬೆಂಕಿ ಹಚ್ಚಿ ಬಿಟ್ರಲ್ಲೊ ಭಗವಂತಾ ..... ....

ಶಂ. ಗೌಡ—(ಕ್ರೋಧದಿಂದ) ಇದ್ನ್ಮಾಡಿಸೋರು ಯಾರು ಅಂತ ನಾನು ಬಲ್ಲೆ. ಅವರ ಮನೆ ಮಾರು ಕೆಳಕ್ಕೆಳಸ್ದೆ ಹೋದ್ರೆ ನನ್ನೆಸರೇ ಅಲ್ಲ .... ....

(ಹಿನ್ನೆಲೆಯ ಸಂಗೀತ, ಉಕ್ಕಿಬರುವ ಕ್ರೋಧವನ್ನು ಮತ್ತು ಅಸಹನೆಯನ್ನು ಪುಷ್ಟೀಕರಿಸುವಂತಾಗುವುದು )

ರೈತ—ಸಿಟ್ಟು ! ವೈರ ! ಸೇಡು ! ದಿನಕ್ಕೊಂದು ಬಗೆಯಾಗಿ ಹಳ್ಳಿಗೆ ಹಳ್ಳಿಯೇ ಈ ಅಣ್ಣತಮ್ಮಂದಿರ ಕಾಟದಿಂದ ನುಗ್ಗುನುರಿಯಾಗಿ ಹೋಯ್ತು. ಗಂಡಸ್ರೊಂದು ಕಡೆ ಹೀಗೆ ಹೊಡದಾಡ್ತಾ ಇದ್ರೆ, ಎಂಗಸ್ರು ಸುಮ್ನಿದ್ದಾರಾ ? ಶಂಕರೇಗೌಡನ ಹೆಂಡತಿ ಮಹಾಛಲದ ಹೆಂಗಸು. ಕೆರಳಿಸಿಬಿಟ್ರಾಗ ನಾಗರ ಹಾವು. ಬಣಸೇಗೆ ಬೆಂಕಿ ಬಿದ್ದ ವರ್ಸ, ಶಂಕರೇಗೌಡನ ಸುಸ್ಮ್ಯಾಗೆ ಬೇಯಿಸೋಕೆ ಕಾಳಿಲ್ದೆ ಪರದಾಡಿ ಬಿಟ್ರು. ಅಣ್ಣನ ವ್ಯಾಲೆ ಕೇಸ್ಮಾಡ್ಬೇಕೊಂತ ಪೋಲೀಸ್ ಇನೆಸ್ಪೆಕ್ಟರರಿಗೆ ಅವರೆಂದಷ್ಟು ದುಡ್ಡು ಸುರ್‍ದ ಅವರು ಎರಡು ಕಡೆಯಿಂದ್ಲೂ ದುಡ್ಡು ತಿಂದು, ಸಾಕಷ್ಟು ರುಜುವಾತಿಲ್ಲಾಂತ ಕೇಸು ಕೈಬಿಟ್ರು. ಶಂಕರೇಗೌಡನ ಹೆಂಡ್ತಿಗೆ ಇದೆಲ್ಲಾ ನೋಡಿ ರೋಷ ಹುಟ್ತು. ಚೆನ್ನೆಗೌಡನ ಮನೆ ಮುರ್‍ಯೋ ಏರ್ಪಾಡು ಮಾಡಿದ್ಲು. ಹೆಂಗಸು ಮುನಿದ್ರೆ ದೇವ್ರಾದ್ರೂ ಬದ್ಕೋದುಂಟಾ ಬುದ್ಧಿ ?

(ಹಿನ್ನೆಲೆಯ ಸಂಗೀತ, ಸಂಶಯುಮಯವಾಗುವುದು)

ಶಂ. ಗೌಡನ ಹೆಂಡ್ತಿ—(ಪಿಸುಧ್ವನಿಯಲ್ಲಿ) ಲೇ ಬಂಗಾರಿ, ನಾನೊಂದು ಕೆಲ್ಸ ಹೇಳ್ತೀನಿ, ಮಾಡ್ಕೋತಿಯಾ ?

ಬಂಗಾರಿ—ಏನವ್ವಾ ?

ಶಂ. ಗೌ. ಹೆಂಡ್ತಿ—ಯಾರ್‍ಗೂ ಗೊತ್ತಾಗ್ಬಾರ್‍ದು. ಅಂಗೆ ಮಾಡ್ಬಿಟ್ರೆ ಕೇಳ್ದಷ್ಟು ದುಡ್ಕೊಡ್ತೀನಿ.

ಬಂಗಾರಿ—ಅದೇನವ್ವಾ ಯೇಳಿ.

ಶಂ. ಹೆಂಡ್ತಿ—ನಿಂಗೆ ಮದ್ದಿಕ್ಕೋದು ಗೊತ್ತೈತಲ್ಲವಾ ?

ಬಂಗಾರಿ—ಜನ ಅಂಗಂಬ್ತಾರೆ .... ...

ಶಂ. ಹೆಂಡ್ತಿ—ನೀನೇನೂ ಹೆದರ್‍ಕೋಬೇಡ. ನಾನಿದ್ರಿನ್ನಿ ನೋಡ್ಕಳಾಕೆ. ಚನ್ನೇಗೌಡನ ಮಗ ಇಲ್ಲ, ನಿಂಗಯ್ಯ, ಅವನಿಗೆ ಬಂಗಾರ ಕೂಡಿ ಮದ್ದಿಕ್ಕಿಬಿಡು.

ಬಂಗಾರಿ—ಎಂತಾ ಮಾತವ್ವ..... ಇರೋನೇ ಒಬ್ಬ ಮಗ ಗೌಡ್ರಿಗೆ.

ಶಂ. ಹೆಂಡ್ತಿ—ಸಾಯ್ಲೀಳು ಬಣವೇಗೆ ಬೆಂಕಿ ಹಚ್ಚಿಸಿ, ನನ್ನೆಟ್ಟ್ಬು ಉರ ಸಿಲ್ವಾ ಚಂಡಾಲ. ಅವನೊಟ್ಟೀಣ ಉರಸ್ದೆ ಓದ್ರೆ ನನ್ನ ಹೆಸರೇ ಅಲ್ಲ. ಅದೊಂದು ಮಾಡ್ಬುಡು ನೀನೇಳಿದ್ದು ಕೊಟ್ಟೇನು.........

ಬಂಗಾರಿ—ಆಗಲವ್ವಾ.

ಶಂ. ಹೆಂಡ್ತಿ—ನಿನ್ನ ಮದ್ದು ಸರಿಯಾಗಿ ಕೆಲ್ಸ ಮಾಡ್ತದಾ ?

ಬಂಗಾರಿ—ಐ ಏನ್ಮಾತು ಕೇಳ್ತಿರಾ! ತಿಂದೊಪ್ಪತ್ತಿಗೆ ಹೊಟ್ಟೋವು ಹತ್ತಿ ಸವೆದು ಕಡ್ಡಿಯಾಗಿ ಮೂರು ತಿಂಗಳಲ್ಲಿ..........

ಶಂ. ಹೆಂಡ್ತಿ—(ಕಿಲ ಕಿಲನೆ ನಗುವಳು)..........(ಕ್ಷೀಣಿಸುವುದು)

ರೈತ—(ನಿಟ್ಟುಸಿರು ಬಿಟ್ಟು) ಚನ್ನೇಗೌಡನ ಒಬ್ಬನೇ ಮಗ ಸತ್ತ ಸುದ್ದಿ ಯನ್ನು ಕೇಳಿದ ದಿನವೂ ಹಾಗೇ ನಕ್ಕಳು. ಶಂಕರೇಗೌಡನ ಹೆಂಡತಿ. ಮಗ ಹೋದಾಂತ ಚನ್ನೇಗೌಡ ನೆತ್ತಿಯಾಗ ಕೈಹೊತ್ತು ಕೂತ್ಕೊಂಡಿರುವಾಗ್ಲೇ ಶಂಕರೇಗೌಡ ಸಾಹುಕಾರ ಶರಣಪ್ಪನನ್ನ ಪುಸಲಾಯಿಸಿ, ಚನ್ನೇಗೌಡ, ಶರಣಪ್ಪನ ಸಾಲಕ್ಕೆ ಈಡು ಮಾಡಿ ಕೊಟ್ಟಿದ್ದ ಕಡೇ ಎರಡೆಕ್ರೆ ಹೊಲಾಣ ಹರಾಜಿಗೆ ತರಿಸ್ಬಿಟ್ಟ. ಆಗ ಮಗ ಸತ್ತ ಯಿಸಸದಾಗೆ ಚನ್ನೇಗೌಡನ ಹೆಂಡ್ತಿ ನೆಲ ಹಿಡಿದ್ಲು....

(ತಮಟೆಯ ಸದ್ದು,....ದೂರದಲ್ಲಿ ಏನೋ ನಗುವ ಸದ್ದು)

ಗೌರಿ—(ನರಳುತ್ತ) ಬೆಳಗ್ನಿನಿಂದ ಇದ್ಯಾಕಿಂಗೆ ಹೊಡಕಂತಾ ಇದೆ, ಈ ತಮ್ಟೆ! ಮಾರವ್ಮನ ಗುಡ್ಯಾಗೆ ಏನಾದ್ರೂ ಪೂಜೆ ಐತಾ?

ಚ. ಗೌಡ :— (ಕಹಿಯಾಗಿ) ಏನೋ........ ನೀನೊಮ್ಮೆ ಮಲಕ್ಕೋ ಗೌರಿ. ಮೈಲಿ ಹುಸಾರಿಲ್ದಾಗ, ಸುಮ್ನೆ ಮಾತಾಡಿ ಮತ್ಯಾಕೆ ದುಕ್ಕ ಮಾಡ್ಕೋತಿಯಾ ?

(ತಮಟೆಯ ಸದ್ದು ಹತ್ತಿರವಾಗುವುದು........'ಅರಾಜ್' 'ಬಹಿರಂಗ ಹರಾಜ್', ಎಂಬ ಮಾತು ಕೇಳಿಬರುವುದು)

ಗೌರಿ :—ಅದೇನು ಹರಾಜು........ಹರಾಜು ಅಂತ ಕೂಗ್ತಾವ್ನೆ. ಏನು ಹರಾಜು? ಆ ತಮ್ಟೆ ಸದ್ದು ಕೇಳಿದ್ರೆ ನಂಗ್ಯಾಕೋ ಗಾಬರಿ ಆಗ್ತದೆ, ಎದೇಲಿ ಹೊಡ್ದಂಗೆ ಆಗ್ತದೆ

ಚ ಗೌಡ :—(ರೇಗುತ್ತ) ಸುಮ್ನೆ ಮಲಕ್ಕೋ ಗೌರಿ. ಲಿಪಿ ಇಟ್ಟಂಗೆ, ಅದೇನು ಕೇಳ್ತಿಯಾ?

(ತಮಟೆ ಸದ್ದು ತೀರಾ ಹತ್ತಿರವಾಗಿ, ತಮಟೆ ಹೊಡೆಯುವವನು ಸಾಗುವ ಧ್ವನಿ ಸ್ಪಷ್ಟವಾಗಿ ಕೇಳಿಸುವುದು)

ತಮಟೆ :—ಕೇಳ್ರಪ್ಪಾ ಕೇಳ್ರಿ. ರಂಗೇಗೌಡರ ಮಗ ಚನ್ನೇಗೌಡರ ಗುಡಿ, ಹೊಲಾನ ಶರಣಪ್ನೋರ ಸಾಲಕ್ಕೆ ಪಂಚಾಯ್ತಿ ಕಟ್ಟೆ ಬಹಿರಂಗ ಹರಾಜು ಮಾಡಲಾಗುತ್ತೆ ಯಾರಾದ್ರೂ ಸವಾಲ್ ಮಾಡ್ಬೇಕು ........ಹೋ.....ಓ....

(ನಿಧಾನವಾಗಿ ಸ್ವರವು ಕ್ಷೀಣಿಸುವುದು, ಮತ್ತು ತಮಟೆಯ ಸದ್ದು ಸ್ತಿಮಿತಕ್ಕೆ ಬರುವುದು)

ಗೌರಿ —(ಉದ್ರಿಕ್ತಳಾಗಿ) ಅಯ್ಯೋ ಶಿವ್ನೆ!.. ಇದ್ದೊಂದು ಹೊಲಾನೂ ಹರಾಜಿಗೆ ಬಂದ್ಬಿಡ್ತು ಬಾಯಿಗೆ ಮಣ್ಣು ಬಿಟ್ಟಾ ಭಗವಂತಾ.....

ಚ. ಗೌಡ—(ಉದ್ರಿಕ್ತ, ಮತ್ತು ಕರ್ಕಶ ಸ್ವರದಲ್ಲಿ) ಗೌರಿ, ನೀನು ವ್ಯಾಲ್ಕೇಳ್ಬೇಡಾ.....

ಗೌರಿ —(ಮತ್ತಷ್ಟು ಉದ್ರಿಕ್ತಳಾಗಿ)ತಮಟೆ ಮುಗಿದಯ್ತಲ್ಲೋ ಶಿವ್ನೆ.... ಅಪ್ಪಾ ಎದೆ ಹಿಡಕಂತೆ... ......(ಚೀರಿ ಬೀಳುವಳು..... ಬಿದ್ದಸದ್ದಾಗುವುದು.....ಅರೆನಿಮಿಷ ಸಂಪೂರ್ಣ ಮೌನ)

ಚ ಗೌಡ—(ಗಾಬರಿಯಿಂದ) ಗೌರೀ,.... ಗೌರೀ ..ಮಾತಾಡು ಗೌರಿ.... ಆ... ಗೌರಿ ನೀನೂ ನನ್ಬಿಟ್ಟು ಹೋಗ್ಬಿಟ್ಯಾ ಗೌರಿ.(ರೋದಿಸುವನು) ಹೆಂಡ್ತಿ, ಮಗ, ಹೊಲ, ಮನೆ.....ಏನೂ ಇಲ್ದಾಂಗಾಗೋಯ್ತಲ್ಲ, ದೇವ್ರೆ (ಒಂದು ಕ್ಷಣ ಶುದ್ಧ ಮೌನ) ಅಕೇಲಿನವಳು ಮಲಗವ್ಳೆ, ಮನೇ ಮುಂದೆ ಮಾತ್ರ ಸಾರಿಸಬ್ಯಾಡ್ರಿ ಅಂತ ಕೇಳ್ಕೊಂಡ್ರೂ

ಕೇಳಿಲ್ಲ. (ಕರ್ಕಶವಾಗಿ) ಶಂಕರಾ.... ಶಂಕರಾ ..... ನನ್ದೆಲ್ಲಾ ಮುಗ್ದೋಯ್ತು..... ಇನ್ನು ನಿನ್ನುಳಿಸಾಕಿಲ್ಲ ..... ಅದ್ಯಾವೋನು ಬರ್ತಾನೋ ಬರ್ಲಿ.....

(ಹಿನ್ನೆಲೆಯ ಸಂಗೀತ ಭಯಾನಕತೆಯನ್ನು ನುಡಿಯುವಂತಾಗುಗುತ್ತದೆ.......... ಬಾಗಿಲು ತೆರೆಯುವ ಸದ್ದು)

ಶಂ ಗೌಡ:—ಇದ್ಯಾವೋನು ಇಷ್ಟೊತ್ನಾಗೆ ಬಾಗ್ಲು ಬಡೀತವ್ನೆ ?

ಶಂ ಹೆಂಡ್ತಿ—ಯಾವೋನು ......... ಬಾಗಿಲು ತೆಗಿಲಾ ?

ಶಂ.ಗೌಡ—ನಾನೇ ಹೋಗ್ತೀನಿ. ರಾತ್ರಿ ಮಲಕ್ಕೊಳ್ಳಾಕೂ ಬಿಡಾಕಿಲ್ಲ, ಈ ಹಾಳು ಜನ.

ಶಂ. ಹೆಂಡ್ತಿ:—ನೀವು ಓಗ್ಬ್ಯಾಡ್ರಿ. ನನಗ್ಯಾಕೋ ಹೆದರಿಕೆ ಆಗ್ತದೆ.....

ಶ. ಗೌಡ:—ಹೆದರಿಕ್ಕೆ ಎಂತಾದ್ದು (ಎದ್ದುಹೋಗಿ ಬಾಗಿಲು ತೆಗೆಯುವ ಸದ್ದು) ಯಾರದು ? ..... ... ಆ ನೀನು ! ಇಷ್ಟೊತ್ನಾಗೆ..........

ಚ. ಗೌಡ—(ಕಠೋರಧ್ವನಿಯಲ್ಲಿ) ನಾನೇ. ನಿನ್ನ ಪಾಲಿನ ಯಮ ! ಶಂಕರ, ನನ್ನ ಹೆಂಡ್ತಿ, ಮಕ್ಕಳನ್ನ ತಿಂದೆ.

ಶಂ ಗೌಡ—(ಗಾಬರಿಯಾಗಿ) ಆ...... ಆ...... ಕೊಡಲಿ....!

ಚ. ಗೌಡ—(ನಿಧಾನವಾಗಿ ನಗುತ್ತ) ಕೊಡಲಿ ! ಕೊಡಲಿ ! ಎಂಗೈತೆ ನೋಡ್ಬ್ಯಾ... ಇದನ್ನೆಲ್ಲಾ ಮಸೆದಿದ್ದೇನೆ..........

(ಶಂಕರೇಗೌಡ ಗಾಬರಿಯಿಂದ ಚೀರುವನು ಒಳಗಿನಿಂದ 'ಏನಾಯ್ತು' ಎಂದು ಗಾಬರಿಯಾಗಿ ಶಂಕರೇಗೌಡನ ಹೆಂಡತಿ ಕೂಗುವ ಸದ್ದು ಹತ್ತಿರಬರುವುದು........ ಸುಯ್ಯೆಂದು ಕೊಡಲಿ ಬೀಸಿದ ಸದ್ದು—ಶಂಕರೇಗೌಡ ಕೆಳಗುರುಳುವ ಸದ್ದು........... ಒಂದು ಕ್ಷಣ ಶುದ್ಧಮೌನ...........ಶಂಕರೇಗೌಡನ ಹೆಂಡತಿ ಚಿಟಾರನೆ ಚೀರಿದ ಸದ್ದು, ಕೆಳಗುರುಳಿದ ಸದ್ದು ...ಚನ್ನೇಗೌಡ ಭಯಂಕರವಾಗಿ ನಗಲಾರಂಭಿಸುತ್ತಾನೆ)

ಚ. ಗೌಡ—ಬಡ್ಕೋ....ಬಡ್ಕೋ.... ಹಾಳ್ಮುಂಡೆ.....ನನ್ನ ಮನೆ ಹಾಳ್ಮಾಡ್ದೋಳೇ ನೀನು (ನಗುವನು)

ಶಂ. ಹೆಂಡ್ತಿ—(ಭೀತಿಯಿಂದ ನಡುಗುತ್ತ) ಅಯ್ಯೋ ನನ್ನ ಗಂಡನ್ನ ಕಡಿದು ಹಾಕಿದ್ನಲ್ಲೋ—ಯಾರಾದ್ರೂ ಬನ್ರಪ್ಪಾ

ಚ. ಗೌಡ—(ನಗುತ್ತ) ಯಾರೂ ಬರಾಕಿಲ್ಲ (ತಟಕ್ಕನೆ ತೆರಳುತ್ತಾ) ಕೂಗ್ತಿಯಾ ಲೌಡಿ....ಕೂಗ್ತಿಯಾ ?

(ಮತ್ತೆ ಸುಯ್ಯೆಂದು ಕೊಡಲಿ ಬೀಸಿದ ಸದ್ದು—ಪೆಟ್ಟು ಬಿದ್ದ ಸದ್ದು....ಶಂ ಗೌಡನ ಹೆಂಡ್ತಿ ಕೆಳಗುರುಳಿದ ಸದ್ದು...... ಆರೆನಿಮಿಷ ಸಾವು ಸಂಕಟದ ನರಳುವಿಕೆ ...... ಶುದ್ಧಮೌನ. ಬಳಿಕ ಚನ್ನೇಗೌಡ ಪಿಶಾಚಿಯಂತೆ ಗಹಗಹಿಸುತ್ತಾನೆ.)

ಚ. ಗೌಡ—ಎಲ್ಡೇಟಿಗೆ ಇಬ್ರೂನ್ನ ತೀರಿಸಿಬಿಟ್ಟೆ ..... ಇನ್ನು ಸಾಧಿಸ್ಲಿ ವೈರಾನಾ!......

(ನಗುವಿನ ಸದ್ದು ...... ಕ್ಷೀಣಿಸುವುದು .... ಹಿನ್ನೆಲೆಯ ಸಂಗೀತ ಹೃದ್ರಾವಕವಾಗುವುದು......... )

ರೈತ—ಚನ್ನೇಗೌಡ, ಶಂಕರೇಗೌಡರ ವೈರ ಈ ಕೊಲೇಲಿ ಕೊನೆಯಾಯ್ತು. ಮಾರನೆ ದಿನ ಕೊಡಲಿ ಹಿಡಕೊಂಡು ಊರಲ್ಲಿ ಹುಚ್ಚನಹಾಗೆ ಅಲೀತಿದ್ದ ಚನ್ನೇಗೌಡನ್ನ ಪೋಲಿಸ್ನೋರು ಹಿಡಕೊಂಡು ಹೋಗಿ, ಖೂನಿ ಮಾಡಿದಾಂತ ಪಟ್ಟಣದಲ್ಲಿ ಕೇಸು ಹಾಕಿದ್ರು.

ಯುವಕ—ಇಷ್ಟೆಲ್ಲಾ ನಡೆದಾಗ ರಂಗೇಗೌಡರು ಏನ್ಮಾಡ್ತಾ ಇದ್ರು?

ರೈತ—ದಿನಾ ಮಕ್ಳು ಜಗಳಾ ಕಾಯೋದನ್ನ ನೋಡಲಾರ್ದೆ, ಹೆಂಡ್ತಿ ಸತ್ತ ಮ್ಯಾಲೆ, ರಂಗೇಗೌಡ್ರು ಹಳ್ಳಿ ಬಿಟ್ಟು ನೆಂಟ್ರಮನೇಲಿ ಹೋಗಿ ಇದ್ಬಿಟ್ಟೋದ್ರು. ಚನ್ನೇಗೌಡನ್ನ ಪೋಲೀಸರು ಇಡಕೊಂಡೋದ್ದು ಗೊತ್ತಾ ಗೊತ್ಲೆ ಹಳ್ಳಿಗೆ ಬಂದು ಮಗನ್ನ ಉಳಿಸೋಕೆ ಶತಪ್ರಯತ್ನ ಮಾಡಿದನು ಆದ್ರೆ ಆದ್ಯಾವುದೂನೂ ನಡೀಲಿಲ್ಲ. ಆದ್ರೆ ಗಲ್ಲಾಗೋದು ತಪ್ಪು.

(ಶುದ್ಧಮೌನ)

ನ್ಯಾಯಾಧೀಶ—(ಓದಿ ಹೇಳುವುದು) ಚನ್ನೇಗೌಡನ ಮೇಲೆ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಪರಾಧಿ ತಪ್ಪಿತಸ್ಥನೆಂದು ರುಜುವಾತಾಗಿರುವುದರಿಂದ ಚನ್ನೇಗೌಡ ಅಪರಾಧಿಯೆಂದು ಈ ನ್ಯಾಯಾಲಯ ತೀರ್ಮಾನಿಸುತ್ತದೆ. ಆದರೆ ಕೇಸಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಚನ್ನೇಗೌಡನ ಅಪರಾಧಕ್ಕೆ ಸಾಕಷ್ಟು ಪ್ರೇರೇಪಣೆ ಕಾರಣಗಳಿದ್ದುವೆಂದು ತಿಳಿದು ಬರುವುದರಿಂದಲೂ, ಮತ್ತು ಚನ್ನೇಗೌಡ ತಾನೇ ಈ ಕೊಲೆ ಮಾಡಿದುದಾಗಿ ಒಪ್ಪಿಕೊಂಡಿರುವುದರಿಂದಲೂ ಆತನ ವಿಷಯದಲ್ಲಿ ನ್ಯಾಯಾಲಯ ದಯೆ ತೋರಿಸಿ ೧೦ ವರ್ಷಗಳ ಸಶ್ರಮ ಶಿಕ್ಷೆ ವಿಧಿಸುತ್ತದೆ .... ....
(ಕ್ಷೀಣಿಸುವುದು)

(ದಾರುಣವಾದ ಹಿನ್ನೆಲೆಯ ಸಂಗೀತ)

ರೈತ—ಚನ್ನೇಗೌಡ ಎಲ್ಡು ವರ್ಷ ಶಿಕ್ಷೆ ಅನುಭವಿಸಿ ಜೈಲ್ನಾಗೆ ಸತ್ತು ಹೋದ—ರಂಗೇಗೌಡನ ಮನೆಯ ಹೆಸ್ರು ಉಳಿಸಾಕೆ ಒಬ್ರೂ ಇಲ್ದಂಗಾಯ್ತು. ಆದರಿಂದ ರಂಗೇಗೌಡರು ಹೀಗಾಗಿ ಬಿಟ್ರುರು ಅಷ್ಟು ಕಷ್ಟ, ಯಿಸನ, ಮನುಷಂಗೆ ಬರಬಾರ್ದು. ದೇವ್ರೀಗೆ ಕಣ್ಣಿಲ್ಲ.

ಯುವಕ—ಆಯ್ಯೋ ಪಾಪ! ಅವರಿಗೆ ಹೀಗಾಗಬಾರದಿತ್ತು. ಆದರೂ ದೇವರನ್ನು ಅಂದು ಉಪಯೋಗವಿಲ್ಲ ಗೌಡರೇ ಮನುಷ್ಯ ತನ್ನ ನಡತೇನ ತಾನು ತಿದ್ದಿಕೊಳ್ಳದೆ ದೇವರನ್ನು ಬೈದರೇನು ಉಪಯೋಗ? ಇಂಥ ಜನಗಳಿಂದ್ಲೇ ನಮ್ಮ ಹಳ್ಳಿಗಳು ಹಾಳಾಗಿ ರೋದು.

ರೈತ—ಅಷ್ಟೇ ಅಲ್ಲ ಬುದ್ಧಿ. ಈ ಆಸ್ತಿ ವಿಭಾಗ ಮಾಡಬೇಕೂನ್ನೋದ್ರಿಂದ್ಲೇ ಇಂಗೆಲ್ಲಾ ಮನೆಗ್ಳು ಹಾಳಾಗೋದು ಸರ್ಕಾರ ಕಾನೂನು ಮಾಡ್ಬಿಟ್ರೆ ಈ ಜಗಳಕ್ಕೆಲ್ಲಾ ಕಾರಣಾನೇ ಇರಾಕಿಲ್ಲ. ಅಂಗೇ ಸಾರ ಕಾನೂನಾದ್ರೆ ಎಷ್ಟೊ ವ.ನೆ, ಹಳ್ಳಿಗಳು ವ್ಯಾಜ್ಯಕಾದು,

ಕೋರ್ಟಿಗಳಿದು ಆಳಾಗೋದು ತಪ್ತದೆ ಬುದ್ಧಿ.

ಯುವಕ—ನಿಮ್ಮ ಮಾತು ನಿಜ ಗೌಡರೇ. ಅಂಥ ಶಾಸನ ಬರಬೇಕು.

ರೈತ—ಅಷ್ಟೇ ಅಲ್ಲ ಬುದ್ಧಿ ಗ್ರಾಮಾಭಿವೃದ್ಧಿ ಇಲಾಖೆೋರು ಹಳ್ಳ್ಯೋರೆಲ್ಲ ಕಲ್ತು ಯವಸಾಯ ಮಾಡ್ಬೇಕೂಂತರಲ್ಲ. ಅದಕ್ಕೆ ಇಂಗಾದ್ರೆ ಅನ್ಕೂಲ. ಇಲ್ದಿದ್ರೆ, ಆಸ್ತಿ ವಿಭಾಗ ಆಗಿ ಆಗಿ ತಲಾ ಅಂಗೈ ಅಗಲದ ಜಮೀನಾಗ್ತದೆ ಗೌಡ್ರೆ, ಯಾರೂ ವ್ಯವಸಾಯ ಬೇಕಾಗೋಲ್ಲ.

ಯುವಕ—ನಿಮ್ಮ ಮಾತಿನಲ್ಲಿ ಸತ್ಯವಿದೆ ಗೌಡರೇ. ಹಾಗಾಗೋಕಾಲ ಬೇಗ ಬರುತ್ತೆ..........

ರಂಗೇಗೌಡ—(ನಿಧಾನವಾಗಿ ನಗುತ್ತ) ಹಿಡಕೊಳ್ರೋ .. ಹಿಡಕೊಳ್ರೋ ....ಖೂನಿಮಾಡಿದಿಯಾ! ಗಲ್ಲಾ ! ಪಾಲುಬೇಕಾ ಶಂಕರ........ (ಅಳುತ್ತ) ನಂದನವಂಥ ಮನೆ ನರಕ ಆಗೋಯ್ತಲ್ಲ ಶಿವನೆ........ ಹೋದೋರು ಹೋದ್ರು........ನಾನೇನ್ಮಾಡಲಿ........

(ಸಿಟ್ಟು ಸಿರು ಕ್ಷೀಣವಾಗುತ್ತದೆ........ನಗುವಿನೊಂದಿಗೆ
ಉಸಿರಿನ ಗತಿಯಲ್ಲಿ ಸಂಗೀತ ಲೀನ
ವಾಗುತ್ತದೆ.)